بِسْمِ اللهِ الرَّحْمٰنِ الرَّحِيْمِ    نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ    وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 01

ಸಂಚಿಕೆ: 05

# ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ವಾರ್ಷಿಕ ಶುಲ್ಕ ರೂ.500/–

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

13 ಫೆಬ್ರವರಿ 2020, 13 ತಬ್‌ಲೀಗ್ 1399 ಹಿಜರಿ ಶಮ್‌ಸಿ,
18 ಜಮಾದಿಉಸ್ಸಾನಿ 1441 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– ಆಮೀನ್

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

وَلَا تَحْسَبَنَّ الَّذِيْنَ قُتِلُوْا
فِيْ سَبِيْلِ اللّٰهِ اَمْوَاتًا ۭ
بَلْ اَحْيَاۗءٌ عِنْدَ رَبِّهِمْ يُرْزَقُوْنَ ۝

*(ಆಲಿ ಇಮ್ರಾನ್ 170)*

ಅಂದರೆ: ಅಲ್ಲಾಹನ ಮಾರ್ಗದಲ್ಲಿ ಕೊಲ್ಲಲ್ಪಟ್ಟವರು ಮೃತರೆಂದು ನೀವು ಭಾವಿಸಬೇಡಿರಿ. ಅವರು ತಮ್ಮ ಒಡೆಯನ ಬಳಿ ಜೀವಂತರು; ಅವರಿಗೆ ಆಹಾರ ನೀಡಲಾಗುತ್ತದೆ.

# ಹಝ್ರತ್ ಮುಸ್ಲಿಹ್ ಮೌಊದ ರಝಿಯಲ್ಲಾಹು ಅನ್‌ಹು ರವರ ಬಗ್ಗೆ ಭವಿಷ್ಯವಾಣಿ

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:**

**“ಬಇಲ್ಹಾಮಿಲ್ಲಾಹಿ ತಆಲಾ ವ ಇಲಾಮಿಹೀ ಅಝ್ಝ ವಜಲ್ಲ** ಕರುಣಾಮಯಿ ಹಾಗೂ ಗೌರವಾನ್ವಿತ ಹಾಗೂ ಶ್ರೇಷ್ಠ ಮತ್ತು ಎಲ್ಲಾ ವಿಷಯಗಳಲ್ಲಿಯು ಬಲಿಷ್ಠನಾದ ಅಲ್ಲಾಹನು **(ಜಲ್ಲ ಶನುಹೂ ವ ಅಝ್ಝ ಇಸ್‌ಮುಹೂ)** ನನಗೆ ತನ್ನ ದಿವ್ಯವಾಣಿಯ ಮೂಲಕ ಸಂಬೋಧಿಸಿ ಹೀಗೆ ನುಡಿದಿದ್ದಾನೆ: ನಾನು ನಿನಗೆ ನೀನು ನನ್ನೊಂದಿಗೆ ಬೇಡಿಕೊಂಡ ಹಾಗೆ ಒಂದು ಕರುಣೆಯ ಕುರುಹು ನೀಡುವೆನು. ನಾನು ನಿನ್ನ ವಿನಮ್ರತೆಯ ಪ್ರಾರ್ಥನೆಗಳನ್ನು **(ತಝುರ್ರುಆತ್)** ಆಲಿಸಿ ತನ್ನ ಅನುಗ್ರಹದೊಂದಿಗೆ ಸ್ವೀಕೃತಿ ನೀಡಿದೆನು ಮತ್ತು ನಿನ್ನ ಪ್ರಯಾಣವನ್ನು (ಹೊಶ್ಯಾರ್‌ಪುರ ಮತ್ತು ಲುಧ್ಯಾನದ ಪ್ರಯಾಣ) ನಿನಗಾಗಿ ಶುಭಕರಗೊಳಿಸಿರುವೆನು. ಆದ್ದರಿಂದ ದೈವಶಕ್ತಿಯ ಮತ್ತು ಕರುಣೆ ಹಾಗೂ ಸಾಮಿಪ್ಯದ ಕುರುಹು ನಿನಗೆ ನೀಡಲಾಗುತ್ತಿದೆ. ಅನುಗ್ರಹ ಮತ್ತು ಉಪಕಾರದ ಕುರುಹು ನಿನಗೆ ನೀಡಲಾಗುತ್ತಿದೆ ಮತ್ತು ಗೆಲುವು(ಫತಹ್) ಹಾಗೂ ಸಫಲತೆಯ(ಝಫರ್) ಕೀಲಿಗೈ ನಿನಗೆ ಸಿಗುತ್ತಿದೆ. ಎಲೈ ಮುಝಫ್ಫರ್! ನಿನ್ನ ಮೇಲೆ ಶಾಂತಿ ಇರಲಿ. ಅಲ್ಲಾಹನು ಹೀಗೆ ಹೇಳಲು ಕಾರಣ ಜೀವಿಸಲು ಬಯಸುವರು ಮೃತ್ಯುವಿನ ದವಡೆಯಿಂದ ಮುಕ್ತಿ ಪಡೆಯಲಿ ಮತ್ತು ಗೋರಿಗಳಲ್ಲಿ ಹೂತಲ್ಪಟ್ಟವರು ಹೊರ ಬರಲಿ ಮತ್ತು ಇಸ್ಲಾಮ್ ಧರ್ಮದ ಗೌರವ ಮತ್ತು ಅಲ್ಲಾಹನ ದಿವ್ಯವಾಣಿಗಳ(ಪವಿತ್ರ ಖುರ್‌ಆನ್) ಪದವಿ ಜನರ ಮೇಲೆ ಸ್ಪಷ್ಟವಾಗಲಿ. ಹೀಗೆ ಸತ್ಯವು ತನ್ನ ಎಲ್ಲ ಅನುಗ್ರಹಗಳೊಂದಿಗೆ ಬರುವಂತಾಗಲಿ ಹಾಗೂ ಮಿಥ್ಯವೂ ತನ್ನ ಎಲ್ಲ ಅಪಶಕುನದೊಂದಿಗೆ ಪಲಾಯನ ಮಾಡಲಿ. ಹೀಗೆ ಜನರು ತಿಳಿಯುವರು ನಾನು ಎಲ್ಲಾ ಕಾರ್ಯಗಳಲ್ಲೂ ಸರ್ವ ಸಮರ್ಥನಾಗಿದ್ದೇನೆ (ಖಾದಿರ್). ನಾನು ಬಯಸಿದನ್ನೆಲ್ಲ ಮಾಡಬಲ್ಲೆನು ಮತ್ತು ನಾನು ನಿನ್ನೊಂದಿಗಿದ್ದೇನೆ ಎಂದು ಅವರಿಗೆ ಮನವರಿಕೆ ಆಗಲಿ ಮತ್ತು ಯಾರು ಅಲ್ಲಾಹನ ಅಸ್ತಿತ್ವವನ್ನು ನಿರಾಕರಿಸುವರೊ, ಅಲ್ಲಾಹ್ ಮತ್ತು ಅಲ್ಲಾಹನ ಧರ್ಮ, ಅವನ ಗ್ರಂಥ ಮತ್ತು ಅವನ ಪ್ರವಾದಿ ಆದ ರಸೂಲ್ ಸಲಲ್ಲಾಹು ಅಲೈಹಿವಸಲ್ಲಮರನ್ನು ನಿರಾಕರಿಸುತ್ತಾರೆ ಮತ್ತು ಧಿಕ್ಕರಿಸುವ ದೃಷ್ಟಿಯಿಂದ ನೋಡುವರೋ ಅವರಿಗಾಗಿ ಒಂದು ಸ್ಪಷ್ಟವಾದ ಮಾರ್ಗ ದೊರೆಯುವಂತಾಗಲಿ ಮತ್ತು ಅಪರಾಧಿಗಳ ಮಾರ್ಗವು ಬಹಿರಂಗವಾಗಲಿ.

ಆದ್ದರಿಂದ ನಿನಗೆ ಶುಭವಾರ್ತೆ ಇದೆ. ಓರ್ವ ಗೌರವಾನ್ವಿತ ಹಾಗೂ ಪರಿಶುದ್ಧ ಬಾಲಕ ನಿನಗೆ ನೀಡಲಾಗುವುದು. ಓರ್ವ ಪವಿತ್ರ ದಾಸ(ಬಾಲಕ) ನಿನಗೆ ದಯಪಾಲಿಸಲಾಗುವುದು. ಆ ಬಾಲಕನು ನಿನ್ನ ಅಂಶದಿಂದಲೇ (ಬೀಜ) ನಿನ್ನ ವಂಶ ಹಾಗೂ ಜನಾಂಗದಿಂದಾಗುವುದು. ಸುಂದರವಾದ ಮತ್ತು ಪವಿತ್ರ ಬಾಲಕ ನಿಮ್ಮ ಅತಿಥಿಯಾಗಿ ಬರುವನು ಅವನ ಹೆಸರು **ಅನ್‌ಮವಾಯೀಲ್** ಮತ್ತು ಬಶೀರ್ ಸಹ ಆಗಿರುವುದು. ಅವನಿಗೆ ಪರಿಶುದ್ಧ ಆತ್ಮ ನೀಡಲಾಗಿದೆ ಮತ್ತು ಅವನು ಕೊಳಕಿನಿಂದ ಪರಿಶುದ್ಧನಾಗಿದ್ದಾನೆ. ಅವನು ಅಲ್ಲಾಹನ ಪ್ರಕಾಶ ಆಗಿದ್ದಾನೆ. ಆ ಸೌಭಾಗ್ಯನು ಆಕಾಶದಿಂದ ಬರುವನು. ಅಲ್ಲಾಹನ ಕೃಪೆ ಅವನೊಂದಿಗೆ ಇದೆ ಅದು ಅವನೊಂದಿಗೆ ಬರುವುದು. ಅವನ ವ್ಯಕ್ತಿತ್ವವು ಅದ್ಭುತ, ಶ್ರೇಷ್ಠ ಹಾಗೂ ಸಂಪತ್ಭರಿತವಾಗಿರುತ್ತದೆ. ಅವನು ಲೋಕಕ್ಕೆ ಪಾದರ್ಪಣೆ ಮಾಡುವನು ಮತ್ತು ತನ್ನ ಮಸೀಹನ ಆತ್ಮದೊಂದಿಗೆ ಮತ್ತು **‘ರೂಹುಲ್‌ಹಖ್ಖಿನೊಂದಿಗೆ’** ಜಿಬ್ರೀಲ್‌ನ ಅನುಗ್ರಹಗಳಿಂದ ಹಲವರನ್ನು ರೋಗಗಳಿಂದ ಮುಕ್ತಗೊಳಿಸುವನು. ಅವನು **‘ಕಲಿಮತುಲ್ಲಾಹ್’** ಅಲ್ಲಾಹನ ದಿವ್ಯವಾಣಿ ಆಗಿದ್ದಾನೆ ಏಕೆಂದರೆ ಅಲ್ಲಾಹನ ಕರುಣೆ ಮತ್ತು ಮಹಾಸ್ವಾಭಿಮಾನವು ಅವನನ್ನು **ಕಲಿಮ ತಮ್‌ಜೀದಿನ** ಪವಿತ್ರ ಆತ್ಮದೊಂದಿಗೆ ಕಳುಹಿಸಿದ್ದಾನೆ. ಅವನು ಅತ್ಯಂತ ಬುದ್ಧಿವಂತನೂ ಮತ್ತು ವಿವೇಕಶಾಲಿಯು ಆಗಿರುವನು ಮತ್ತು ಹೃದಯವೈಶಾಲ್ಯ ಹೊಂದಿರುವನು ಹಾಗೂ ಲೌಕಿಕ ಹಾಗೂ ಆಂತರಿಕ ಜ್ಞಾನದಿಂದ ಪರಿಪೂರ್ಣನಾಗಿರುವನು. ಅವನು ಮೂರನ್ನು ನಾಲ್ಕು ಮಾಡುವನಾಗಿರುವನು (ಇದರ ಅರ್ಥ ತಿಳಿದುಬರಲಿಲ್ಲ) ದೊಶುಂಬ(ಸೋಮವಾರ) ಶುಭಕರ ದೋಶುಂಬ(ಸೋಮವಾರ)ವಾಗಿದೆ. ಆತ್ಮೀಯ ಮಗು ಪ್ರೀಯ ಮಗು **ಮಝ್‌ಹರುಲ್ ಅವ್ವಲಿ ವಲ್ ಆಖಿರೆ– ಮಝ್‌ಹರುಲ್ ಹಖ್ಖೆ ವಲ್‌ಅಲಾಎ– ಕಅನ್ನಲ್ಲಹ ನಝಲ ಮಿನಸ್ಸಮಾಯಿ.** ಅವನ ಆಗಮನವೂ ಬಹಳ ಅನುಗ್ರಹದಾಯಕವಾಗಿದೆ ಮತ್ತು ಅಲ್ಲಾಹನ ಪ್ರತಾಪ ಕಾಣಲು ಕಾರಣವಾಗಿದೆ. ಪ್ರಕಾಶವು ಆಗಮಿಸುತ್ತದೆ ಪ್ರಕಾಶವ ನೋಡಿರಿ. ಅವನನ್ನು ಅಲ್ಲಾಹನು ತನ್ನ ಸಂಪ್ರೀತಿಯ ಸುಗಂಧದಿಂದ ಸಮ್ಮಿಲಿತಗೊಳಿಸಿದ್ದಾನೆ. ನಾವು ಅವನಲ್ಲಿ ತನ್ನ ಆತ್ಮವನ್ನು ಹಾಕುವೆನು, ಅಲ್ಲಾಹನ ನೆರಳು ಅವನ ಶಿರದ ಮೇಲೆ ಇರುವುದು. ಅವನು ಅತಿ ಅತಿ ವೇಗವಾಗಿ ಬೆಳೆಯುವನು ಮತ್ತು ಕೈದಿಗಳನ್ನು ಬಿಡುಗಡಗೊಳಿಸಲು ಕಾರಣವಾಗುವನು ಮತ್ತು ಭೂಮಿಯ ಅಂಚುಗಳವರೆಗೆ ಖ್ಯಾತಿ ಪಡೆಯುವನು ಹಾಗೂ ಜನಾಂಗಗಳು ಇವನಿಂದ ಅನುಗ್ರಹ ಪಡೆಯುವರು. ಆಗ ತನ್ನ ಆತ್ಮ ಬಿಂದು ಆಕಾಶದೆಡೆ ಎತ್ತಲ್ಪಡುವುದು **ವಕಾನ ಅಮ್‌ರಮ್ಮಖ್ಝೀಯ.”**

**(ಮಜ್‌ಮೂಆ ಇಶ್ತಿಹಾರಾತ್, ಸಂಪುಟ–1, ಪುಟ–100, ಇಶ್ತಿಹಾರ್ 20 ಫೆಬ್ರವರಿ 1886)**

# ಜುಮುಅ ಖುತ್‌ಬ

**ಎಲ್ಲೈ ಅನ್‌ಸಾರ್‌ಗಳೇ! ಜನರು ಆಡು ಕುರಿಗಳನ್ನೂ ಒಂಟೆಗಳನ್ನೂ ತೆಗೆದುಕೊಂಡು ಹೋಗುತ್ತಿರುವಾಗ ನೀವು ಅಲ್ಲಾಹನ ರಸೂಲರನ್ನು ತೆಗೆದುಕೊಂಡು ನಿಮ್ಮ ಮನೆಗಳಿಗೆ ಮರಳಿ ಹೋಗುತ್ತಿರುವಿರಿ ಎಂಬ ಬಗ್ಗೆ ನಿಮಗೆ ಸಂತೋಷವಿಲ್ಲವೇ? ಯಾರ ಕೈಯಲ್ಲಿ ಮುಹಮ್ಮದರ ಪ್ರಾಣವಿದೆಯೋ ಅವನ ಹೆಸರಲ್ಲಿ ಆಣೆ ಹಾಕಿ ಹೇಳುತ್ತೇನೆ ನಾನು ಹಿಜ್‌ರತ್ ಮಾಡದಿರುತ್ತಿದ್ದರೆ ನಾನು ಅನ್‌ಸಾರ್‌ಗೆ ಸೇರಿದ ಒಬ್ಬ ಮಾತ್ರವಾಗುತ್ತಿದ್ದೆನು. ಅನಂತರ ಪ್ರಾರ್ಥಿಸಿದರು: ಓ ಅಲ್ಲಾಹ್, ಅನ್‌ಸಾರ್‌ಗಳ ಮೇಲೆ ಕಾರುಣ್ಯದೋರು, ಅನ್‌ಸಾರ್‌ಗಳ ಮಕ್ಕಳ ಮೇಲೆ ಕಾರುಣ್ಯದೋರು, ಅನ್‌ಸಾರ್‌ಗಳ ಮಕ್ಕಳ ಮಕ್ಕಳ ಮೇಲೆಯೂ ಕಾರುಣ್ಯದೋರು.**

---

**ನಿಷ್ಠೆ ಮತ್ತು ಆತ್ಮೀಯತೆಯ ಮೂರ್ತಿರೂಪರಾಗಿದ್ದ ಬದರಿ ಸಹಾಬಿಯಾದ ಹಝ್ರತ್ ಸಅದ್ ಬಿನ್ ಉಬಾದ ರಝಿಯಲ್ಲಾಹು ಅನ್ಹುರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಮಸ್ಜಿದ್ ಮುಬಾರಕ್'** ಇಸ್ಲಾಮಬಾದ್ ಟೆಲ್‌ಫೋರ್ಡ್ ಯು.ಕೆ ನಲ್ಲಿ **10–01–2020** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ - اَلرَّحْمٰنِ الرَّحِيْمِ - مٰلِكِ يَوْمِ الدِّيْنِ -

اِيَّاكَ نَعْبُدُ وَاِيَّاكَ نَسْتَعِيْنُ - اِهْدِنَا الصِّرَاطَ الْمُسْتَقِيْمَ -

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ -

ಕಳೆದ ವಾರದ ಖುತ್‌ಬದಲ್ಲಿ ವಕ್‌ಫೇ ಜದೀದಿನ ಹೊಸ ವರ್ಷದ ಪ್ರಕಟಣೆಯೊಂದಿಗೆ ವಿವಿಧ ದೇಶಗಳ ಸ್ಥಾನದ ಬಗ್ಗೆ ನಾನು ಪ್ರಸ್ತಾಪಿಸಿದ್ದೆನು. ಯು.ಕೆ. ಜಮಾಅತ್‌ಗಳಲ್ಲಿ ಇಸ್ಲಾಮಾಬಾದ್ ಜಮಾಅತ್ ಪ್ರಥಮ ಸ್ಥಾನದಲ್ಲಿದೆ ಎಂದು ಹೇಳಿದ್ದೆ. ಆದರೆ ಅದು ಸರಿಯಾಗಿರಲಿಲ್ಲ. ಪ್ರಥಮ ಸ್ಥಾನ ಆಲ್ಡರ್‌ಶಾಟ್ ಜಮಾಅತ್‌ಗೆ ಮತ್ತು ಇಸ್ಲಾಮಾಬಾದ್ ಜಮಾಅತ್‌ಗೆ ದ್ವಿತಿಯ ಸ್ಥಾನವಿದೆ. ಇದು ಹೇಗೆ ಆಯಿತು? ಅಥವಾ ಏನಾಯಿತು? ಎಂಬುದರ ಬಗ್ಗೆ ವಿವರಣೆಗೆ ನಾನು ಹೋಗುವುದಿಲ್ಲ ಆದೆರಡರ ಮೊದಲು ನೀಡಿದ ಹೇಳಿಕೆಯನ್ನು ಸರಿಪಡಿಸುವ ಆವಶ್ಯಕತೆ ಇರುವ ಕಾರಣ ಈ ವಿಷಯ ಮೊದಲು ಪ್ರಸ್ತಾಪಿಸಿದೆ.

ಆಲ್ಡರ್‌ಶಾಟ್ ಜಮಾಅತ್ ಮಾಶಾಅಲ್ಲಾಹ್ ಬಹಳ ದೊಡ್ಡ ತ್ಯಾಗ ಮಾಡುತ್ತಿದೆ. ಅಲ್ಲಿನ ಸದರ್ ಲಜ್‌ನ, ಕೆಲವು ಲಜ್‌ನ ಸದಸ್ಯೆಯರು ನೀಡಿದ ಅಸಾಧಾರಣ ತ್ಯಾಗದ ಬಗ್ಗೆ ಪ್ರಸ್ತಾಪಿಸಿದ್ದಾರೆ. ಅವರ ತ್ಯಾಗ ಮನೋಭಾವ ಅನುಕರಣೀಯವಾಗಿದೆ. ಅಲ್ಲಾಹನು ಅವರ ಸಂಪತ್ತಿನಲ್ಲೂ ಸಂತಾನಗಳಲ್ಲೂ ಅನುಗ್ರಹ ನೀಡಲಿ. ನಾನು ಕಳೆದ ವಾರದ ಖುತ್‌ಬದಲ್ಲಿ ಸಾಮಾನ್ಯವಾಗಿ ಬಡವರು ಮತ್ತು ಬಡ ದೇಶಗಳ ಜನರು ಮಾಡುವ ತ್ಯಾಗದ ಬಗ್ಗೆ ವಿವರಿಸಿದ್ದೆ. ಶ್ರೀಮಂತರಲ್ಲೂ ಇಂತಹ ಭಾವನೆ ತಲೆದೋರಲಿ ಎಂದು ಉದ್ದೇಶಿಸಿದ್ದೆ. ಅವರು ಸಹ ತ್ಯಾಗದಬಗ್ಗೆ ಮನಗಾಣಲಿ ಎಂದು ಬಯಸಿದ್ದೆ. ಅಲ್ಲಾಹನ ಅನುಗ್ರಹದಿಂದ ಅಭಿವೃದ್ಧಿ ಹೊಂದಿದ ದೇಶಗಳಲ್ಲಿಯೂ ಬಹಳ ಜನರು ಹೇಗಿದ್ದಾರೆಂದರೆ, ಅವರು ತಮ್ಮ ಲೌಕಿಕ ಆವಶ್ಯಕತೆಗಳನ್ನು ಹಿಂದೆ ಸರಿಸಿ ಬಲಿದಾನ ನೀಡುತ್ತಾ ಇರುತ್ತಾರೆ. ಏನೇ ಇರಲಿ ನಾನು ಹೇಳಿದ ಹಾಗೆ ಬ್ರಿಟನ್ನಿನ ಜಮಾಅತ್ತುಗಳಲ್ಲಿ ವಕ್ಫೇ ಜದೀದಿನ ಚಂದದಲ್ಲಿ ಆಲ್ಡರ್‌ಶಾಟ್‌ನ ಜಮಾಅತ್ ಮೊದಲನೇಯ ಸ್ಥಾನದಲ್ಲಿದೆ.

ಈಗ ನಾನು ಇಂದಿನ ಖುತ್‌ಬದಲ್ಲಿಯೂ ಬದರಿ ಸಹಾಬರ ಬಗ್ಗೆ ಪ್ರಸ್ತಾಪಿಸುವೆನು. ಕಳೆದ ವಾರದ ಹಿಂದಿನ ವಾರದ ಖುತ್‌ಬದಲ್ಲಿ ಹಝ್ರತ್ ಸಅದ್ ಬಿನ್ ಉಬಾದ(ರ) ಅವರ ಬಗ್ಗೆ ವಿವರಿಸುತ್ತಿದ್ದೆ. ಅವರಿಗೆ ಸಂಬಂಧಿಸಿ ಕೆಲವು ವಿವರಣೆಗಳು ಬಾಕಿಯಾಗಿದ್ದುವು. ಇಂದು ಆ ವಿವರಣೆ ಮುಂದುವರಿಸುವೆನು. ಆದರೆ ಮೊದಲು ಕಳೆದ ಖುತ್‌ಬದಲ್ಲಿ ನಾನು ಪ್ರಸ್ತಾಪಿಸಿದ ಒಂದು ಉಲ್ಲೇಖವನ್ನು ಸರಿಪಡಿಸುವೆನು. ಇದರ ಬಗ್ಗೆ ನನಗೂ ಸಂಶಯವಿತ್ತು ಆದರೆ ನಾನು ಅದರ ಬಗ್ಗೆ ಹೇಳಿರಲಿಲ್ಲ ಆದರೆ ರಿಸೆರ್ಚ್ ಸೆಲ್‌ನ ಸಿಬ್ಬಂಧಿ ವರ್ಗದವರಿಗೆ ಇದರ ಅರಿವಾದಾಗ ಅವರು ಇದರ ಸರಿಯಾದ ಉಲ್ಲೇಖ ಕಳುಹಿಸಿದರು ಹೀಗೆ ನನಗಿದ್ದ ಸಂಶಯವು ದೂರವಾಯಿತು ಮತ್ತು ನನ್ನ ತಪ್ಪಿನ ಅರಿವೂ ದೂರವಾಯಿತು. ಮಾಶಾಅಲ್ಲಾಹ್ ಇವರು ತಮ್ಮ ಕಡೆಯಿಂದ ಬಹಳ ಪರಿಶ್ರಮ ವಹಿಸುತ್ತಾರೆ ಹಾಗೂ ಇಂತಹ ತಪ್ಪಾಗಬಾರದು ಎಂದು ಬಹಳ ಪ್ರಯತ್ನಿಸುತ್ತಾರೆ. ಆದರೆ ಕೆಲವೊಮ್ಮೆ ಅವಸರದ ಕಾರಣ ಅಥವಾ ಅರಬಿ ಭಾಷೆಯ ಅನುವಾದದಲ್ಲಿ ತಪ್ಪಾದಾಗ ಇಂತಹ ತಪ್ಪಾಗುವ ಸಾಧ್ಯತೆ ಇರುತ್ತದೆ. ಹೀಗೆ ಮೊದಲು ನಾನು ಅವರು ಕಳುಹಿಸಿರುವಂತಹ ಉಲ್ಲೇಖವನ್ನು ಪ್ರಸ್ತಾಪಿಸುವೆನು ತದನಂತರ ಉಳಿದ ಭಾಗ ಪ್ರಸ್ತಾಪಿಸಲಾಗುವುದು.

ಡಿಸೆಂಬರ್ 27ರ ಖುತ್‌ಬದಲ್ಲಿ ನಾನು ಹೀಗೆ ಹೇಳಿದ್ದೆ, ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮಕ್ಕದಿಂದ ಹಿಜ್‌ರತ್ ಮಾಡಿ ಬಂದ ತುಲೈಬ್ ಬಿನ್ ಉಮ್ಮೈರ್ ಮತ್ತು ಹಝ್ರತ್ ಸಅದ್ ಮಧ್ಯೆ ಸಹೋದರ ಸಂಬಂಧ ಸ್ಥಾಪಿಸಿದ್ದರೆಂದು ನಾನು ಹೇಳಿದ್ದೆ. ಇಬ್ನು ಇಸ್‌ಹಾಖ್ ಪ್ರಕಾರ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಅಬೂಝರ್ ಗಫ್ಫಾರಿ ಮತ್ತು ಹಝ್ರತ್ ಸಅದ್ ಬಿನ್ ಉಬಾದ ಮಧ್ಯೆ ಸಹೋದರ ಸಂಬಂಧ ಸ್ಥಾಪಿಸಿದ್ದರು. ಆದರೆ ಕೆಲವರಿಗೆ ಈ ವಿಷಯದ ಬಗ್ಗೆ ಭಿನ್ನಾಭಿಪ್ರಾಯವಿದೆ. ಒಟ್ಟಾರೆ ಹೇಳುವುದಾದರೆ, ಮೇಲಿನಂತೆ ಹೇಳಿದುದು ಸರಿಯಾದುದಲ್ಲ. ಸಹೋದರ ಸಂಬಂಧ ಸ್ಥಾಪನೆ ಬಗ್ಗೆ ಹೇಳಿದುದು ಹಝ್ರತ್ ಮುಂಝಿರ್ ಬಿನ್ ಅಮರ್ ಬಿನ್ ಹನೀಸ್‌ರಿಗೆ ಸಂಬಂಧಿಸಿ ಆಗಿದೆ. (ಉಸುದುಲ್ ಗಾಬ ಸಂಪುಟ–5, ಪುಟ–258, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 2003)

ರಿಸೆರ್ಚ್ ಸೆಲ್‌ನವರು ಬರೆಯುತ್ತಾರೆ ಯಾವ ಪುಸ್ತಕದಿಂದ ಈ ಉಲ್ಲೇಖವನ್ನು ಪಡೆಯಲಾಗಿತ್ತೋ ಅದರಲ್ಲಿ ಅವರೊಂದಿಗೆ ಹಝ್ರತ್ ಸಅದ್ ಬಿನ್ ಉಬಾದರ ಬಗ್ಗೆಯೂ ಪ್ರಸ್ತಾಪಿಸಲಾಗಿತ್ತು. ರೀಸರ್ಚ್ ಸೆಲ್‌ಗೆ ಸೇರಿದವರು ತಪ್ಪಾಗಿ ಈ ವಿಷಯ ಹಝ್ರತ್ ಸಅದ್‌ರೊಂದಿಗೆ ಸೇರಿಸಿ ಬರೆದರು. ಹಝ್ರತ್ ಮುಂಝಿರ್ ಬಿನ್ ಅಮರ್‌ರ ಸಹೋದರ ಸಂಬಂಧದ ಬಗ್ಗೆ ಕಳೆದ ವರ್ಷ ಜನವರಿ ದಿನಾಂಕ 25ರ ಖುತ್‌ಬದಲ್ಲಿ ನಾನು ವಿವರಿಸಿದ್ದೇನೆ. ಇದು ಒಂದು ತಿದ್ದುಪಡಿ ಆಗಿತ್ತು. ಈಗ ಮುಂದಿನ ವಿವರಗಳು ಹೀಗಿವೆ ಖಂದಕ್ ಯುದ್ಧದ ಸಂದರ್ಭದಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಯೋಚಿಸಿದರು: ಐಈನ ಬಿನ್ ಹಸನ್ ಎಂಬವನ ಜೊತೆಯಲ್ಲಿ ಗತ್‌ಫಾನ್ ಗೋತ್ರದ ಜನರು ಮದೀನಕ್ಕೆ ಮುತ್ತಿಗೆ ಹಾಕಿದವರಲ್ಲಿ ಸೇರಿದ್ದಾರೆ. ಐಈನನು ತನ್ನ ಜೊತೆಗಾರರನ್ನು ಮರಳಿ ಕರೆದುಕೊಂಡು ಹೋಗುವುದಾದರೆ ಹಾಗೂ ಇತರರನ್ನು ಬಿಟ್ಟು ಬಿಡುವುದಾದರೆ ಅವನಿಗೆ ಮದೀನದಲ್ಲಿ ಉತ್ಪಾದಿಸಲ್ಪಡುವ ಖರ್ಜೂರದ ಮೂರನೆ ಒಂದು ಭಾಗ ಕೊಡಲಾಗುವುದು. ಈ ಯೋಚನೆ ಬಗ್ಗೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕೇವಲ ಹಝ್ರತ್ ಸಅದ್ ಬಿನ್ ಮುಆಝ್ ಮತ್ತು ಹಝ್ರತ್ ಸಅದ್ ಬಿನ್ ಉಬಾದರೊಂದಿಗೆ ಸಲಹೆ ಕೇಳಿದರು. ಆಗ ಹಝ್ರತ್ ಸಅದ್ ಬಿನ್ ಮುಆಝ್ ಮತ್ತು ಹಝ್ರತ್ ಸಅದ್ ಬಿನ್ ಉಬಾದ ಒಂದೇ ಸ್ವರದಲ್ಲಿ ಹೇಳಿದರು: ಯಾ ರಸೂಲುಲ್ಲಾಹ್ ತಮಗೆ ಅಲ್ಲಾಹನಿಂದ ವಹೀ ಲಭಿಸಿದ್ದರೆ ನಾವು ತಲೆಬಾಗಿ ಸಮ್ಮತಿಸುತ್ತೇವೆ. ಅಲ್ಲಾಹನಾಣೆ! ನಾವು ಅವರಿಗೆ ಖಡ್ಗ ಪ್ರಹಾರದ ಹೊರತು ಬೇರೇನೂ ನೀಡಲಾರೆವು. ಅಂದರೆ ನಾವು ನಮ್ಮ ಹಕ್ಕು ಪಡೆಯುವೆವು ಅಥವಾ ಅವರು ತಮ್ಮ ಸಂಕಲ್ಪ ಮುರಿದ ಕಾರಣದಿಂದ ಅವರಿಗೆ ತಕ್ಕಂತೆ ಶಿಕ್ಷೆ ನೀಡುವೆವು ಎಂದರು. ಆಗ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮ್ ಹೀಗೆ ನುಡಿದರು: ನನಗೆ

ಇದರ ಬಗ್ಗೆ ಅಲ್ಲಾಹನಿಂದ ವಹೀ ಏನೂ ಲಭಿಸಿಲ್ಲ. ಇದು ನನ್ನ ಸ್ವಂತ ಅಭಿಪ್ರಯವಾಗಿತ್ತು ನಾನು ತಮ್ಮ ಸಲಹೆ ರೂಪದಲ್ಲಿ ನಿಮ್ಮ ಅಭಿಪ್ರಾಯ ಕೇಳುತ್ತಿದ್ದೇನೆ. ಆಗ ಅವರಿಬ್ಬರೂ ಹೇಳಿದರು: ಹಾಗಾದರೆ ನಮ್ಮ ಸಲಹೆ ಏನೆಂದರೆ, ನಾವು ಬಹುದೇವಾರಾಧಕರಾಗಿದ್ದಾಗ ಯಾವುದೇ ಶತ್ರುವಿಗೆ ಏನನ್ನೂ ನೀಡಿರಲಿಲ್ಲ. ಆದರೆ ಈಗ ನಾವು ಮುಸ್ಲಿಮರಾಗಿರುವಾಗ ಏಕೆ ನೀಡಬೇಕು? ಈಗ ನಮಗೆ ಅಲ್ಲಾಹನು ನಿಮ್ಮ ಮೂಲಕ ಸನ್ಮಾರ್ಗ ತೋರಿಸಿದ್ದಾನೆ. ಇದಕ್ಕೆ ಹುಝೂರ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಅವರ ಈ ಉತ್ತರವನ್ನು ಕೇಳಿ ಬಹಳ ಸಂತೋಷಗೊಂಡರು. (ಅಸದುಲ್‌ಗಾಬ ಸಂಪುಟ–2, ಪುಟ–442, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2003)

ಈ ವಿಷಯವನ್ನು ವಿವರಿಸುತ್ತಾ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬರು ಹೀಗೆ ಬರೆಯುತ್ತಾರೆ: ಆ ದಿನಗಳು ಮುಸ್ಲಿಮರಿಗೆ ಅತ್ಯಂತ ಕಷ್ಟ ಮತ್ತು ಗಾಬರಿಪಡಿಸುವ ದಿನಗಳಾಗಿದ್ದುವು. ಅವಿಶ್ವಾಸಿಗಳ ಮುತ್ತಿಗೆ ದೀರ್ಘಕಾಲ ಮುಂದುವರಿದಾಗ ಮುಸ್ಲಿಮರ ಶಕ್ತಿ ಕುಂದುತ್ತಾ ಇತ್ತು. ಅವರ ಹೃದಯ ವಿಶ್ವಾಸ ಮತ್ತು ನಿಷ್ಠೆಯಿಂದ ಭರಿತವಾಗಿದ್ದರೂ ಅವರ ಶರೀರ ಭೌತಿಕ ನಿಯಮಗಳಿಗೆ ಅಧೀನವಾಗಿ ಬಲಹೀನವಾಗುತ್ತಿತ್ತು. ಸಾಕಷ್ಟು ಆಹಾರ ಸಹ ಲಭಿಸುತ್ತಿರಲಿಲ್ಲ. ಆದುದರಿಂದ ಅವರು ಬಳಲಿಕೆ ಅನುಭವಿಸುತ್ತಾ ಇದ್ದರು. ಇದು ಶರೀರದ ಸಹಜವಾದ ಪ್ರತಿಕ್ರಿಯೆ ಆಗಿದೆ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಈ ಸ್ಥಿತಿಯನ್ನು ನೋಡಿದಾಗ ಅನ್‌ಸಾರ್‌ಗಳ ಪ್ರಮುಖರಾದ ಸಅದ್ ಬಿನ್ ಮುಆಝ್ ಮತ್ತು ಸಅದ್ ಬನ್ ಉಬಾದರನ್ನು ಕರೆದು ಅವರೊಂದಿಗೆ ಸ್ಥಿತಿಗತಿಗಳನ್ನು ವಿವರಿಸಿದರು ಮತ್ತು ಇಂತಹ ಪರಿಸ್ಥಿತಿಯಲ್ಲಿ ನಾವೇನು ಮಾಡಬೇಕು ಎಂದು ಸಲಹೆ ಕೇಳಿದರು. ನೀವು ಇಚ್ಛಿಸುವುದಾದರೆ ಹೀಗೆ ಮಾಡಬಹುದು. ಗತ್‌ಫಾನ್ ಗೋತ್ರದವರಿಗೆ ಮದೀನದ ಉತ್ಪಾದನೆಯ ಒಂದು ಭಾಗ ನೀಡಿ ಈ ಯುದ್ಧ ನಡೆಯದಂತೆ ಮಾಡಬಹುದು. ಆಗ ಹಝ್ರತ್ ಸಅದ್ ಬಿನ್ ಮುಆಝ್ ಮತ್ತು ಹಝ್ರತ್ ಸಅದ್ ಬಿನ್ ಉಬಾದ ಒಂದೇ ಸ್ವರದಲ್ಲಿ ಹೇಳಿದರು: ಯಾ ರಸೂಲುಲ್ಲಾಹ್ ತಮಗೆ ಅಲ್ಲಾಹನಿಂದ ವಹೀ ಲಭಿಸಿದ್ದರೆ ನಾವು ತಲೆಬಾಗಿ ಸಮ್ಮತಿಸುತ್ತೇವೆ. ತಾವು ತಮ್ಮ ಅಭಿಪ್ರಾಯ ಪ್ರಕಾರ ಸಂತೋಷದಿಂದ ವರ್ತಿಸಿರಿ. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ನನಗೆ ಇದರ ಬಗ್ಗೆ ಅಲ್ಲಾಹನಿಂದ ವಹೀ ಏನೂ ಲಭಿಸಿಲ್ಲ. ನಾನು ತಮ್ಮ ಕಷ್ಟದ ಕಾರಣ ಸಲಹೆ ರೂಪದಲ್ಲಿ ನಿಮ್ಮ ಅಭಿಪ್ರಾಯ ಕೇಳುತ್ತಿದ್ದೇನೆ. ಆಗ ಅವರಿಬ್ಬರೂ ಹೇಳಿದರು: ಹಾಗಾದರೆ ನಮ್ಮ ಸಲಹೆ ಏನೆಂದರೆ, ನಾವು ಬಹುದೇವಾರಾಧಕರಾಗಿದ್ದಾಗ ಯಾವುದೇ ಶತ್ರುವಿಗೆ ಏನನ್ನೂ ನೀಡಿರಲಿಲ್ಲ. ಈಗ ನಾವು ಮುಸ್ಲಿಮರಾಗಿರುವಾಗ ಯಾಕಾಗಿ ಕೊಡಬೇಕು? ಅಲ್ಲಾಹನಾಣೆ! ನಾವು ಅವರಿಗೆ ಖಡ್ಗ ಪ್ರಹಾರದ ಹೊರತು ಬೇರೇನೂ ನೀಡಲಾರೆವು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅನ್‌ಸಾರ್‌ಗಳ ಬಗ್ಗೆಯೇ ಚಿಂತೆ ಇತ್ತು. ಅವರು ಮದೀನದ ಮೂಲ ನಿವಾಸಿಗಳಾದ ಕಾರಣ ಅವರ ಮನೋಭಾವ ಹೇಗಿದೆ ಎಂದು ತಿಳಿದುಕೊಳ್ಳಲು ಅವರು ಬಯಸಿದ್ದರು. ಅವರು ಕಷ್ಟಗಳಿಂದ ಆತಂಕಗೊಂಡಿರುವರೋ ಎಂದು ತಿಳಿಯಲು ಮತ್ತು ಅವರಿಗೆ ಸಮಾಧಾನವಾಗುವಂತೆ ಮಾಡುವುದು ಅವರ ಉದ್ದೇಶವಾಗಿತ್ತು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸಂತೋಷದಿಂದ ಅವರ ಸಲಹೆ ಅಂಗೀಕರಿಸಿದರು. ಅನಂತರ ಯುದ್ಧ ಜಾರಿಯಾಯಿತು. (ಸೀರತ್ ಖಾತಮನ್ನಬೀಯೀನ್(ಸ), ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೆಬ್ ಎಂ.ಎ, ಪುಟ–589–590)

ಖಂದಕ್ ಯುದ್ಧದ ಪರಿಸ್ಥಿತಿ ವಿವರಿಸುತ್ತಾ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೆಬ್ ತಮ್ಮ ಗ್ರಂಥದಲ್ಲಿ ಬನೂ ಖರೀಝು ಗೋತ್ರದ ದ್ರೋಹದ ಬಗ್ಗೆ ಬರೆಯುತ್ತಾರೆ:

"(ಖಂದಕ್ ಯುದ್ದದ ಸಂದರ್ಭದಲ್ಲಿ) ಅಬೂ ಸುಫ್‌ಯಾನ್ ಹೀಗೆ ಒಂದು ಉಪಾಯ ಮಾಡಿದನು. ಬನೂ ನಝೀರ್ ಎಂಬ ಯಹೂದಿ ಗೋತ್ರದ ಮುಖಂಡ ಹುಯ್ಯ್ ಬಿನ್ ಅಖ್‌ತಬ್‌ನೊಂದಿಗೆ ಹೇಳಿದನು: ಅವನು ಬನೂ ಖುರೈಝುರ ಕೋಟೆಯ ಬಳಿಗೆ ಹೋಗಿ ಅಲ್ಲಿ ಅವರ ಮುಖಂಡ ಕಅಬ್ ಬಿನ್ ಅಸದ್‌ನೊಂದಿಗೆ ಸೇರಿ ಬನೂ ಖುರೈಝು ಗೋತ್ರದವರನ್ನು ತಮ್ಮೊಂದಿಗೆ ಸೇರಿಸಲು ಪ್ರಯತ್ನ ಮಾಡಬೇಕು. ಹಾಗೆ ಹುಯ್ಯ್ ಬಿನ್ ಅಖ್‌ತಬ್ ಸಂದರ್ಭ ದೊರೆತಾಗ ಕಅಬನ ಮನೆಗೆ ಹೋಗಿ ಅವನನ್ನು ಭೇಟಿಯಾದನು. ಆರಂಭದಲ್ಲಿ ಕಅಬ್ ಅವನ ಮಾತನ್ನು ಒಪ್ಪಲಿಲ್ಲ. ಅವನು ಹೇಳಿದನು: ಮುಹಮ್ಮದ್‌ನೊಂದಿಗೆ ನಮ್ಮ ಒಪ್ಪಂದವಿದೆ. ಮುಹಮ್ಮದ್ ಯಾವಾಗಲೂ ತನ್ನ ಒಪ್ಪಂದಕ್ಕೆ ಬದ್ಧನಾಗಿದ್ದಾರೆ. ಆದುದರಿಂದ ಅವರ ವಿರುದ್ಧ ವಿದ್ರೋಹ ಮಾಡಲಾರೆ. ಆದರೆ ಹುಯ್ಯ್ ಹಚ್ಚಹಸುರಾದ ತೋಟದ ಲಾಲಸೆ ನೀಡಿದನು. ಇಸ್ಲಾಮ್ ಬೇಗನೆ ನಾಶವಾಗಲಿದೆ ಎಂದು ದೃಢವಾಗುವಂತೆ ವಿವರಿಸಿ ಹೇಳಿದನು. ಕೊನೆಗೆ ಕಅಬ್ ಅವನ ಮಾತನ್ನು ಒಪ್ಪಿದಾಗ ಬನೂ ಖರೀಝುದ ಬಲ ಇನ್ನು ಹೆಚ್ಚಾಯಿತು." ಲೌಕಿಕವಾಗಿ ಅವರು ಬಹಳ ಬಲಿಷ್ಠವಾಗಿದ್ದರು. ಈ ಅಪಾಯಕರ ವಿದ್ರೋಹದ ಬಗ್ಗೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ತಿಳಿದಾಗ ಅವರು ಎರಡು ಮೂರು ಸಾರಿ ರಹಸ್ಯವಾಗಿ ಝುಬೈರ್ ಬಿನ್ ಅಲ್‌ಅನಾಮ್‌ರನ್ನು ಸ್ಥಿತಿಗತಿಗಳು ತಿಳಿಯಲು ಕಳುಹಿಸಿದರು. ಅನಂತರ ಹಝ್ರತ್ ಸಅದ್ ಬಿನ್ ಮುಆಝ್ ಮತ್ತು ಸಅದ್ ಬಿನ್ ಉಬಾದರನ್ನು ಮತ್ತು ಬೇರೆ ಕೆಲವು ಪ್ರಭಾವಿ ಸಹಾಬರನ್ನು ತನ್ನ ಪ್ರತಿನಿಧಿಗಳಾಗಿ ನೇಮಿಸಿ ಬನೂ ಖುರೈಝು ಗೋತ್ರದವರ ಬಳಿಗೆ ಕಳುಹಿಸಿದರು. ಈ ಜನರು ಬನೂ ಖುರೈಝುರ ವಾಸ ಸ್ಥಳಗಳಿಗೆ ತಲಪಿ ಬನೂ ಖುರೈಝುರ ಮುಖಂಡನ ಸಮೀಪಕ್ಕೆ ಹೋದಾಗ ದುರ್ಭಾಗ್ಯವಂತನಾದ ಅವನು ಅಹಂಭಾವದಿಂದ ಮಾತನಾಡಿದನು. ಆ ಗೋತ್ರದ ಜನರು ಸಹ ಕೋಪದಿಂದ ಮಾತನಾಡಿದರು. ಮುಹಮ್ಮದ್ ಮತ್ತು ನಮ್ಮ ಮಧ್ಯೆ ಯಾವುದೇ ಒಪ್ಪಂದವಿಲ್ಲ ನೀವು ಹೋಗಿರಿ ಎಂದು ಹೇಳಿದರು. ಸಹಾಬರು ಆ ಮಾತು ಆಲಿಸಿ ಅಲ್ಲಿಂದ ಹೊರಟು ಬಂದರು. ಸಅದ್ ಬಿನ್ ಮುಆಝ್ ಮತ್ತು ಸಅದ್ ಬಿನ್ ಉಬಾದ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಈ ವಿಷಯವೆಲ್ಲಾ ತಿಳಿಸಿದರು. (ಸೀರತ್ ಖಾತಮನ್ನಬೀಯೀನ್(ಸ), ಪುಟ–584–585)

ಬನೂ ಖುರೈಝುರ ವಿರುದ್ಧ ಯುದ್ಧದ ಸಂದರ್ಭದಲ್ಲಿ ಹಝ್ರತ್ ಸಅದ್ ಬಿನ್ ಉಬಾದ ಅನೇಕ ಒಂಟೆಗಳ ಮೇಲೆ ಖರ್ಜೂರವನ್ನು ಹೇರಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಮತ್ತು ಮುಸ್ಲಿಮರಿಗೆ ಕಳುಹಿಸಿದರು. ಖರ್ಜೂರವೇ ಆಗ ಅವರ ಆಹಾರವಾಗಿತ್ತು. ಆ ಸಂದರ್ಭದಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಖರ್ಜೂರ ಎಷ್ಟು ಉತ್ತಮ ಆಹಾರವಾಗಿದೆ ಎಂದು. (ಸಬ್‌ಲುಲ್ ಹುದಾ ವರ್‍ರಶಾದ್ ಸಂಪುಟ–5, ಪುಟ–6, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 1993)

ಮೌತ ಯುದ್ಧವು ಜಮಾದಿಉಲ್ ಅವ್ವಲ್ 8 ಹಿಜರಿಯಲ್ಲಿ ನಡೆಯಿತು. ಈ ಯುದ್ಧದಲ್ಲಿ ಹಝ್ರತ್ ಝೈದ್(ರ) ಶಹೀದ್ ಆದಾಗ ಹಝ್ರತ್ ರಸೂಲ್ ಸಲಲ್ಲಾಹು ಅಲೈಹಿವಸಲ್ಲಮರು ಅವರ ಕುಟುಂಬಸ್ತರಿಗೆ ಶೋಕ ಪ್ರಕಟಿಸುವುದಕ್ಕೆ ಹೋದಾಗ ಅವರ ಪುತ್ರಿಯು ಸಂಕಟದಿಂದ ಅಳುತ್ತ ಹುಝೂರ್ ಸಲಲ್ಲಾಹು ಅಲೈಹಿವಸಲ್ಲಮರ ಬಳಿಗೆ ಬಂದಳು. ಇದಕ್ಕೆ ಹುಝುರ್(ಸ) ಅವರು ಸಹ ಬಹಳ ಅತ್ತರು. ಇದಕ್ಕೆ ಹಝ್ರತ್ ಸಅದ್ ಬಿನ್ ಉಬಾದ(ರ) ಹೇಳಿದರು: ಯಾ ರಸೂಲಲ್ಲಾಹ್! ಇದು ಏನು ಇದಕ್ಕೆ ಹುಝೂರ್(ಸ) ನುಡಿದರು: **ಹಾಝು ಶೌಕುಲ್ ಹಬೀಬಿ ಇಲಾ ಹಬೀಬಿಹೀ** ಇದು ಓರ್ವ ಪ್ರೇಮಿಯ ಇನ್ನೋರ್ವ ಪ್ರೇಮಿಯೊಂದಿಗೆ ಪ್ರೀತಿ ಆಗಿದೆ. (ಅತ್ತಬಖಾತುಲ್ ಕುಬ್ರ ಸಂಪುಟ–3, ಪುಟ–34, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 1990)

ಸಹೀಹ್ ಬುಖಾರಿಯಲ್ಲಿ ಒಂದು ಉಲ್ಲೇಖವಿದೆ ಹಶ್ಶಾಮ್ ಬಿನ್ ಉರ್‌ವ ತಮ್ಮ ತಂದೆಯಿಂದ ವರದಿ ಮಾಡುತ್ತಾರೆ ಹುಝೂರ್ ಸಲಲ್ಲಾಹು ಅಲೈಹಿವಸಲ್ಲಮರು ಮಕ್ಕದ ವಿಜಯದ ವರ್ಷ ಹೊರಟಾಗ ಖುರೈಶರಿಗೆ ಈ ಸುದ್ದಿ ತಲುಪಿತು. ಆಗ ಅಬು ಸುಫಿಯಾನ್ ಬಿನ್ ಹರಬ್, ಹಕೀಮ್ ಬಿನ್ ಹಿಝಾಮ್ ಹಾಗೂ ಬುದೈಲ್ ಬಿನ್ ವರ್‌ಖ ಹುಝೂರ್(ಸ) ಅವರನ್ನು ಕುತೂಹಲದಿಂದ ಹೊರಟ ಮರ್‍ರುಝ್ಝಹ್‌ರಾನ್ ಎಂಬಲ್ಲಿಗೆ ತಲುಪಿದರು. ಮರ್‍ರುಝ್ಝುಮ್‌ರಾನ್ ಮಕ್ಕದ ಒಂದು ಸ್ಥಳವಾಗಿದೆ. ಅಲ್ಲಿ ಅನೇಕ ಜಲಗಳು ಹಾಗೂ ಖರ್ಜೂರದ ತೋಟಗಳಿವೆ. ಇದು ಮಕ್ಕದಿಂದ 5 ಮೈಲಿ ದೂರದಲ್ಲಿದೆ. ಅಲ್ಲಿಗೆ ಅವರೆಲ್ಲರು ತಲುಪಿದಾಗ ಅಲ್ಲಿ ಅನೇಕ ಅಗ್ನಿಗಳನ್ನು ಹಜ್ಜ್ ಸಂದರ್ಭದಲ್ಲಿ ಅರಫಾತ್ ಎಂಬ ಸ್ಥಳದಲ್ಲಿ ಪ್ರಕಾಶಿಸುವ ಹಾಗೆ ಅಗ್ನಿಗಳು ಪ್ರಕಾಶಿಸುತ್ತಿರುವುದನ್ನು ಕಂಡರು. ಇದಕ್ಕೆ ಅಬುಸುಫಿಯಾನ್ ಹೇಳಿದನು ಏನಿದು? ಅರಫಾತ್ ಮೈದಾನದ ಅಗ್ನಿಯ ಹಾಗೆ ಕಾಣುತ್ತಿದೆ. ಬುದೈಲ್ ಬಿನ್ ವರ್‌ಖ ಹೇಳಿದನು. ಇದು ಖಝಾಅ ಗೋತ್ರದ ಬನು ಉಮ್‌ರ್ ಅವರ ಅಗ್ನಿಯ ಹಾಗೆ ಕಾಣುತ್ತಿದೆ. ಇದಕ್ಕೆ ಅಬುಸುಫಿಯಾನ್ ಹೇಳಿದನು ಉಮ್‌ರೊವಿನ ಗೋತ್ರದ ಸಂಖ್ಯೆ ಇದಕ್ಕಿಂತ ಬಹಳ ಕಡಿಮೆ ಇದೆ. ಇಷ್ಟರಲ್ಲಿ ಅವರನ್ನು ಹುಝೂರ್(ಸ) ಅವರ ಕಾವಲುಗಾರರು ನೋಡಿ ಆ ಮೂರು ಜನರನ್ನು ಸೆರೆ ಹಿಡಿದು ಹುಝೂರ್ ಸಲಲ್ಲಾಹು ಅಲೈಹಿವ ಸಲ್ಲಮರ ಬಳಿಗೆ ಕರೆತಂದರು. ಅಲ್ಲಿ ಅಬುಸುಫಿಯಾನ್ ಇಸ್ಲಾಮ್ ಸ್ವೀಕರಿಸಿದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸೇನೆ ಮಕ್ಕದ ಕಡೆಗೆ ಸಾಗುತ್ತಿರುವಾಗ ಹಝ್ರತ್ ಅಬ್ಬಾಸ್‌ರಿಗೆ ಆಜ್ಞಾಪಿಸಿದರು: ಯಾವುದಾದರೂ ಮಾರ್ಗದ ಮೂಲೆಯಲ್ಲಿ ಅಬೂ ಸುಫ್‌ಯಾನ್ ಮತ್ತು ಅವರ ಸಂಗಡಿಗರನ್ನು ನಿಲ್ಲಿಸಿ ಅವರು ಸೇನೆಯ ಚಲನೆಯನ್ನು ವೀಕ್ಷಿಸುತ್ತಿರಬೇಕು. ಅವರು ಇಸ್ಲಾಮೀ ಸೈನ್ಯವನ್ನು, ಅವರ ಜೀವಾರ್ಪಣೆ ಮನೋಭಾವವನ್ನು ವೀಕ್ಷಿಸಲಿ. ಸೇನಾ ದಳ ತಂಡೋಪ ತಂಡವಾಗಿ ಸಾಗುತ್ತಿತ್ತು. ಒಂದು ತಂಡವು ದಾಟುತ್ತಿರುವಾಗ ಅಬು ಸುಫಿಯಾನ್ ಹಝ್ರತ್ ಅಬ್ಬಾಸ್(ರ) ಅವರನ್ನು ಕೇಳಿದರು ಇವರು ಯಾರು? ಅದಕ್ಕೆ ಹಝ್ರತ್ ಅಬ್ಬಾಸ್(ರ) ಉತ್ತರಿಸಿದರು ಇವರು ಗಫ್ಫಾರ್ ಗೋತ್ರದವರಾಗಿದ್ದಾರೆ. ಅಬುಸುಫಿಯಾನ್ ಹೇಳಿದರು ನನಗೆ

ಗಫ್ಫಾರ್ ಗೋತ್ರದವರೊಂದಿಗೆ ಸಂಬಂಧವಿಲ್ಲ. ತದನಂತರ ಜುಹೈನದವರು ಸಾಗುತ್ತಿರುವಾಗ ಅಬು ಸುಫಿಯಾನ್ ಪುನಃ ಅದೇ ರೀತಿ ಹೇಳಿದರು. ತದನಂತರ ಸಅದ್ ಬಿನ್ ಹುಝೈಮರ ಜನರು ಸಾಗುದಾಗ ಪುನಃ ಹಾಗೆಯೇ ಹೇಳಿದರು. ತದನಂತರ ಸುಲೈಮ್‌ದವರು ಸಾಗಿದಾಗ ಪುನಃ ಹಾಗೆಯೇ ಹೇಳಿದರು. ಅದೇ ಸಂದರ್ಭದಲ್ಲಿ ಒಂದು ಬೃಹತ್ತಾದ ಸೈನ್ಯೆ ಸಾಗುತ್ತಿರುವಾಗ ಅಬು ಸುಫಿಯಾನ್ ಕೇಳಿದರು ಇವರು ಯಾರು? ಎಂದು ಹಝ್ರತ್ ಅಬ್ಬಾಸ್ ಹೇಳಿದರು ಇವರು ಅನ್ಸಾರ್ ಆಗಿದ್ದಾರೆ ಅವರ ಪತಾಕೆಯು ಅವರ ನಾಯಕರಾದ ಸಅದ್ ಬಿನ್ ಉಬಾದ(ರ) ಅವರ ಬಳಿ ಇದೆ. ಹಝ್ರತ್ ಸಅದ್ ಬಿನ್ ಉಬಾದ ಕೂಗಿ ಹೇಳಿದರು ಅಬು ಸುಫಿಯಾನ್! ಇಂದಿನ ದಿವಸವೂ ಭೀಕರ ಯುದ್ಧದ ದಿವಸವಾಗಿದೆ. ಇಂದು ಕಅಬದಲ್ಲಿ ಯುದ್ಧವು ಧರ್ಮಸಮ್ಮತಗೊಳಿಸಲಾಗಿದೆ. ಅಬು ಸುಫಿಯಾನ್ ಇದನ್ನು ಕೇಳಿ ಹಝ್ರತ್ ಅಬ್ಬಾಸ್‌ರಲ್ಲಿ ಹೇಳಿದರು ಅಬ್ಬಾಸ್! ನಾಶಗೊಳಿಸುವ ಈ ದಿವಸ ಹೋರಾಡುವ ಸೌಭಾಗ್ಯ ದೊರಕಿದ್ದರೆ ಎಷ್ಟು ಒಳ್ಳೆಯದಾಗಿರುತ್ತಿತ್ತು. ಅಂದರೆ ನಾನು ಇನ್ನೊಂದು ಕಡೆ ಇರಬೇಕಾಗಿತ್ತು ಆ ಕಡೆ ಇರುತ್ತಿದ್ದರೆ ನನಗೂ ಸಹ ಸೌಭಾಗ್ಯ ದೊರಕುತ್ತಿತ್ತು ಏಕೆಂದರೆ ಆಗ ಇವರು ಇಸ್ಲಾಮ್ ಸ್ವೀಕರಿಸಿದ್ದರು. ತದನಂತರ ಇನ್ನೊಂದು ಸೈನ್ಯೆ ಸಾಗಿತು ಇದು ಎಲ್ಲಾ ಸೈನ್ಯಗಳಿಂದ ಚಿಕ್ಕದ್ದಾಗಿತ್ತು. ಅವರಲ್ಲಿ ಹಝ್ರತ್ ರಸೂಲ್ ಸಲಲ್ಲಾಹು ಅಲೈಹಿವ ಸಲ್ಲಮರಿದ್ದರು ಹಾಗು ಅವರೊಂದಿಗೆ ಮುಹಾಜಿರೀನರಿದ್ದರು ಪ್ರವಾದಿ(ಸ) ಅವರ ಪತಾಕೆಯು ಹಝ್ರತ್ ಝುಬೇರ್ ಬಿನ್ ಅವಾವ್(ರ) ಅವರ ಕೈಯಲ್ಲಿತ್ತು. ಹುಝೂರ್(ಸ) ಅವರು ಅಬುಸುಫಿಯಾನಿನ ಹತ್ತಿರದಿಂದ ಸಾಗುತ್ತಿರುವಾಗ ಅಬುಸುಫಿಯಾನ್ ಕೇಳಿದರು ಹಝ್ರತ್ ಸಅದ್ ಬಿನ್ ಉಬಾದ(ರ) ಏನು ಹೇಳಿದರೆಂದು ನಿಮಗೆ ಗೊತ್ತಿದೆಯೇ? ಹುಝೂರ್(ಸ) ಕೇಳಿದರು ಏನು ಹೇಳಿದರು? ಸಅದ್ ಅವರು ಹೇಳಿದ ಮಾತು ಹೇಳಿದೆನು. ಅದಕ್ಕೆ ಪ್ರವಾದಿ(ಸ) ಹೇಳಿದರು ಸಅದ್(ರ) ತಪ್ಪು ಹೇಳಿದ್ದಾರೆ ಬದಲಿಗೆ ಇಂದಿನ ದಿವಸ ಅಲ್ಲಾಹನು ಕಅಬದ ಗೌರವ ಖಾಯಮ್‌ಗೊಳಿಸುವನು ಹಾಗೂ ಕಅಬದ ಮೇಲೆ ಪರದೆ ಧರಿಸಲಾಗುವುದು ಯಾವುದೇ ರೀತಿಯ ಯುದ್ಧ ನಡೆಯುವುದಿಲ್ಲ. (ಸಹೀಹ್ ಬುಖಾರಿ ಕಿತಾಬುಲ್ ಮಗಾಝಿ, ಯೌಮುಲ್ ಫತ್‌ಹ್ ಹದೀಸ್–4280) (ಮುಜಮುಲ್ ಬಲ್ದಾನ್ ಸಂಪುಟ–4, ಪುಟ–247)

ಈ ಘಟನೆಯನ್ನು ಹಝ್ರತ್ ಮುಸ್ಲಿಹ್ ಮೌಊದ್(ರ) ಸ್ವಲ್ಪ ವಿವರವಾಗಿ ಪ್ರಸ್ತಾಪಿಸಿದ್ದಾರೆ. ಹುಝೂರ್ ಸಲಲ್ಲಾಹು ಅಲೈಹಿವಸಲ್ಲಮರು ಮಕ್ಕ ವಿಜಯದ ವರ್ಷ ಹೊರಟಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಅಬ್ಬಾಸ್‌ರಿಗೆ ಆಜ್ಞಾಪಿಸಿದರು: ಯಾವುದಾದರೂ ರಸ್ತೆಯ ಮೂಲೆಯಲ್ಲಿ ಅಬೂ ಸುಫ್‌ಯಾನ್ ಮತ್ತು ಅವನ ಸಂಗಡಿಗರನ್ನು ನಿಲ್ಲಿಸಿ ಅವರು ಸೇನೆಯ ಚಲನೆಯನ್ನು ವೀಕ್ಷಿಸುತ್ತಿರಬೇಕು. ಅವರು ಇಸ್ಲಾಮೀ ಸೈನ್ಯವನ್ನು, ಅವರ ಜೀವಾರ್ಪಣಾ ಮನೋಭಾವವನ್ನು ವೀಕ್ಷಿಸಲಿ. ಹಝ್ರತ್ ಅಬ್ಬಾಸ್(ರ) ಅವರು ಹೀಗೆ ಮಾಡಿದರು. ಅಬುಸುಫಿಯಾನ್ ಮತ್ತು ಅವನ ಸಂಗಡಿಗರ ಮುಂದೆ ಅರಬರ ಅನೇಕ ಗೋತ್ರಗಳು ತಂಡೋಪತಂಡವಾಗಿ ಸಾಗುತ್ತಿತ್ತು ಆ ತಂಡಗಳು ಮಕ್ಕದವರಿಗೆ ಸಹಾಯ ಮಾಡುವವರಾಗಿದ್ದಾರೆ ಎಂದು ನಂಬಿದ್ದರು. ಅಂದರೆ ಮಕ್ಕದವರು ಈ ತಂಡಗಳು ತಮಗೆ ಸಹಾಯ ಮಾಡುವರು ಎಂದು ಯೋಚಿಸುತ್ತಿದ್ದರು ಆದರೆ ಅವರೆಲ್ಲರು ಹುಝೂರ್(ಸ) ಅವರೊಂದಿಗೆ ಸೇರಿಕೊಂಡಿದ್ದರು. ಅವರೆಲ್ಲರು ಇಂದು ಇಸ್ಲಾಮಿನ ಪತಾಕೆ ಹಾರಿಸುತ್ತಿದ್ದರು ಅವರ ನಾಲಿಗೆಗಳ ಮೇಲೆ ಅಲ್ಲಾಹನ ನಾಮದ ಘೋಷಣೆಗಳಿದ್ದವು. ಅವರೆಲ್ಲರು ಮುಹಮ್ಮದ್(ಸ) ಅವರಿಗಾಗಿ ತಮ್ಮ ರಕ್ತಹರಿಸಲು ಸಿದ್ಧವಾಗಿದ್ದರು. ಅದೇ ರೀತಿ ಅಲ್ಲಾಹನ ಮಾರ್ಗದಲ್ಲಿ ಏಕತ್ವ ಹಾಗೂ ಅವರ ತಬ್‌ಲೀಗನ್ನು ವಿಶ್ವದಲ್ಲಿ ಸ್ಥಾಪಿಸಬೇಕೆಂಬ ಆಸೆ ಅವರಿಗಿತ್ತು. ಸೇನೆ ತಂಡೋಪತಂಡವಾಗಿ ಸಾಗುತ್ತಿತ್ತು ಆ ಮಧ್ಯೆ ಅಶ್‌ಜಅ್ ಗೋತ್ರದ ಸೈನ್ಯ ಸಾಗುವಾಗ ಅವರಿಗೆ ಇಸ್ಲಾಮ್ ಬಗ್ಗೆ ಇದ್ದ ಪ್ರೀತಿ ಮತ್ತು ಬಲಿದಾನ ನೀಡುವ ಬಗ್ಗೆ ಅವರಿಗಿದ್ದ ಉತ್ಸಾಹ ಅವರ ಮುಖ ಚಹರೆಗಳಲ್ಲಿ ಸ್ಪಷ್ಟವಾಗಿ ಕಾಣಿಸುತ್ತಿತ್ತು. ಅವರ ಘೋಷಣೆಗಳಲ್ಲಿ ಅವು ಪ್ರಕಟವಾಗುತ್ತಿದ್ದವು. ಅವರನ್ನು ನೋಡಿ ಅಬೂ ಸುಫ್‌ಯಾನ್ ಕೇಳಿದನು: ಅಬ್ಬಾಸ್, ಇವರು ಯಾರು? ಅಬ್ಬಾಸ್ ಹೇಳಿದರು: ಅವರು ಅಶ್‌ಜಅ್ ಗೋತ್ರದವರು. ಆಗ ಅಬೂ ಸುಫ್‌ಯಾನ್ ಆಶ್ಚರ್ಯದಿಂದ ಅಬ್ಬಾಸರ ಮುಖವನ್ನು ನೋಡಿ ಹೇಳಿದನು: ಇಡೀ ಅರಬ್ ದೇಶದಲ್ಲಿ ಅವರಿಗಿಂತ ಮುಹಮ್ಮದರ ಕಠಿಣ ಶತ್ರುಗಳು ಬೇರೆ ಯಾರೂ ಇರಲಿಲ್ಲ. ಅಬ್ಬಾಸ್ ಹೇಳಿದರು: ಇದು ಅಲ್ಲಾಹನ ಅನುಗ್ರಹವಾಗಿದೆ. ಅಲ್ಲಾಹನು ಇಚ್ಛಿಸಿದಾಗ ಅವರ ಹೃದಯಗಳಲ್ಲಿ ಇಸ್ಲಾಮಿನ ಬಗ್ಗೆ ಪ್ರೀತಿ ಪ್ರವೇಶಿಸಿತು. ಕೊನೆಯದಾಗಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮುಹಾಜಿರ್‌ಗಳ ಮತ್ತು ಅನ್‌ಸಾರ್‌ಗಳ ಸೈನ್ಯದೊಂದಿಗೆ ಮುಂದೆ ಸಾಗಿದರು. ಅವರು ಎರಡು ಸಾವಿರದಷ್ಟಿದ್ದರು. ಮತ್ತು ತಲೆಯಿಂದ ಪಾದದ ತನಕ ಕವಚಗಳನ್ನು ಧರಿಸಿದವರಾಗಿದ್ದರು. ಹಝ್ರತ್ ಉಮರ್(ರ) ಅವರ ಸಾಲುಗಳನ್ನು ಸರಿಪಡಿಸುತ್ತಾ "ಹೆಜ್ಜೆಗಳನ್ನು ಸರಿಯಾಗಿ ಹಾಕಿ ಸಾಗಿರಿ, ಸಾಲುಗಳ ದೂರ ಸರಿಯಾಗಿರುವಂತೆ ನೋಡಿಕೊಳ್ಳಿರಿ" ಎಂದು ಹೇಳುತ್ತಿದ್ದರು. ಆ ಪುರಾತನ ಜೀವಾರ್ಪಣೆ ಮಾಡುವವರಿಗೆ ಇಸ್ಲಾಮ್ ಬಗ್ಗೆ ಇದ್ದ ಉತ್ಸಾಹ ಮತ್ತು ಅವರ ದೃಢನಿಶ್ಚಯ ಮತ್ತು ಅವರ ನಿಷ್ಠೆ ಅವರ ಮುಖ ಚಹರೆಗಳಿಂದ ಪ್ರದರ್ಶಿತವಾಗುತ್ತಿದ್ದುವು. ಅಬೂ ಸುಫ್‌ಯಾನ್ ಅವರನ್ನು ನೋಡಿದಾಗ ಅವನ ಹೃದಯ ಭಯಭೀತಿ ಭರಿತವಾಯಿತು. ಅವನು ಕೇಳಿದನು: ಇವರು ಯಾರು? ಅಬ್ಬಾಸ್ ಹೇಳಿದರು: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅನ್‌ಸಾರ್ ಮತ್ತು ಮುಹಾಜಿರ್‌ಗಳ ಸೈನ್ಯದೊಂದಿಗೆ ಸಾಗುತ್ತಿದ್ದಾರೆ. ಅಬೂ ಸುಫಿಯಾನ್ ಹೇಳಿದನು: ಈ ಸೈನ್ಯವನ್ನು ಎದುರಿಸಲು ಲೋಕದಲ್ಲಿ ಯಾರಿಗೆ ಶಕ್ತಿ ಇದೆ? ಅನಂತರ ಹಝ್ರತ್ ಅಬ್ಬಾಸ್‌ರೊಂದಿಗೆ ಹೇಳಿದನು: ನಿಮ್ಮ ಸಹೋದರ ಪುತ್ರ ಇಂದು ಲೋಕದ ಎಲ್ಲರಿಗಿಂತ ದೊಡ್ಡ ಅರಸನಾಗಿದ್ದಾರೆ. ಹಝ್ರತ್ ಅಬ್ಬಾಸ್ ಹೇಳಿದರು: ಈಗಲೂ ನಿನ್ನ ಹೃದಯದ ಕಣ್ಣುಗಳು ತೆರೆಯಲ್ಪಡಲಿಲ್ಲವೇ? ಇದು ಅವರಸೊತ್ತಿಗೆ ಅಲ್ಲ. ಇದು ನುಬುವ್ವತ್ ಆಗಿದೆ. ಅಬೂ ಸುಫ್‌ಯಾನ್ ಹೇಳಿದರು: ಹೌದು ಹೌದು ಇದು ನುಬುವ್ವತ್ತೇ ಆಗಿದೆ.

ಈ ಸೈನ್ಯ ಅಬೂ ಸುಫ್‌ಯಾನನ ಎದುರಿನಿಂದ ಸಾಗುತ್ತಿದ್ದಾಗ ಅನ್‌ಸಾರ್‌ಗಳ ಸೇನಾ ನಾಯಕ ಸಅದ್ ಬಿನ್ ಉಬಾದರು ಅಬೂ ಸುಫ್‌ಯಾನನನ್ನು ನೋಡುತ್ತಾ ಹೇಳಿದರು: ಈ ದಿನ ಖಡ್ಗದ ಬಲದಿಂದ ಮಕ್ಕ ಪ್ರವೇಶಿಸುವುದನ್ನು ಅಲ್ಲಾಹನು ನಮಗೆ ಧರ್ಮಬದ್ಧವನ್ನಾಗಿ (ಹಲಾಲ್ ಆಗಿ) ಮಾಡಿದ್ದಾನೆ. ಈ ದಿನ ಖುರೈಶಿ ಜನರು ಹೀನೈಸಲ್ಪಡುವರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಬೂ ಸುಫಿಯಾನನ ಮುಂದೆ ಸಾಗುವಾಗ ಅವನು ಉಚ್ಚ ಧ್ವನಿಯಲ್ಲಿ ಹೇಳಿದನು: ಯಾ ರಸೂಲುಲ್ಲಾಹ್, ನೀವು ನಿಮ್ಮ ಕೋಮನ್ನು ಹತ್ಯೆ ಮಾಡಲು ಅನುಮತಿ ನೀಡಿರುವಿರೋ? ಅನ್‌ಸಾರ್‌ಗಳ ನಾಯಕ ಸಅದ್ ಮತ್ತು ಅವರ ಸಂಗಡಿಗರು ಹಾಗೆ ಹೇಳುತ್ತಿದ್ದಾರೆ. ಇಂದು ಯುದ್ಧವಾಗುವುದು, ಮಕ್ಕದ ಪಾವಿತ್ರ್ಯ ನಮ್ಮನ್ನು ಯುದ್ಧದಿಂದ ತಡೆಗಟ್ಟಲಾರದು, ನಾವು ಖುರೈಶಿಗಳನ್ನು ಹೀನಾಯಗೊಳಿಸುವೆವು ಎಂದು ಅವರು ಹೇಳಿದ್ದಾರೆ. ಯಾ ರಸೂಲುಲ್ಲಾಹ್, ತಾವು ಲೋಕದಲ್ಲಿ ಎಲ್ಲರಿಗಿಂತ ಅತ್ಯುತ್ತಮರೂ ಎಲ್ಲರಿಗಿಂತ ಹೆಚ್ಚು ಕಾರುಣ್ಯ ದೋರುವವರೂ ಆಗಿರುವಿರಿ. ನೀವು ರಕ್ತ ಸಂಬಂಧದ ಬಗ್ಗೆ ಕಾಳಜಿ ಇರುವವರೂ ಆಗಿರುವಿರಿ. ಏನು, ಇಂದು ನೀವು ನಿಮ್ಮ ಕೋಮಿನ ದೌರ್ಜನ್ಯಗಳನ್ನು ಮರೆತುಬಿಡಲಾರಿರಾ? ಅಬೂ ಸುಫ್‌ಯಾನನ ಈ ದೂರನ್ನು ಮತ್ತು ಬೇಡಿಕೆಯನ್ನು ಆಲಿಸಿ ಮುಹಾಜಿರೀನರ ಹೃದಯಗಳಲ್ಲಿಯು ಮಕ್ಕದ ಜನರ ಬಗ್ಗೆ ದಯೆ ಹುಟ್ಟಿತ್ತು ಅವರೆಲ್ಲರು ಹುಝೂರ್ ಸಲ್ಲಲ್ಲಾಹು ಅಲೈಹಿವಸಲ್ಲಮರೊಡನೆ ಹೇಳಿದರು: ಯಾ ರಸೂಲಲ್ಲಾಹ್! ಅನ್ಸಾರರು ಮಕ್ಕದವರ ಹಿಂಸೆಗಳ ಘಟನೆಗಳನ್ನು ಆಲಿಸಿದ್ದ ಕಾರಣ ಇಂದು ಅವರು ಖುರೈಶರೊಂದಿಗೆ ಹೇಗೆ ವರ್ತಿಸುವರು ಎಂದು ನಮಗೂ ತಿಳಿಯದು. ಇದಕ್ಕೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಅಬೂ ಸುಫ್‌ಯಾನ್, ಸಅದ್ ಹೇಳಿದುದು ತಪ್ಪಾಗಿದೆ. ಇಂದು ಕಾರುಣ್ಯದ ದಿನವಾಗಿದೆ. ಇಂದು ಅಲ್ಲಾಹನು ಖುರೈಶರಿಗೂ ಪವಿತ್ರ ಕಅಬಕ್ಕೂ ಗೌರವ ನೀಡುವನು. ಅನಂತರ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಒಬ್ಬನನ್ನು ಹಝ್ರತ್ ಸಅದ್‌ರ ಬಳಿಗೆ ಕಳುಹಿಸಿ ಹೇಳಿದರು: ನಿಮ್ಮ ಪತಾಕೆ ನಿಮ್ಮ ಪುತ್ರ ಖೈಸರಿಗೆ ಕೊಡಿರಿ. ಅವರು ನಿಮ್ಮ ಸ್ಥಾನದಲ್ಲಿ ಅನ್‌ಸಾರ್‌ಗಳ ಸೇನಾ ನಾಯಕನಾಗುವನು. ಈ ರೀತಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮಕ್ಕದವರ ಹೃದಯಕ್ಕೆ ಸಮಾಧಾನ ನೀಡಿದರು ಮತ್ತು ಅನ್‌ಸಾರ್‌ಗಳ ಹೃದಯಗಳಿಗೆ ನೋವಾಗದಂತೆ ಸಂರಕ್ಷಿಸಿದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಖೈಸ್ ಬಗ್ಗೆ ಪೂರ್ಣ ನಂಬಿಕೆ ಇತ್ತು. ಏಕೆಂದರೆ ಅವರು ಅತ್ಯಂತ ಸಾತ್ವಿಕ ತರುಣರಾಗಿದ್ದರು. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಖೈಸ್(ರ) ಎಂತಹ ಸಾತ್ವಿಕ ಸ್ವಭಾವದ ವ್ಯಕ್ತಿ ಆಗಿದ್ದರೆಂದರೆ ಇತಿಹಾಸದಲ್ಲಿ ಬರೆಯಲಾಗಿದೆ. ಅವರ ನಿಧನದ ಸಮಯ ಸಮೀಪವಾದಾಗ ಅವರ ಕ್ಷೇಮ ವಿಚಾರಿಸಲು ಅನೇಕ ಜನರು ಅವರ ಮನೆಗೆ ಬಂದಿದ್ದರು ಇನ್ನು ಕೆಲವರು ಬಂದಿರಲಿಲ್ಲ ಅದಕ್ಕೆ ಹಝ್ರತ್ ಖೈಸ್(ರ) ಕೇಳಿದರು ನನ್ನ ಪರಿಚಿತರಲ್ಲಿ ಇನ್ನು ಅನೇಕ ಜನರು ಏಕೆ ಬರಲಿಲ್ಲ? ಎಂದು ಆಗ ಅವರಿಗೆ ಹೇಳಲಾಯಿತು ತಾವು ಬಹಳ ಉತ್ತುಂಗ ಸ್ವಭಾವದವರಾಗಿದ್ದೀರಿ. ಖೈಸರು ಬಹಳ ಉತ್ತಮ ಸ್ವಭಾವದವರಾಗಿದ್ದರು ಅವರು ಜನರಿಗೆ ಬಹಳ ಸಹಾಯ ಮಾಡುತ್ತಿದ್ದರು. ಪ್ರತಿಯೊಬ್ಬರನ್ನು ಅವರ ಸಂಕಷ್ಟದ ಸಮಯ ಸಹಾಯ ಮಾಡುತ್ತಿದ್ದರು ಹಣ ನೀಡುತ್ತಿದ್ದರು. ಯಾರಾದರು ಸಾಲ ಕೇಳಿದರೆ ಅವರು ಸಾಲ ನೀಡುತ್ತಿದ್ದರು. ಹೀಗೆ ಊರಿನ ಬಹಳಷ್ಟು ಜನರು ಅವರಿಗೆ ಸಾಲ ಹಿಂದಿರುಗಿಸ ಬೇಕಾಗಿತ್ತು. ಆದ್ದರಿಂದ ಅನೇಕ ಜನರು ಅವರ ಸಾಲಗಾರರಾಗಿದ್ದರಿಂದ ಹಣ ಮರು ಪಾವತಿಸಲು ಸಾಧ್ಯವಾದ್ದರಿಂದ ಅವರ ಬಳಿಗೆ ಬರಲಿಲ್ಲ. ಈ ವಿಷಯ ಹಝ್ರತ್ ಖೈಸ್(ರ) ಅವರಿಗೆ ತಿಳಿದಾಗ ಅವರಿಗೆ ಬಹಳ ಸಂಕಟ ಉಂಟಾಯಿತು ನನ್ನ ಈ

ಕಾರಣದಿಂದ ಜನರು ಬರಲಿಲ್ಲ ಎಂದು. ಆಗ ಅವರು ಹೇಳಿದರು ಇಡೀ ಊರಿನಲ್ಲಿ ಯಾರು ಖೈಸ್(ರ) ಅವರಿಗೆ ಸಾಲ ನೀಡಬೇಕಾಗಿತ್ತೋ ಅವರು ಆ ಸಾಲವನ್ನು ಮನ್ನ ಮಾಡಿದ್ದಾರೆ ಎಂದು ಘೋಷಣೆ ಕೂಗಿರೀ ಎಂದು ಹೇಳಿದರು. ತದನಂತರ ಅವರ ಯೋಗಕ್ಷೇಮ ವಿಚಾರಿಸಲು ಎಷ್ಟು ಜನರು ಬಂದರು ಎಂದರೆ ಅವರ ಮನೆಯ ಮೆಟ್ಟಿಲುಗಳೆಲ್ಲ ಮುರಿದು ಹೋಯಿತು. (ದೀಬಾಚ ತಫ್ಸೀರುಲ್ ಖುರ್‌ಆನ್, ಅನ್ವಾರುಲ್ ಉಲೂಮ್ ಸಂಪುಟ–20, ಪುಟ–341–343)

ಹುನೈನ್ ಯುದ್ಧದ ಇನ್ನೊಂದು ಹೆಸರು ಹವಾಝಿನ್ ಯುದ್ಧ ಎಂದಾಗಿದೆ, ಹುನೈನ್ ಮಕ್ಕ ಮತ್ತು ತಾಇಫ್‌ನ ನಡುವೆ ಮಕ್ಕದಿಂದ 30 ಮೈಲಿ ದೂರದಲ್ಲಿದೆ. ಹಿಜರಿ ವರ್ಷ 8ರಲ್ಲಿ ಹುನೈನ್ ಯುದ್ಧ ಮಕ್ಕದ ಜಯದ ನಂತರ ನಡೆಯಿತು. ಈ ಯುದ್ಧದಿಂದ ಗಳಿಸಿದ ಸಂಪತ್ತನ್ನು ಹಝ್ರತ್ ನಬಿ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮಹಾಜಿರ್‌ಗಳಿಗೆ ಹಂಚಿದರು. ಅನ್‌ಸಾರ್‌ಗಳ ಹೃದಯಗಳು ಆ ಕಾರಣದಿಂದ ನೋವು ಅನುಭವಿಸಿದುವು. ಈ ಘಟನೆಯ ವಿವರ ಮಸ್ನದ್ ಅಹ್ಮದ್ ಬಿನ್ ಹಂಬಲ್‌ನಲ್ಲಿ ಹೀಗೆ ಇದೆ ಹಝ್ರತ್ ಅಬುಸಯೀದ್ ಖುದ್‌ರಿ(ರ) ಅವರಿಂದ ವರದಿ ಆಗಿದೆ ಹಝ್ರತ್ ರಸೂಲುಲ್ಲಾಹ್ ಸಲಲ್ಲಾಹು ಅಲೈಹಿವ ಸಲ್ಲಮರು ಖುರೈಶ್ ಮತ್ತು ಇನ್ನುಳಿದ ಅರಬ್ ಗೋತ್ರಗಳ ನಡುವೆ ಸಂಪತ್ತನ್ನು ಹಂಚಿದಾಗ ಅನ್ಸಾರ್‌ಗಳಿಗೆ ಅದರಿಂದ ಏನು ನೀಡಲಿಲ್ಲ ಆಗ ಅನ್ಸಾರ್‌ಗಳ ಹೃದಯಗಳು ಆ ಕಾರಣದಿಂದ ನೋವು ಅನುಭವಿಸಿದವು. ಹಝ್ರತ್ ಸಅದ್ ಬಿನ್ ಉಬಾದ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಬಂದು ಹೇಳಿದರು: ಯಾ ರಸೂಲುಲ್ಲಾಹ್, ಅನ್‌ಸಾರ್‌ಗಳು ತಮ್ಮ ಬಗ್ಗೆ ಹೃದಯಗಳಲ್ಲಿ ಏನೋ ಇಟ್ಟುಕೊಂಡಿದ್ದಾರೆ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಸಅದ್! ಈ ವಿಷಯದಲ್ಲಿ ನೀವು ಯಾರ ಕಡೆ ಇದ್ದೀರಿ? ನೀವು ನಿಮ್ಮ ಮಾತು ಹೇಳಿರಿ. ಅದಕ್ಕೆ ಅವರು ಹೇಳಿದರು ಯಾ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್! ನಾನು ಕೇವಲ ನನ್ನ ಕೋಮಿನ ಕಡೆಯಿಂದ ಓರ್ವ ವ್ಯಕ್ತಿ ಆಗಿದ್ದೇನೆ ಅಷ್ಟೆ ಇದಲ್ಲದೆ ನನ್ನ ಯಾವ ವ್ಯಕ್ತಿತ್ವವೂ ಇಲ್ಲ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ನೀವು ನಿಮ್ಮ ಕೋಮಿನ ಜನರನ್ನು ಒಂದು ಕಡೆ ಜಮಾಯಿಸಿರಿ. ಹಾಗೆ ಎಲ್ಲರೂ ಬಂದು ಸೇರಿದಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಅವರ ಸಮೀಪಕ್ಕೆ ಹೋಗಿ ಹಮ್ದ್ ಮತ್ತು ಸನಾ ಉಚ್ಚರಿಸಿದ ನಂತರ ಹೇಳಿದರು: ಅನ್‌ಸಾರ್‌ಗಳೇ, ಸಂಪತ್ತು ಸಿಗಲಿಲ್ಲ ಎಂಬ ಬಗ್ಗೆ ನಿಮಗೆ ಅತೃಪ್ತಿಯಾಗಿದೆ ಎಂಬ ಸಮಾಚಾರ ನನಗೆ ತಲುಪಿದೆ. ನಾನು ನಿಮ್ಮ ಬಳಿ ಬಂದಾಗ ನೀವೆಲ್ಲರು ಅಂಧಕಾರದಲ್ಲಿ ಮುಳುಗಿದ್ದೀರಿ ಅಲ್ಲಾಹನು ನಿಮಗೆ ಮಾರ್ಗದರ್ಶನ ನೀಡಿಲಿಲ್ಲವೇ? ನೀವು ಸಂಪತ್ತಿನ ಸಂಕಷ್ಟದಲ್ಲಿದ್ದಾಗ ನಿಮಗೆ ಅಲ್ಲಾಹನು ಸಂಪತ್ತು ನೀಡಲಿಲ್ಲವೇ? ನೀವೆಲ್ಲರು ಪರಸ್ಪರ ಶತ್ರುಗಳಾಗಿದ್ದಾಗ ನಿಮ್ಮ ಮನಸುಗಳಲ್ಲಿ ಪರಸ್ಪರ ಪ್ರೀತಿ ಹುಟ್ಟಿಸಲಿಲ್ಲವೇ? ಅದಕ್ಕೆ ಅವರೆಲ್ಲರು ಹೇಳಿದರು ಹೌದು. ಅಲ್ಲಾಹ್ ಮತ್ತು ಅವನ ಸಂದೇಶವಾಹಕನು ನಮ್ಮ ಮೇಲೆ ಬಹಳ ದಯೆ ತೋರಿಸುವವರಾಗಿದ್ದೀರಿ. ಹುಝೂರ್(ಸ) ಹೇಳಿದರು ಎಲೈ ಅನ್ಸಾರ್‌ಗಳೆ! ನೀವು ನನ್ನ ಪ್ರಶ್ನೆಗಳಿಗೆ ಏಕೆ ಉತ್ತರ ನೀಡುವುದಿಲ್ಲ? ಅವರೆಲ್ಲರು ಹೇಳಿದರು ಯಾ ರಸುಲಲ್ಲಾಹ್! ನಾವು ನಿಮಗೆ ಏನು ಉತ್ತರ ನೀಡಬೇಕು ಅಲ್ಲಾಹನ ಅನುಗ್ರಹಗಳು ಹಾಗೂ ದಯೆ ಅಲ್ಲಾಹನ ಸಂದೇಶವಾಹಕರಿಗಿದೆ. ರಸೂಲುಲ್ಲಾಹ್(ಸ) ಹೇಳಿದರು ಅಲ್ಲಾಹನನಾಣೆ! ನೀವು ಬಯಸಿದ್ದರೆ ಹೀಗೆ ಹೇಳಬಹುದಾಗಿತ್ತು ಈ ನಿಮ್ಮ ಉತ್ತರವು ಸರಿಯಾಗಿರುತ್ತಿತ್ತು ಮತ್ತು ಅದರ ದೃಢೀಕರಣವೂ ಆಗುತ್ತಿತ್ತು. ಅಂದರೆ ನೀವು ಆಗಮಿಸಿದಾಗ ನಿಮ್ಮ ಪರಿಸ್ಥಿತಿ ಹೇಗಿತ್ತೆಂದರೆ ನಿಮ್ಮನ್ನು ತ್ಯಜಿಸಲಾಗಿತ್ತು ಆಗ ನಾವು ನಿಮ್ಮನ್ನು ನಂಬಿದ್ದೆವು. ನಿಮ್ಮನ್ನು ನಿಮ್ಮ ಸಂಬಂಧಿಕರು ತ್ಯಜಿಸಿದ್ದರು. ಆಗ ನಾವು ನಿಮಗೆ ಸಹಾಯ ಮಾಡಿದ್ದೆವು. ನೀವು ನಮ್ಮ ಬಳಿಗೆ ಬಂದಾಗ ನಾವು ನಿಮ್ಮನ್ನು ಸ್ವೀಕರಿಸಿದೆವು. ನಾವು ನಿಮ್ಮನ್ನು ದೊಡ್ಡ ಗೋತ್ರದವರಾಗಿ ಪಡೆದಾಗ ನಾವು ನಿಮ್ಮೊಂದಿಗೆ ಸಹೋದರ ಸಂಬಂಧವನ್ನು ಸ್ಥಾಪಿಸಿಕೊಂಡೆವು. ಅನ್‌ಸಾರ್‌ಗಳೇ, ಲೋಕದ ತುಚ್ಛ ಸಂಪತ್ತನ್ನು ನಾನು ನಿಮಗೆ ನೀಡಲಿಲ್ಲ ಎಂದು ದುಃಖವಾಗುತ್ತಿದೆಯೇ? ಹುಝೂರ್ ಸಲ್ಲಲ್ಲಾಹು ಅಲೈಹಿವ ಸಲ್ಲಮರು ಇಷ್ಟು ಹೇಳಿದ ನಂತರ ಹೀಗೆ ಹೇಳಿದರು ನೀವು ಇವೆಲ್ಲವನ್ನು ಉತ್ತರವಾಗಿ ಹೇಳಬಹುದಾಗಿತ್ತು. ಪುನಃ ಹುಝೂರ್(ಸ) ನುಡಿದರು ಎಲೈ ಅನ್ಸಾರ್‌ಗಳೆ! ನೀವು ಲೋಕದ ತುಚ್ಛ ಸಂಪತ್ತನ್ನು ನಿಮಗೆ ನೀಡಲಿಲ್ಲ ಎಂಬ ಕಾರಣದಿಂದ ನಿಮಗೆ ದುಃಖವಾಗುತ್ತಿದೆಯೇ? ನಾನು ಈ ಜನಾಂಗದವ ಹೃದಯ ಸಂಕಲನಕ್ಕಾಗಿ ಮತ್ತು ಅವರು ಇಸ್ಲಾಮ್ ಸ್ವೀಕರಿಸಲಿ ಎಂದು ನೀಡಲಾಗಿದೆ ಹಾಗೂ ನಾನು ನಿಮ್ಮನ್ನು ಇಸ್ಲಾಮ್‌ಗೆ ಅರ್ಪಿಸಿದ್ದೇನೆ. ಎಲೈ ಅನ್‌ಸಾರ್‌ಗಳೇ! ಜನರು ಆಡು ಕುರಿಗಳನ್ನೂ ಒಂಟೆಗಳನ್ನೂ ತೆಗೆದುಕೊಂಡು ಹೋಗುತ್ತಿರುವಾಗ ನೀವು ಅಲ್ಲಾಹನ ರಸೂಲರನ್ನು ತೆಗೆದುಕೊಂಡು ನಿಮ್ಮ ಮನೆಗಳಿಗೆ ಮರಳಿ ಹೋಗುತ್ತಿರುವಿರಿ ಎಂಬ ಬಗ್ಗೆ ನಿಮಗೆ ಸಂತೋಷವಿಲ್ಲವೇ? ಯಾರ ಕೈಯಲ್ಲಿ ಮುಹಮ್ಮದರ ಪ್ರಾಣವಿದೆಯೋ ಅವನ ಹೆಸರಲ್ಲಿ ಆಣೆ ಹಾಕಿ ಹೇಳುತ್ತೇನೆ ನಾನು ಹಿಜ್‌ರತ್ ಮಾಡದಿರುತ್ತಿದ್ದರೆ ನಾನು ಅನ್‌ಸಾರ್‌ಗೆ ಸೇರಿದ ಒಬ್ಬ ಮಾತ್ರವಾಗುತ್ತಿದ್ದೆನು. ಅನಂತರ ಪ್ರಾರ್ಥಿಸಿದರು.: ಓ ಅಲ್ಲಾಹ್, ಅನ್‌ಸಾರ್‌ಗಳ ಮೇಲೆ ಕಾರುಣ್ಯದೋರು, ಅನ್‌ಸಾರ್‌ಗಳ ಮಕ್ಕಳ ಮೇಲೆ ಕಾರುಣ್ಯದೋರು, ಅನ್‌ಸಾರ್‌ಗಳ ಮಕ್ಕಳ ಮಕ್ಕಳ ಮೇಲೆಯೂ ಕಾರುಣ್ಯದೋರು. ವರದಿಗಾರ ಹೇಳುತ್ತಾರೆ: ಆಗ ಎಲ್ಲಾ ಅನ್‌ಸಾರ್‌ಗಳು ಅಳಲು ತೊಡಗಿದರು. ಅವರ ಗಡ್ಡಗಳು ಅಶ್ರುಧಾರೆಯಿಂದ ಒದ್ದೆಯಾದುವು. ಅವರು ಹೇಳಿದರು: ನೀವು ಹಂಚಿಕೊಟ್ಟುದರ ಬಗ್ಗೆ ನಾವು ತೃಪ್ತರಾಗಿದ್ದೇವೆ. ನಮಗೆ ನೀವೇ ಸಾಕು. ತದನಂತರ ರಸೂಲುಲ್ಲಾಹ್(ಸ) ಹಿಂದಿರುಗಿದರು ಮತ್ತು ಜನರು ಸಹ ಹೊರಟು ಹೋದರು. (ಮಸ್ನದ್ ಅಹ್ಮದ್ ಬಿನ್ ಹಂಬಲ್ ಸಂಪುಟ–4, ಪುಟ–192–193, ಆಲಿಮುಲ್ ಕುತುಬ್ ಬೈರೂತ್ 1998, ಅಟ್ಲಸ್ ಸೀರ್ ನಬವಿ(ಸ) ಪುಟ–408–409, ದಾರುಸ್ಸಲಾಮುರ್ರಿಯಾಝ್ 1424 ಹಿ, ಅಸ್ಸೀರತುಲ್ ಹಲಬಿಯಾ ಸಂಪುಟ–3, ಪುಟ–163, 175, ಬಾಬ್ ಗಝ್ವ ಉತ್ತಾಇಫ್ ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002)

ಹಜ್ಜತುಲ್ ವಿದಾ ಸಂದರ್ಭದಲ್ಲಿ ಮದೀನದಿಂದ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮಕ್ಕದಲ್ಲಿ ಹಜ್‌ಗೋಸ್ಕರ ತಲಪಿದಾಗ ಅಲ್ಲಿ ಅವರ ಸವಾರಿ ಮೃಗ ಕಾಣೆಯಾಯಿತು. ಹುಝೂರ್ ಸಲ್ಲಲ್ಲಾಹು ಅಲೈಹಿವಸಲ್ಲಮ್ ಮತ್ತು ಹಝ್ರತ್ ಅಬುಬಕ್ಕರ್(ರ) ಅವರ ಸವಾರಿ ಒಂದೇ ಆಗಿತ್ತು ಅದು ಹಝ್ರತ್ ಅಬುಬಕ್ಕರ್(ರ) ಅವರ ಸೇವಕನ ಹತ್ತಿರ ಇತ್ತು ಅವನಿಂದ ಅದು ರಾತ್ರಿ ಹೊತ್ತು ಕಾಣೆಯಾಗಿತ್ತು. ಹಝ್ರತ್ ಸಫ್ವಾನ್ ಬಿನ್ ಮುಅತ್ತಲ್(ರ) ಆ ತಂಡದಲ್ಲಿ ಎಲ್ಲರಿಗಿಂತ ಹಿಂದೆ ಇದ್ದರು. ಅವರು ತಮ್ಮೊಂದಿಗೆ ಆ ಸವಾರಿ ತೆಗೆದುಕೊಂಡು ಬಂದರು ಅದರ ಮೇಲೆ ಅವರ ಸಾಮಗ್ರಿಗಳು ಸಹ ಇದ್ದವು. ಅಂದರೆ ಕಾಣೆಯಾಗಿದ್ದ ಸವಾರಿ ಮೃಗವು ಮರಳಿ ತಂದರು ಅದರ ಮೇಲೆ ಅವರ ಸಾಮಗ್ರಿಯೂ ಇತ್ತು.

ಹಝ್ರತ್ ಸಅದ್ ಬಿನ್ ಉಬಾದರಿಗೆ ಈ ವಿಷಯ ತಿಳಿದಾಗ ಅವರು ತಮ್ಮ ಪುತ್ರ ಖೈಸ್‌ರೊಂದಿಗೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಬಂದರು. ಅವರೊಂದಿಗೆ ಒಂದು ಒಂಟೆ ಇತ್ತು. ಅದರ ಮೇಲೆ ಪ್ರಯಾಣಕ್ಕೆ ಆವಶ್ಯಕವಾದ ಸಾಮಗ್ರಿಗಳಿದ್ದುವು. ಅವರು ಹೇಳಿದರು: ಯಾ ರಸೂಲುಲ್ಲಾಹ್, ನಿಮ್ಮ ಸಾಮಗ್ರಿಗಳು ಹೇರಿದ್ದ ಒಂಟೆ ಕಾಣೆಯಾಗಿದೆ ಎಂದು ನಮಗೆ ತಿಳಿಯಿತು. ನಮ್ಮ ಈ ಸವಾರಿ ಮೃಗವನ್ನು ಅದಕ್ಕೆ ಬದಲಾಗಿ ಸ್ವೀಕರಿಸಿರಿ. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಆ ಸವಾರಿ ಮೃಗವನ್ನು ಅಲ್ಲಾಹನು ನಮ್ಮ ಬಳಿಗೆ ತಂದಿದ್ದಾನೆ. ಎಂದರೆ ಕಾಣೆಯಾಗಿದ್ದ ಮೃಗ ಮರಳಿ ಲಭಿಸಿದೆ. ನೀವಿಬ್ಬರು ನಿಮ್ಮ ಸವಾರಿ ಮೃಗವನ್ನು ತೆಗೆದುಕೊಂಡು ಹೋಗಿರಿ. ಅಲ್ಲಾಹ್ ತಮಗಿಬ್ಬರಿಗೂ ಅನುಗ್ರಹ ನೀಡಲಿ. (ಸಬ್‌ಲುಲ್ ಹುದಾ ಸಂಪುಟ–8, ಪುಟ–460, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 1993, ಕಿತಾಬುಲ್ ಮಗಾಝಿ ಸಂಪುಟ–3, ಪುಟ–1093, ಆಲಿಮುಲ್ ಕುತುಬ್ ಇಲ್‌ಮಿಯ ಬೈರೂತ್ 1984)

ಹಝ್ರತ್ ಉಸಾಮ ಬಿನ್ ಝೈದ್(ರ) ವರದಿ ಮಾಡುತ್ತಾರೆ ನಬಿ ಕರೀಂ ಸಲಲ್ಲಾಹು ಅಲೈಹಿವಸಲ್ಲಮರ ಸುಪುತ್ರಿ ಹುಝೂರ್(ಸ) ಅವರಿಗೆ ತನ್ನ ಪುತ್ರ ಮರಣದ ಸಮೀಪದ ಸ್ಥಿತಿಯಲ್ಲಿದ್ದಾನೆ ಅವರ ಬಳಿ ಬರಲು ಹೇಳಿ ಕಳುಹಿಸಿದರು. ಇದಕ್ಕೆ ಪ್ರವಾದಿ ಸಲಲ್ಲಾಹು ಅಲೈಹಿವಸಲ್ಲಮರು ಹೇಳಿದರು ಎಲ್ಲವೂ ಅಲ್ಲಾಹನದ್ದೇ ಆಗಿದೆ ಅವನಿಗೆ ಬೇಕಾದ ವಸ್ತುವನ್ನು ತೆಗೆದುಕೊಳ್ಳುವನು ಮತ್ತು ನೀಡುವನು ಎಲ್ಲದಕ್ಕೂ ಅವನ ಬಳಿ ಒಂದು ಸಮಯವಿದೆ. ಆದ್ದರಿಂದ ತಾಳ್ಮೆ ವಹಿಸಬೇಕು ಮತ್ತು ಅಲ್ಲಾಹನಿಗೆ ಕೃತಜ್ಞತೆ ತೋರಿಸಬೇಕು. ತದನಂತರ ಅವರು ಪುನಃ ಕರೆಸಿದರು ಮತ್ತು ಹುಝೂರ್(ಸ) ಅವರನ್ನು ಅಲ್ಲಾಹನ ಮೇಲೆ ಆಣೆ ಹಾಕಿ ಬರಲು ಹೇಳಿದರು. ಇದಕ್ಕೆ ಹುಝೂರ್(ಸ)ರು ಮತ್ತು ತಮ್ಮ ಸಹಾಬರಾದ ಹಝ್ರತ್ ಸಅದ್ ಬಿನ್ ಅಬಿ ಉಬಾದ(ರ), ಹಝ್ರತ್ ಮುಆಝ್ ಬಿನ್ ಜಬಲ್(ರ), ಹಝ್ರತ್ ಅಬಿ ಬಿನ್ ಕಅಬ್(ರ), ಹಝ್ರತ್ ಝೈದ್ ಬಿನ್ ಸಾಬಿತ್(ರ) ಮುಂತಾದವರೊಂದಿಗೆ ಹೊರಟರು. ತಾವು ಅಲ್ಲಿಗೆ ತಲುಪಿದಾಗ ಆ ಮಗುವನ್ನು ತೆಗೆದುಕೊಂಡು ಬರಲಾಯಿತು ಆ ಸಂದರ್ಭದಲ್ಲಿ ಆ ಮಗು ಕೊನೆಯುಸಿರು ಬಿಡುತ್ತಿದ್ದನು. ಮಗುವಿನ ಈ ಪರಿಸ್ಥಿತಿ ಕಂಡು ಹುಝೂರ್(ಸ) ಅವರ ಕಣ್ಣಿನಿಂದ ಕಂಬನಿ ಸುರಿಯಲು ಪ್ರಾರಂಭವಾಯಿತು. ಹಝ್ರತ್ ಸಅದ್(ರ) ಹೇಳಿದರು ಯಾ ರಸೂಲಲ್ಲಾಹ್! ಇದು ಏನು? ಇದಕ್ಕೆ ಹುಝೂರ್(ಸ) ನುಡಿದರು ಇದು ಅಲ್ಲಾಹನು ತನ್ನ ದಾಸರ ಹೃದಯಗಳಲ್ಲಿ ಇರಿಸಿರುವಂತಹ ರಹ್ಮತ್ ಆಗಿದೆ. ಮತ್ತು ಅಲ್ಲಾಹನು ಸಹ ತನ್ನ ದಾಸರಲ್ಲಿ ಯಾರು ಬೇರೆಯವರ ಮೇಲೆ ಕರುಣೆ ತೋರಿಸುತ್ತಾರೋ ಅವರಿಗೆ ಕರುಣಿಸುವನು. (ಸಹೀಹ್ ಅಲ್‌ಬುಖಾರಿ ಕಿತಾಬುಲ್ ಜನಾಇಝ್, ಹದೀಸ್–1284) ಈ ಸ್ಥಿತಿ ಭಾವನಾತ್ಮಕ ಸ್ಥಿತಿ ಆಗಿರಲಿಲ್ಲ ಇದು ಕೇವಲ ಅಲ್ಲಾಹನ ಅನುಗ್ರಹವಾಗಿದೆ.

ಹಝ್ರತ್ ಅಬ್ದುಲ್ಲಾ ಬಿನ್ ಉಮರ್ ರಝಿಯಲ್ಲಾಹು ಅನ್‌ಹುಮಾ ಹೇಳುತ್ತಾರೆ: ಹಝ್ರತ್ ಸಅದ್ ಬಿನ್ ಉಬಾದ ಯಾವುದೋ ರೋಗ ಬಾಧಿತರಾದಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಜೊತೆ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್, ಹಝ್ರತ್ ಸಅದ್ ಬಿನ್ ಅಬೀ ವಖಾಸ್ ಮತ್ತು ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್‌ರನ್ನು ಕರೆದುಕೊಂಡು ಹಝ್ರತ್ ಸಅದ್ ಬಿನ್ ಉಬಾದರನ್ನು ಸಂದರ್ಶಿಸಲು ಹೋದರು. ಆಗ ಸಅದರ ಮನೆಯವರು ದುಃಖದಿಂದಿರುವುದಾಗಿ ಕಂಡರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಕೇಳಿದರು: ಏನು ಅವರು ಮೃತರಾದರೇ? ಮನೆಯವರು ಹೇಳಿದರು: ಇಲ್ಲ, ಮೃತರಾಗಿಲ್ಲ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹಝ್ರತ್ ಸಅದರ ಸಮೀಪ ಹೋದರು. ಅವರ ಸ್ಥಿತಿಯನ್ನು ನೋಡಿ ಅತ್ತರು. ಆಗ ಜನರು ಸಹ ಅಳತೊಡಗಿದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ನೋಡಿರಿ, ಕಣ್ಣೀರು ಸುರಿಸುವ ಕಾರಣದಿಂದ ಅಲ್ಲಾಹನು ಶಿಕ್ಷಿಸುವುದಿಲ್ಲ. ಹೃದಯ ದುಃಖಿಸುವ ಕಾರಣದಿಂದಲೂ ಅಲ್ಲಾಹನು ಶಿಕ್ಷಿಸುವುದಿಲ್ಲ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ನಾಲಗೆ ಕಡೆಗೆ ಸೂಚಿಸಿ ಹೇಳಿದರು: ಆದರೆ ಇದರ ಕಾರಣದಿಂದ ಶಿಕ್ಷೆ ನೀಡುವನು. ಅಥವಾ ಕಾರುಣ್ಯ ನೀಡುವನು. ಮನೆಯವರು ಗೋಳಿಡುತ್ತಾ ರೋದಿಸಿದರೆ ಮೃತನಾದವನಿಗೂ ಶಿಕ್ಷೆ ದೊರಕುತ್ತದೆ. ಗೋಳಿಡುತ್ತಾ ರೋಧಿಸುವುದು ತಪ್ಪಾಗಿದೆ. (ಸಹೀಹ್ ಅಲ್‌ಬುಖಾರಿ ಕಿತಾಬುಲ್ ಜನಾಝಾ ಹದೀಸ್–1304)

ಗೋಳಿಡುತ್ತಾ ರೋಧಿಸುವುದು ತಪ್ಪಾಗಿದೆ. ಆ ಸಂದರ್ಭದಲ್ಲಿ ಅವರ ಪರಿಸ್ಥಿತಿ ಹೀಗಿದ್ದರಬಹುದು ಅಥವಾ ಪ್ರವಾದಿ(ಸ) ಅವರು ದುಆ ಮಾಡುತ್ತಿರುವಾಗ ಅವರಿಗೆ ಅಳು ಬಂದಿರಬಹುದು. ಆದರೆ ಉಳಿದವರು ಹುಝೂರ್(ಸ) ಅವರ ಈ ಪರಿಸ್ಥಿತಿ ಕಂಡು ಅವರ ಕೊನೆಗಳಿಗೆ ಬಂದಿದ್ದರಿಂದ ಅಳುತ್ತಿದ್ದಾರೆ ಎಂದು ಭಾವಿಸಿರಬಹುದು. ಅದಕ್ಕೆ ಹುಝೂರ್(ಸ) ನುಡಿದರು: ಅಳುವುದು ತಪ್ಪಲ್ಲ ಆದರೆ ತೆಟ್ಟು ವಿಷಯವಾಗಿದೆ. ನಿಷೇಧಿಸಲಾದ ವಿಷಯವೇನೆಂದರೆ ಮನುಷ್ಯ ಅಲ್ಲಾಹನ ಪೂರ್ವ ನಿರ್ಧಾರದ ಮೇಲೆ ಕೋಪಗೊಳ್ಳುವುದು ನಿಷೇಧಿಸಲಾಗಿದೆ. ಆದ್ದರಿಂದ ಕಂಬನಿಯು ಅಲ್ಲಾಹನ ಅನುಮೋದನೆ ಗಳಿಸುವುದಕ್ಕೆ ಸುರಿದರೆ ಅಲ್ಲಾಹನ ಕರುಣೆ ಪಡೆಯಬಹುದು ಇಲ್ಲದಿದ್ದರೆ ಕೋಪದಲ್ಲಿ ಸುರಿದರೆ ಗೋಳಿಡುತ್ತಾ ರೋಧಿಸಿದರೆ ಶೀಕ್ಷೆ ಪಡೆಯುತ್ತಾರೆ.

ಹಝ್ರತ್ ಅಬ್ದುಲ್ಲಾ ಬಿನ್ ಉಮರ್(ರ) ಅವರು ವರದಿ ಮಾಡುತ್ತಾರೆ ಅವರು ಹೇಳಿದರು ನಾವು ರಸೂಲುಲ್ಲಾಹ್ ಸಲ್ಲಲಾಹು ಅಲೈಹಿವಸಲ್ಲಮರ ಬಳಿ ಇದ್ದೆವು ಅನ್ಸಾರ್‌ರಿಂದ ಓರ್ವ ವ್ಯಕ್ತಿ ತಮ್ಮ ಬಳಿ ಬಂದು ಸಲಾಮ್ ಹೇಳಿದನು. ರಸೂಲ್ ಸಲಲ್ಲಾಹು ಅಲೈಹಿವಸಲ್ಲಮರು ನುಡಿದರು ಎಲೈ ಅನ್ಸಾರ್ ಸಹೋದರನೇ! ನನ್ನ ಸಹೋದರ ಸಅದ್ ಬಿನ್ ಉಬಾದ(ರ) ಅವರು ಹೇಗಿದ್ದಾರೆ? ಅವನು ಹೇಳಿದನು ಉತ್ತಮವಾಗಿದ್ದಾರೆ. ರಸೂಲ್ ಸಲಲ್ಲಾಹು ಅಲೈಹಿವಸಲ್ಲಮರು ಹೇಳಿದರು ನಿಮ್ಮಲ್ಲಿ ಯಾರು ಅವರ ಕ್ಷೇಮ ವಿಚಾರಿಸುವಿರೀ. ನಂತರ ಅವರು ಮತ್ತು ಅವರೊಂದಿಗೆ ಏಳೆಂಟು ಸಹಾಬರವರು ಎದ್ದು ನಿಂತರು ಮತ್ತು ಹತ್ತಕ್ಕಿಂತ ಹೆಚ್ಚು ಜನರಿದ್ದೆವು. ನಾವು ಯಾರು ಪಾದರಕ್ಷೆಗಳು ಧರಿಸಿರಲಿಲ್ಲ, ಟೋಪಿಗಳು ಧರಿಸಿರಲಿಲ್ಲ ಹಾಗೂ ಅಂಗಿಯು ಸಹ ಧರಿಸಿರಲಿಲ್ಲ. ಅಂದರೆ ಬಹಳ ಆವಸರದಲ್ಲಿ ಹುಝೂರ್(ಸ) ಅವರೊಂದಿಗೆ ಹೊರಟಿದ್ದೆವು. ಅವರು ಹೇಳುತ್ತಾರೆ ನಾನು ನಡೆದುಕೊಂಡು ಸಅದ್ ಬಿನ್ ಉಬಾದ(ರ) ಅವರ ಬಳಿಗೆ ತಲುಪಿದೆವು. ಅವರ ಸಮೀಪದಲ್ಲಿದ್ದ ಎಲ್ಲಾ ಜನರು ಹಿಂದಕ್ಕೆ ಸರಿದರು ಹೀಗೆ ಪ್ರವಾದಿ ಸಲಲ್ಲಾಹು ಅಲೈಹಿವಸಲ್ಲಮರು ಮತ್ತು ಅವರ ಸಂಗಡಿಗರು ಮುಂದಕ್ಕಾದರು. ಇದು ಸಹೀಹ್ ಮುಸ್ಲಿಮ್‌ನ ವರದಿ ಆಗಿದೆ. (ಸಹೀಹ್ ಮುಸ್ಲಿಮ್ ಕಿತಾಬುಲ್ ಜನಾಎಝ್, ಹದೀಸ್–2138)

ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾ ಬಿನ್ ಉಮ್‌ರೊ ಬಿನ್ ಹರಾಮ್(ರ) ವರದಿ ಮಾಡುತ್ತಾರೆ ನನ್ನ ತಂದೆ ನನಗೆ ಹರೀರ ತಯಾರಿಸಲು ಆದೇಶಿಸಿದರು. ನಾನು ಹರೀರ ತಯಾರಿಸಿದೆ. ಹರೀರ ಒಂದು ಬಗೆಯ ಪ್ರಸಿದ್ಧ ಆಹಾರವಾಗಿದೆ ಅದು ಹಿಟ್ಟು, ತುಪ್ಪ ಮತ್ತು ನೀರಿನಿಂದ ತಯಾರಿಸಲಾಗುತ್ತದೆ ಕೆಲವರು ಹಿಟ್ಟು ಮತ್ತು ಹಾಲಿನಿಂದ ತಯಾರಿಸಲಾಗುತ್ತದೆ ಎಂದಿದ್ದಾರೆ. ಏನೇ ಇರಲಿ ನಾನು ಅವರ ಆಜ್ಞೆಯ ಪ್ರಕಾರ ಹರೀರ ರಸೂಲ್ ಸಲಲ್ಲಾಹು ಅಲೈಹಿವಸಲ್ಲಮರ ಬಳಿಗೆ ತಂದೆನು. ನಬಿ ಕರೀಂ ಸಲ್ಲಲ್ಲಾಹು ಅಲೈಹಿವ ಸಲ್ಲಮರು ಆಗ ಮನೆಯಲ್ಲಿದ್ದರು. ಅವರು ಹೇಳಿದರು ಎಲೈ ಜಾಬಿರ್(ರ) ಇದು ಮಾಂಸವಾಗಿದಿಯೇ? ಅದಕ್ಕೆ ನಾನು ಉತ್ತರಿಸಿದೆ ಇಲ್ಲ ಯಾ ರಸೂಲುಲ್ಲಾ(ಸ) ಇದು ಹರೀರ ಆಗಿದೆ ಇದನ್ನು ನಾನು ನನ್ನ ತಂದೆ ಆಜ್ಞೆಯಿಂದ ತಯಾರಿಸಿದ್ದೇನೆ ಮತ್ತು ಅವರ ಆಜ್ಞೆಯ ಮೇರೆಗೆ ಇದನ್ನು ನಾನು ನಿಮ್ಮ ಬಳಿ ತಂದಿರುವೆನು. ತದನಂತರ ನಾನು ಹಿಂದಿರುಗಿ ನನ್ನ ತಂದೆಯವರ ಬಳಿಗೆ ಬಂದೆನು. ನನ್ನ ತಂದೆ ಪ್ರಶ್ನಿಸಿದರು ನೀವು ಹುಝೂರ್ ಸಲ್ಲಲ್ಲಾಹು ಅಲೈಹಿವಸಲ್ಲಮರನ್ನು ಕಂಡಿದ್ದೀಯ. ನಾನು ಹೌದು ಎಂದು ಉತ್ತರಿಸಿದೆ ನನ್ನ ತಂದೆ ಮತ್ತೆ ಪ್ರಶ್ನಿಸಿದರು ರಸೂಲ್(ಸ) ಅವರು ನಿನಗೆ ಏನು ಹೇಳಿದರು? ನಾನು ಉತ್ತರಿಸಿದೆ ರಸೂಲ್(ಸ) ಅವರು ಎಲೈ ಜಾಬಿರ್! ಇದು ಮಾಂಸ ಆಗಿದೆಯೆ? ಎಂದು ಕೇಳಿದರು. ಇದನ್ನು ಆಲಿಸಿದ ನಂತರ ನನ್ನ ತಂದೆಯು ಹೇಳಿದರು ರಸೂಲ್(ಸ) ಅವರಿಗೆ ಮಾಂಸದ ಆಹಾರದ ಆಸೆ ಆಗುತ್ತಿರಬಹುದು. ತಂದೆಯು ಒಂದು ಆಡನ್ನು ವಧಿಸಿ ಅದನ್ನು ತಯಾರಿಸಿ ಹುಝೂರ್(ಸ) ಅವರ ಆಸ್ಥಾನದಲ್ಲಿ ನೀಡಿ ಬರಲು ನನಗೆ ಆಜ್ಞಾಪಿಸಿದರು. ಹಝ್ರತ್ ಜಾಬಿರ್(ರ) ಹೇಳುತ್ತಾರೆ ನಾನು ಆ ಆಡಿನ ಆಹಾರವನ್ನು ಹುಝೂರ್(ಸ) ಅವರ ಸೇವೆಯಲ್ಲಿ ನೀಡಿದೆನು. ರಸೂಲ್(ಸ) ಹೇಳಿದರು ಅನ್ಸಾರ್‌ಗಳಿಗೆ ನನ್ನ ಕಡೆಯಿಂದ ಉತ್ತಮ ಪ್ರತಿಫಲ ನೀಡಲಿ ವಿಶೇಷವಾಗಿ ಅಬ್ದುಲ್ಲಾ ಬಿನ್ ಉಮ್ರೋ ಬಿನ್ ಹಝಾಮ್(ರ) ಮತ್ತು ಸಅದ್ ಬಿನ್ ಉಬಾದ(ರ) ಅವರಿಗೆ. (ಅಲ್‌ಮುಸ್ತದ್ರಿಕ್ ಅಲಸ್ಸಹೀಹೈನ್ ಸಂಪುಟ–5, ಪುಟ–39–40, ಕಿತಾಬುಲ್ ಅತ್‌ಇಮ ದಾರುಲ್ ಫಿಕರ್ 2001, ಫತ್‌ಹುಲ್‌ಬಾರಿ ಕಿತಾಬುಲ್ ಅತ್‌ಇಮ ಸಂಪುಟ–9, ಪುಟ–678, ಕುತುಬ್ ಖಾನ ಕರಾಚಿ, ಜಹಾಂಗೀರ್ ಉರ್ದು ಲುಗತ್ ಪುಟ–649, ಜಹಾಂಗೀರ್ ಬುಕ್ಸ್ ಲಾಹೋರ್, London 1865 539: Plexicon Part 2)

ಹಝ್ರತ್ ಅಬೂ ಉಸೈದ್ ವರದಿ ಮಾಡುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಅನ್‌ಸಾರ್‌ಗಳ ಕುಟುಂಬಗಳಲ್ಲಿ ಅತ್ಯುತ್ತಮ ಕುಟುಂಬ ಬನೂ ನಜ್ಜಾರ್ ಕುಟುಂಬವಾಗಿದೆ. ಅನಂತರದ ಸ್ಥಾನ ಕ್ರಮವಾಗಿ ಬನೂ ಅಬ್ದು ಅಶ್‌ಹಲ್‌ಗೆ, ಬನೂ ಹಾರಿಸ್ ಬಿನ್ ಖಝ್ರಜ್‌ಗೆ ಮತ್ತು ಬನೂ ಸಾಯಿದಕ್ಕೆ. ಅನ್‌ಸಾರ್‌ಗಳ ಎಲ್ಲಾ ಕುಟುಂಬಗಳಲ್ಲೂ ಒಳಿತು ಇದೆ. ಈ ಮಾತನ್ನು ಆಲಿಸಿದಾಗ ಹಝ್ರತ್ ಸಅದ್ ಬಿನ್ ಉಬಾದ ಹೇಳಿದರು ಮತ್ತು ಅವರು ಇಸ್ಲಾಮ್‌ನಲ್ಲಿ ಅತ್ಯನ್ನತ ವ್ಯಕ್ತಿತ್ವದವರಾಗಿದ್ದರು. ಇದು ಸಹೀಹ್ ಬುಖಾರಿಯ ಹದೀಸ್ ಆಗಿದೆ ಅಂದರೆ ಒಳ್ಳೆಯ ಸ್ವಭಾವದವರಾಗಿದ್ದರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರೆಲ್ಲಾ ನಮಗಿಂತ ಶ್ರೇಷ್ಠರು ಎಂದು ಹೇಳಿದ್ದಾರೆ. ಆಗ ಅವರೊಂದಿಗೆ ಹೇಳಲಾಯಿತು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತಮಗೂ ಅನೇಕ ಜನರ ಮೇಲೆ ಶ್ರೇಷ್ಠತೆ ನೀಡಿದ್ದಾರೆ. (ಸಹೀಹ್ ಅಲ್‌ಬುಖಾರಿ ಕಿತಾಬುಲ್ ಮನಾಖಿಬ್ ಹದೀಸ್–3807)

ಹಝ್ರತ್ ಅಬೂ ಉಸೈದ್ ವರದಿ ಮಾಡುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಅನ್‌ಸಾರ್‌ಗಳ ಕುಟುಂಬಗಳಲ್ಲಿ ಅತ್ಯುತ್ತಮ ಕುಟುಂಬ ಬನೂ ನಜ್ಜಾರ್ ಕುಟುಂಬವಾಗಿದೆ. ಅನಂತರದ ಸ್ಥಾನ ಕ್ರಮವಾಗಿ ಬನೂ ಅಬ್ದು ಅಶ್‌ಹಲ್‌ಗೆ, ಬನೂ ಹಾರಿಸ್ ಬಿನ್ ಖಝ್ರಜ್‌ಗೆ ಮತ್ತು ಬನೂ ಸಾಯಿದಕ್ಕೆ. ಅನ್‌ಸಾರ್‌ಗಳ ಎಲ್ಲಾ ಕುಟುಂಬಗಳಲ್ಲೂ ಒಳಿತು ಇದೆ. ವರದಿಗಾರರಾದ ಅಬುಸಲ್ಮ ಹೇಳುತ್ತಾರೆ ಹಝ್ರತ್ ಅಬು ಉಸೈದ್(ರ) ಅವರು ಹೇಳಿದರು ರಸೂಲುಲ್ಲಾಹ್(ಸ) ಅವರಿಂದ ನಾನು ವರದಿ ಮಾಡಿದರೆ ನನಗೆ ಅಪಮಾನ ಗೊಳಿಸುತ್ತಾರೆ. ಒಮ್ಮೆ ನಾನು ತಪ್ಪು ಹೇಳುತ್ತಿದ್ದರೆ ನಾನು ಅವಶ್ಯಕವಾಗಿ ನನ್ನ ಗೋತ್ರ ಬನುಸಾಯಿದದಿಂದ ಪ್ರಾರಂಭಿಸುತ್ತಿದ್ದೆ. ಈ ಮಾತು ಹಝ್ರತ್ ಸಅದ್ ಬಿನ್ ಉಬಾದ(ರ) ಅವರು ಆಲಿಸಿದಾಗ ಬಹಳ ಸಂಕಟಕ್ಕೆ ಒಳಗಾದರು. ಅವರು ಹೇಳಿದರು ರಸೂಲ್(ಸ) ಅವರು ಅವರೆಲ್ಲರಿಗಿಂತ ಶ್ರೇಷ್ಠರು ಎಂದಿದ್ದಾರೆ ನಮ್ಮನ್ನು ಹಿಂದಕ್ಕೆ ತಳ್ಳಿದ್ದಾರೆ ನಾನು ಆ ನಾಲ್ಕು ಜನರಲ್ಲಿ ಕೊನೆಯವರಾಗಿದ್ದೇವೆ ಆದ್ದರಿಂದ ಅವರು ಹೇಳಿದರು: ಅಂದರೆ ಸಅದ್ ಬಿನ್ ಉಬಾದ ಹೇಳಿದರು ನನ್ನ ಕತ್ತೆಯನ್ನು ತಯಾರಿಯೊಂದಿಗೆ ಇರಿಸಿರಿ. ನಾನು ರಸೂಲ್(ಸ) ಅವರ ಬಳಿಗೆ ಹೋಗುವೆನು ಎಂದರು. ಅಷ್ಟರಲ್ಲಿ ಅವರ ಸಹೋದರ ಮಗನಾದ ಸಹಲ್ ಹೇಳಿದರು ತಾವು ಹುಝೂರ್(ಸ) ಅವರ ಬಳಿಗೆ ಹೋಗುತ್ತಿರುವ ಕಾರಣ ಅವರ ಮಾತನ್ನು ತ್ಯಜಿಸ ಬೇಕೆಂದಾಗಿದೆಯೇ? ಹುಝೂರ್(ಸ) ಹೇಳಿದ ಕ್ರಮವನ್ನು ತ್ಯಜಿಸಲು ಹೋಗುವಿರಾ. ಹುಝೂರ್(ಸ) ಎಲ್ಲರಿಗಿಂತ ಹೆಚ್ಚು ಅರಿಯುವವರಾಗಿದ್ದಾರೆ. ನಿಮ್ಮನ್ನು ಆ ನಾಲ್ಕು ಜನರಲ್ಲಿ ಹುಝೂರ್(ಸ) ಸೇರಿಸಿದ್ದಾರೆ ಇದು ಸಾಲದೆ? ಆಗ ಹಝ್ರತ್ ಸಅದ್(ರ) ತಮ್ಮ ಇರಾದೆಯನ್ನು ಬದಲಾಯಿಸಿಕೊಂಡು ಹೇಳಿದರು ಅಲ್ಲಾಹ್ ಮತ್ತು ಅವನ ಸಂದೇಶವಾಹಕರು ಹೆಚ್ಚು ಅರಿಯುವವರಾಗಿದ್ದಾರೆ. (ಸಹೀಹ್ ಮುಸ್ಲಿಮ್ ಕಿತಾಬ್ ಫಝಾಎಲುಸ್ಸಹಾಬ ಹದೀಸ್–6425)

ಹಿಶಾಮ್ ಬಿನ್ ಉರ್ವ ತನ್ನ ಪಿತನಿಂದ ವರದಿ ಮಾಡುತ್ತಾರೆ: ಹಝ್ರತ್ ಸಅದ್ ಬಿನ್ ಉಬಾದ ಹೀಗೆ ಪ್ರಾರ್ಥಿಸುತ್ತಿದ್ದರು: ಓ ಅಲ್ಲಾಹ್ ನನ್ನನ್ನು ಪ್ರಶಂಸಾರ್ಹನನ್ನಾಗಿ ಮಾಡು. ನನ್ನನ್ನು ಘನತೆಯುಳ್ಳವನನ್ನಾಗಿ ಮಾಡು. ಘನತೆಯು ಒಳ್ಳೆಯ ಕಾರ್ಯಗಳು ಮಾಡದೆ ಲಭಿಸುವುದಿಲ್ಲ ಅದೇ ರೀತಿ ಒಳ್ಳೆಯ ಕಾರ್ಯಗಳು ಸಂಪತ್ತಿಲ್ಲದೆ ಮಾಡಲು ಸಾಧ್ಯವಿಲ್ಲ. ಓ ಅಲ್ಲಾಹನೇ! ನನಗೋಸ್ಕರ ಸ್ವಲ್ಪ ಮಟ್ಟವೂ ಸಾಲದು ಮತ್ತು ನಾನು ಅದರಲ್ಲಿ

ಸರಿಯಾಗಿರುವುದಿಲ್ಲ. (ಅತ್ತಬಖಾತುಲ್ ಕುಬ್ರ ಸಂಪುಟ-3, ಪುಟ-461, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ಇದು ಅವರ ದುಆ ಮಾಡುವ ಶೈಲಿ ಆಗಿತ್ತು. ಸಹೀಹ್ ಮುಸ್ಲಿಮ್‌ನ ಒಂದು ವರದಿ ಹೀಗಿದೆ. ಹಝ್ರತ್ ಅಬುಹುರೈರ(ರ) ವರದಿ ಮಾಡುತ್ತಾರೆ ಅವರು ಹೇಳುತ್ತಾರೆ; ಹಝ್ರತ್ ಸಅದ್ ಬಿನ್ ಉಬಾದ(ರ) ಹೇಳುತ್ತಾರೆ ಯಾ ರಸೂಲಲ್ಲಾಹ್!! ಒಂದು ವೇಳೆ ನಾನು ನನ್ನ ಪತ್ನಿಯನ್ನು ಇನ್ನೊರ್ವ ವ್ಯಕ್ತಿಯೊಂದಿಗೆ ತಪ್ಪು ಕೆಲಸದಲ್ಲಿ ನೋಡಿದರೆ ನಾನು ಅವಳನ್ನು ನಾಲ್ಕು ಸಾಕ್ಷಿಗಳು ತರುವ ತನಕ ಮುಟ್ಟುವುದಿಲ್ಲ. ರಸೂಲ್(ಸ) ಹೇಳುತ್ತಾರೆ ಹೌದು. ಅದಕ್ಕೆ ಅವರು ಹೇಳಿದರು ಎಂದೂ ಇಲ್ಲ. ನಿಮ್ಮನ್ನು ಸಂದೇಶವಾಹಕನನ್ನಾಗಿ ಕಳುಹಿಸಿರುವಂತಹ ಆ ಅಲ್ಲಾಹನ ಆಣೆ ಒಂದು ವೇಳೆ ನನಗೆ ಅಂತಹ ಸನ್ನಿವೇಶ ಬಂದರೆ ನಾನು ತಕ್ಷಣವೇ ಖಡ್ಗದಿಂದ ತೀರ್ಮಾನಿಸುವೆನು. ಯಾವುದೇ ಸಾಕ್ಷಿ ಹುಡುಕುವುದಿಲ್ಲ ಬದಲಿಗೆ ಕೊಂದು ಹಾಕುವೆನು. ರಸೂಲ್(ಸ) ಹೇಳೀದರು ಓ ಜನರೇ ಆಲಿಸಿರೀ ನಿಮ್ಮ ಸರದಾರನು ಏನು ಹೇಳುತ್ತಿದ್ದಾನೆ ಎಂದು. ಅವನು ಬಹಳ ಸ್ವಾಭಿಮಾನಿ ಆಗಿದ್ದಾನೆ ಹಾಗೂ ಹೇಳಿದರು ನಾನು ಇವರಿಗಿಂತ ಹೆಚ್ಚು ಸ್ವಾಭಿಮಾನಿ ಆಗಿದ್ದೇನೆ ಅನಂತರ ಪುನಃ ಹೇಳಿದರು ಅಲ್ಲಾಹನು ನನಗಿಂತ ಹೆಚ್ಚು ಸಹವಾಭಿಮಾನ ಆಗಿದ್ದಾನೆ. (ಸಹೀಹ್ ಮುಸ್ಲಿಮ್ ಕಿತಾಬುಲ್ಲಾನ್ ಹದೀಸ್-3763)

ಮುಸ್ಲಿಮ್‌ನ ಇನ್ನೊಂದು ವರದಿಯಲ್ಲಿ ಇದರ ಬಗ್ಗೆ ಹೀಗೆ ಪ್ರಸ್ತಾಪಿಸಲಾಗಿದೆ. ಹಝ್ರತ್ ಮುಗೈರ ಬಿನ್ ಶೇಬ(ರ) ಅವರಿಂದ ವರದಿ ಆಗಿದೆ ಅವರು ಹೇಳುತ್ತಾರೆ ಹಝ್ರತ್ ಸಅದ್ ಬಿನ್ ಉಬಾದ(ರ) ಅವರು ಹೇಳಿದರು ಒಂದು ವೇಳೆ ನಾನು ನನ್ನ ಪತ್ನಿಯ ಹತ್ತಿರ ಅನ್ಯ ವ್ಯಕ್ತಿಯನ್ನು ಕಂಡರೆ ನಾನು ಅವನನ್ನು ಕೊಂದು ಹಾಕುವೆನು. ಈ ಮಾತು ಹುಝೂರ್(ಸ) ಅವರನ್ನು ತಲುಪಿದಾಗ ಹುಝೂರ್(ಸ) ಹೇಳಿದರು ನೀವು ಹಝ್ರತ್ ಸಅದ್(ರ) ಅವರ ಸ್ವಾಭಿಮಾನ ಕಂಡು ಆಶ್ಚರ್ಯಚಕಿತರಾಗುತ್ತಿದ್ದೀರ? ಅಲ್ಲಾಹನ ಆಣೆ! ನಾನು ಅವರಿಗಿಣತ ಹೆಚ್ಚು ಸ್ವಾಭಿಮಾನಿ ಆಗಿದ್ದೇನೆ ಮತ್ತು ಅಲ್ಲಾಹನು ನನಗಿಂತ ಹೆಚ್ಚು ಸ್ವಾಭಿಮಾನಿ ಆಗಿದ್ದಾನೆ. ಅಲ್ಲಾಹನು ತನ್ನ ಸ್ವಾಭಿಮಾನದಿಂದನೇ ಅವರಲ್ಲಿ ಕಂಡುಬರುವಂತಹ ಮತ್ತು ಕಂಡು ಬರದಂತಹ ಅಸಭ್ಯವರ್ತನೆಗಳನ್ನು ನಿಷೇಧಿಸಿದ್ದಾನೆ. ಮತ್ತು ಯಾರು ಅಲ್ಲಹನಿಗಿಂತ ಹೆಚ್ಚು ಸ್ವಾಭಿಮಾನಿ ಇಲ್ಲ ಮತ್ತು ಅಲ್ಲಾಹನಿಗಿಂತ ಹೆಚ್ಚು ಅಸಮ್ಮತಿಸುವುದನ್ನು ಇಷ್ಟಪಡುವುದಿಲ್ಲ. ಅಲ್ಲಾಹನಿಗಿಂತ ಹೆಚ್ಚು ಸ್ವಾಭೀಮಾನಿ ಯಾರೂ ಇಲ್ಲ, ತೌಬ(ಪಶ್ಚಾತಾಪ) ಮಾಡುವವರನ್ನು ಇಷ್ಟಪಡುತ್ತಾನೆ, ಕ್ಷಮೆಯನ್ನು ಪ್ರೀತಿಸುತ್ತಾನೆ. ಹುಝೂರ್(ಸ) ಹೇಳುತ್ತಾರೆ ಆದ್ದರಿಂದ ಅಲ್ಲಾಹನು ಸಂದೇಶವಾಹಕರನ್ನು ಸುವಾರ್ತೆ ನೀಡುವವನು ಮತ್ತು ಹೆದರಿಸುವವನ್ನಾಗಿ ಕಳುಹಿಸಿದ್ದಾನೆ. ಯಾವ ವ್ಯಕ್ತಿಯು ಅಲ್ಲಾಹನಿಗಿಂತ ಹೆಚ್ಚು ಹೊಗಳಿಕೆಯನ್ನು ಇಷ್ಟ ಪಡುವುದಿಲ್ಲ ಆದ ಕಾರಣ ಅಲ್ಲಾಹನು ಸ್ವರ್ಗದ ವಾಗ್ದಾನ ನೀಡಿದ್ದಾನೆ. (ಸಹೀಹ್ ಮುಸ್ಲಿಮ್ ಕಿತಾಬುಲ್ಲಾನ್, ಹದೀಸ್-3764)

ಅಲ್ಲಾಹನ ಹೊಗಳಿಕೆಯು ಕೆಟ್ಟತನದಿಂದ ಉಳಿಸುತ್ತದೆ ಆದ್ದರಿಂದ ಅಲ್ಲಾಹನು ಸ್ವರ್ಗದ ವಾಗ್ದಾನವು ನೀಡಿದ್ದಾನೆ ಅಂದರೆ ಅಲ್ಲಾಹನು ಶಿಕ್ಷೆ ನೀಡುವುದರಲ್ಲಿ ಅವಸರ ಮಾಡುವುದಿಲ್ಲ.

ಮುಸ್‌ನದ್ ಅಹ್ಮದ್ ಬಿನ್ ಹಂಬಲ್ ಎಂಬ ಹದೀಸ್ ಗ್ರಂಥದಲ್ಲಿ ಒಂದು ಹದೀಸ್ ಹೀಗೆ ವರದಿಯಾಗಿದೆ: ಹಝ್ರತ್ ಸಅದ್ ಬಿನ್ ಉಬಾದ ಹೇಳುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಅವರೊಂದಿಗೆ ಹೇಳಿದರು – ಇಂತಿಂತಹ ಗೋತ್ರದ ಸದಖಗಳ ಸಂಗ್ರಹದ ಮೇಲ್ವಿಚಾರಣೆ ಮಾಡಿರಿ. ಆದರೆ ಖಿಯಾಮತ್ ದಿನ ನೀವು ಹಾಜರಾಗುವಾಗ ನಿಮ್ಮ ಭುಜದಲ್ಲಿ ಅರಚುತ್ತಿರುವ ಒಂದು ಯುವ ಒಂಟೆಯನ್ನು ಹೊತ್ತು ಕೊಂಡು ಬರುವಂತಾಗದಿರಲಿ. (ಮಸ್ನದ್ ಅಹ್ಮದ್ ಬಿನ್ ಹಂಬಲ್ ಸಂಪುಟ-7, ಪುಟ-473, ಹದೀಸ್-22828, ಆಲಿಮುಲ್ ಕುತುಬ್ ಬೈರೂತ್ 1998) ಎಂದರೆ ಮೇಲ್ವಿಚಾರಣೆ ನಿಷ್ಠಾವಂತರಾಗಿ ನಡೆಸಬೇಕು. ನ್ಯಾಯಪಾಲನೆ ಮಾಡಬೇಕು. ವಂಚನೆ ಮಾಡಬಾರದು. ಆಗ ಹಝ್ರತ್ ಸಅದ್ ವಿನಂತಿಸಿದರು, ಯಾ ರಸೂಲುಲ್ಲಾಹ್ ಈ ಹೊಣೆಗಾರಿಕೆಯನ್ನು ಬೇರೆ ಯಾರಿಗಾದರೂ ವಹಿಸಿಕೊಡಿರಿ.

ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೀವಿತ ಕಾಲದಲ್ಲಿ ಅನ್‌ಸಾರ್‌ಗಳಲ್ಲಿ ಆರು ಜನರು ಪವಿತ್ರ ಖುರ್‌ಆನನ್ನು ಜಮಾಯಿಸಿದ್ದರು. ಅವರಲ್ಲಿ ಒಬ್ಬರು ಹಝ್ರತ್ ಸಅದ್ ಬಿನ್ ಉಬಾದ ಆಗಿದ್ದಾರೆ. (ಅಸದುಲ್‌ಗಾಬ ಸಂಪುಟ-1, ಪುಟ-503, ದಾರುಲ್ಕುತುಬ್ ಇಲ್‌ಮಿಯ ಬೈರೂತ್ 2003)

ಹಝ್ರತ್ ಮುಸ್ಲಿಹ್ ಮೌಊದ್(ರ) ಇದರ ಬಗ್ಗೆ ಹೇಳುತ್ತಾರೆ:

"ಅನ್ಸಾರ್‌ಗಳಲ್ಲಿ ಪ್ರಸಿದ್ಧ ಪವಿತ್ರ ಖುರ್‌ಆನ್ ಕಂಠಪಾಠ ಮಾಡಿರುವಂತಹ ಹುಫ್ಫಾಝ್‌ಗಳಲ್ಲಿ: ಉಬಾದ ಬಿನ್ ಸಾಮಿತ್(ರ), ಮುಆಝ್(ರ), ಮುಜಮ್ಮ ಬಿನ್ ಹಾರಿಸ್(ರ), ಫಝಾಲ ಬಿನ್ ಉಬೈದ(ರ), ಮುಸ್‌ಲಮ ಬಿನ್ ಮುಖಲ್ಲದ್(ರ), ಅಬುದ್ದರ್ದಾ(ರ), ಝೈದ್ ಬಿನ್ ಸಾಬಿತ್(ರ), ಉಬೈ ಬಿನ್ ಕಅಬ್(ರ), ಸಅದ್ ಬಿನ್ ಉಬಾದ(ರ), ಮತ್ತು ಉಮ್ಮೆ ವರ್ಖ(ರ) ಆಗಿದ್ದರು. ಬರೆದಿದ್ದಾರೆ ಇತಿಹಾಸದಿಂದ ಸಾಬಿತ್ ಆಗಿರುವುದೇನಂದರೆ ಸಹಾಬರವರಲ್ಲಿ ಅನೇಕರು ಪವಿತ್ರ ಖುರ್‌ಆನಿನ ಹಾಫಿಝ್‌ಗಳಾಗಿದ್ದರು. (ದೀಬಾಚ ತಫ್ಸೀರುಲ್ ಖುರ್‌ಆನ್, ಅನ್ವಾರುಲ್ ಉಲೂಮ್ ಸಂಪುಟ-20, ಪುಟ-430)

ಹಝ್ರತ್ ಸಅದ್ ಬಿನ್ ಉಬಾದರಿಗೆ ಸಂಬಂಧಿಸಿ ಇನ್ನೂ ಸ್ವಲ್ಪ ವಿವರಣೆ ಬಾಕಿಯಾಗಿ ಉಳಿದಿದೆ ಇನ್‌ಶಾಅಲ್ಲಾಹ್ ಮುಂದೆ ವಿವರಿಸುವೆನು.

*********************

*(ಪುಟ ಸಂಖ್ಯೆ 12ರ ವರದಿಯ ಉಳಿದ ಭಾಗ ಮುಂದು ವರಿಸಲಾಗಿದೆ)*

ಮುಹತಮಿಮ್ ವಖಾರೆ ಅಮಲ್ ಹೇಳಿದರು. ಪ್ರಸಕ್ತ ವರ್ಷ ನಾವು 371 ವಖಾರೆ ಅಮಲ್ ಮಾಡಿದ್ದೆವು. ವಖಾರೆ ಅಮಲಿನ ಹೆಚ್ಚಿನ ಕಾರ್ಯ ಮಸ್‌ಜಿದ್ ಬೈತುಲ್ ಅಫೀಯತ್ Almere ಯ ನಿರ್ಮಾಣ ಕಾರ್ಯದಲ್ಲಿ ಮಾಡಿದ್ದೆವು. ಹುಝೂರ್(ಅ.ಬಿ.ಅ.) ಹೇಳಿದರು. ನೀವು ಒಂದು ವಖಾರೆ ಅಮಲ್ ವರ್ಷದ ಆರಂಭದಲ್ಲಿ ಮಾಡಿರುತ್ತೀರಿ. ಮೇಯರ್ ಅವರು ಭಾಗವಹಿಸಿದ್ದರು ಮತ್ತು ಅವರು ಪ್ರಶಂಸಿದ್ದರು.

ಮುಹತಮಿಮ್ ಮಾಲ್ ಹುಝೂರೆ ಅನ್ವರ್ ಕೇಳಿದ ಮಾತಿಗೆ ಉತ್ತರಿಸುತ್ತ ಹೇಳಿದರು. ನಮ್ಮ ವಾರ್ಷಿಕ ಬಜೆಟ್ 44 ಸಾವಿರ ಯೂರೋ ಆಗಿದೆ. 92 ಖಾದಿಮ್‌ಗಳು ಆದಾಯ ಹೊಂದಿರುವುದಿಲ್ಲ. 170 ಖುದ್ದಾಮ್ ಆದಾಯ ಉಳ್ಳವರಾಗಿದ್ದಾರೆ. ಅವರೆಲ್ಲರೂ ಸರಿಯಾಗಿ ಚಂದ ಕೊಡುತ್ತಿದ್ದಾರೆ.

ಹುಝೂರ್(ಅ.ಬಿ.ಅ.) ಹೇಳಿದರು. Camp ನಲ್ಲಿರುವ ಖುದ್ದಾಮ್ ಅವರ ಆದಾಯ ಕಡಿಮೆ ಇದೆ. ಅವರು ಎಷ್ಟು ಕೊಡಬಯಸುತ್ತಾರೆ ಅಷ್ಟೇ ಚಂದ ತೆಗೆದುಕೊಳ್ಳಿ.

ವಿವಿಧ ಮಜಾಲಿಸಿನ ಖಾಯಿದ್‌ಗಳು ಈ ಸಭೆಯಲ್ಲಿ ಉಪಸ್ಥಿತಿಯಲ್ಲಿದ್ದರು. ಎಲ್ಲರೂ ಸರತಿಯಂತೆ ತಮ್ಮ ತಮ್ಮ ಮಜ್ಲಿಸಿನ ತಜ್‌ನೀದ್ ಪ್ರಕಟಪಡಿಸಿದರು.

ಖುದ್ದಾಮುಲ್ ಅಹ್ಮದಿಯಾದ ಅಧ್ಯಕ್ಷರು ಹೇಳಿದರು. ಹಿಂದಿನ ಕೆಲ ಅವಧಿಯಿಂದ ಐದು ಹೊತ್ತಿನ ನಮಾಝ್‌ಗಳನ್ನು ನಿರ್ವಹಿಸುವಂತೆ ಗಮನ ನೀಡುತ್ತಿದ್ದೇವೆ. 50% ಖುದ್ದಾಮ್ ಜಮಾಅತಿನೊಂದಿಗೆ ನಮಾಝ್ ನಿರ್ವಹಿಸುತ್ತಾರೆ. ಹುಝೂರ್(ಅ.ಬಿ.ಅ) ಹೇಳಿದರು. ಯಾರು ಹಿಂದುಳಿದಿದ್ದಾರೆ ಅವರಿಗೆ ಪ್ರೀತಿಯಿಂದ ಕರೆ ನೀಡಿರಿ. ಯುವ ಮುರಬ್ಬಿಗಳು ಹಿಂದುಳಿದ ಖುದ್ದಮ್‌ರನ್ನು ಸಮೀಪ ತರುವ ಪ್ರಯತ್ನ ಮಾಡಬೇಕಾಗಿದೆ. ಈ ದುರ್ಬಲ ಖುದ್ದಾಮರೊಡನೆ ಯಾರು ಸಂಬಂಧವಹಿಸಿದ್ದಾರೆ. ಅವರು ಮಿತ್ರರಾಗಿ ಇಂತಹ ಖುದ್ದಾಮರನ್ನು ಸಂಪರ್ಕ ಹೊಂದಿ ಸಮೀಪ ತರಬೇಕು.

ಹುಝೂರ್(ಅ.ಬಿ.ಅ.) ಹೇಳಿದರು. ಸ್ಥಳೀಯ ಕ್ರೀಡೆಗಳಲ್ಲಿ ಅತ್ಫಾಲರಿಗೆ ಪ್ರೋತ್ಸಾಹ ನೀಡಬೇಕು. ಅದರಲ್ಲಿ ಭಾಗವಹಿಸುವಂತೆ ಮಾಡಬೇಕು. ಕೇವಲ ಟಿ.ವಿ ಯಲ್ಲಿ ಅಷ್ಟೇ ನೋಡಿದರೆ ಸಾಲದು. ಬದಲಾಗಿ ಸಕ್ರಿಯವಾಗಿ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವಂತೆ ಮಾಡಬೇಕು.

ಮಜ್ಲಿಸ್ ಆಮಿಲದ ಸದಸ್ಯರೊಬ್ಬರು ಹೇಳಿದರು. ನಮ್ಮ ಮನೆಯಿಂದ ನಮಾಝ್ ಸೆಂಟರ್ 13 ಕಿ.ಮೀ ದೂರವಿದೆ. ಆಗ ಹುಝೂರೆ ಅನ್ವರ್ ಹೇಳಿದರು. ಒಂದು ನಮಾಝ್ ಅಲ್ಲಿ ಹೋಗಿ ಜಮಾಅತ್ ಸಹಿತ ಓದಬಹುದೇ, ಹುಝೂರ್(ಅ.ಬಿ.ಅ.) ಹೇಳಿದರು. ಮಸೀದಿಗೆ ನಮಾಝಿಗೋಸ್ಕರ ಒಂದು ಸಲ ಹೋಗಲು ಪೆಟ್ರೋಲ್ ಎಷ್ಟು ಬೇಕಾಗುತ್ತದೆಯೋ ಅದನ್ನು ನಿಗದಿ ಮಾಡಿಕೊಳ್ಳಿ, ತಿಂಗಳಿನಲ್ಲಿ ಮೂವತ್ತು ದಿವಸ ಮತ್ತು 5 ಜುಮಅ (ಶುಕ್ರವಾರ) ತೆಗೆದುಕೊಳ್ಳಿ, 40 ದಿನಗಳ ಲೆಕ್ಕ ಮಾಡಿ. ಇದು 225 ಯೂರೋ ಆಗಬಹುದು. ಅಲ್ಲಾಹನಿಗೋಸ್ಕರ ಈ ಹಣ ಮಸೀದಿಗೆ ಹೋಗಲು ತೆಗೆದಿರಿಸಿ. ನಮಾಝ್‌ಗೋಸ್ಕರ ತೆಗೆದಿರಿಸಿ. ಬರ್ಗರ್ ತಿನ್ನಬೇಡಿ. ಪತ್ನಿಗೆ ತಿಳಿಸಿ. ಮನೆಯಲ್ಲಿ ಊಟ ತಯಾರಿಸಲಿ. ಇದರಿಂದ ಕೆಲವು ಹಣ ಉಳಿತಾಯ ಮಾಡಬಹುದು. ಅದು ನಮಾಝಿಗೋಸ್ಕರ ಮಸೀದಿಗೆ ಹೋಗಲು ಖರ್ಚು ಮಾಡಿರಿ.

ಹುಝೂರ್(ಅ.ಬಿ.ಅ.) ಹೇಳಿದರು. ನೀವು ಆತ್ಮಸಾಕ್ಷಿಯಾಗಿ ನಡೆದುಕೊಳ್ಳಿ, ಮನೆ ಎಷ್ಟು ಸಮೀಪವಿದೆ. ನಿರ್ಧರಿಸಿಕೊಳ್ಳಿ, ಮಜ್ಜಿದ್, ನಮಾಝ್ ಸೆಂಟರ್ ಹೋಗದೆ ಮನೆಯಲ್ಲಿದ್ದು ನಮಾಝ್ ನಿರ್ವಹಿಸುವುದು ಧರ್ಮ ಸಮ್ಮತವೋ ಇಲ್ಲವೋ ಎಂಬುದು ಮನಸಾಕ್ಷಿಯಂತೆ ನಿರ್ಧರಿಸಿಕೊಳ್ಳಿ.

ಮುಹತಮಿಮ್ ತಬ್ಲೀಗ್‌ರಿಗೆ ಹುಝೂರ್(ಅ.ಬಿ.ಅ.) ರವರು ಮಾರ್ಗದರ್ಶನ ನೀಡುತ್ತಾ ಹೇಳಿದರು. ಪ್ರತಿಯೊಂದು ಮಜ್ಲಿಸ್‌ಗೆ ಒಂದು Target ಕೊಡಿ. ಇಂತಿಷ್ಟು ಜನರಿಗೆ ಜಮಾಅತಿನ ಪರಿಚಯ ನೀಡಬೇಕು. ಕನಿಷ್ಠಪಕ್ಷ ಶೇಕಡಾ 50% ಜನರಿಗೆ ಜಮಾಅತ್ ಅಹ್ಮದಿಯಾ ಏನು ಎಂಬುದು ತಿಳಿಸಿಕೊಡಿ.

ಆಯವ್ಯಯ ಲೆಕ್ಕ ಇಡುವ ಪೈಕಿ ಆಡಿಟ್ ವಿಭಾಗದಿಂದ ಹುಝೂರ್ ಮಾರ್ಗದರ್ಶನ ಕೇಳಿದರು. ಇ–ಮೇಲ್ ಮೂಲಕ ಅಧ್ಯಕ್ಷರು ಖುದ್ದಾಮುಲ್ ಅಹ್ಮದಿಯಾ ಕಡೆಯಿಂದ ಖರ್ಚಿನ ಮಂಜೂರಿ ಅಥವಾ ಯಾವುದೇ ಬಿಲ್‌ಗಳ ಮಂಜೂರಿ ಸಿಗುತ್ತದೆ. ಆದರೆ ಇದು ಕೇವಲ ಒಂದು ಸಂದೇಶದ ರೂಪದಲ್ಲಿರುತ್ತದೆ. ಅದರ ಮೇಲೆ ಅಧ್ಯಕ್ಷರ ಹೆಸರು ಇರುತ್ತದೆ. ಆದರೆ ಹಸ್ತಾಕ್ಷರ ಇರುವುದಿಲ್ಲ. ಆದಾಗ್ಯೂ ಆಡಿಟ್‌ನಲ್ಲಿ ಹಸ್ತಾಕ್ಷರ ಇರುವುದು ಅನಿವಾರ್ಯವಾಗಿರುತ್ತದೆ. ಆಗ ಹುಝೂರ್(ಅ.ಬಿ.ಅ.) ಹೇಳಿದರು. "ಹಸ್ತಾಕ್ಷರವಿರಬೇಕು ಇದು ಅನಿವಾರ್ಯವಾಗಿದೆ.

ಸದಸ್ಯರೊಬ್ಬರು ಪ್ರಶ್ನಿಸಿದರು. ಕೆಲವೊಮ್ಮೆ ಶಾಲೆಯಲ್ಲಿ ಮಕ್ಕಳ ಹುಟ್ಟುಹಬ್ಬ (Birthday) ಮಾಡಲಾಗುತ್ತದೆ. ಮಕ್ಕಳಿಗೆ ಕೇಕ್ ತರಲು ಹೇಳುತ್ತಾರೆ. ಆಗ ಹುಝೂರ್(ಅ.ಬಿ.ಅ.) ಹೇಳಿದರು. ಶಾಲೆಯವರು ಕೇಕ್ ತರಲು ಹೇಳಿದರೆ ತೆಗೆದುಕೊಂಡು ಹೋಗಬಹುದು ಶರಿಯತ್ ಸಮಸ್ಯೆಯೇನಿಲ್ಲ.

ನೀವು ನಿಮ್ಮ ಮಕ್ಕಳಿಗೆ ತಿಳಿಸಿ ಹೇಳಿ ಇಂದು ಶಾಲೆಯಲ್ಲಿ ಹೀಗೆ ಆಯಿತು. ಈ ಸಂದರ್ಭದಲ್ಲಿ ಬಡವರಿಗೆ ಏನಾದರೂ ನೀಡಿ. ಕೆಲವು ಹಣ ಊಚಿಡಿಣಥಿ ಯಲ್ಲಿ ಕೊಡಿ.

ಹುಝೂರ್(ಅ.ಬಿ.ಅ.) ಹೇಳಿದರು. ನಿಮ್ಮ ಮನೆಯಲ್ಲಿ ಮೂರು ನಾಲ್ಕು ಮಕ್ಕಳಿದ್ದರೆ ಅವರಿಗೆ ಪರಸ್ಪರ ಕೊಡಿ. ಕೇಕ್ ತಿಂದರೆ ಅಭ್ಯಂತರವೇನಿಲ್ಲ. ವಾಸ್ತವವೇನೆಂದರೆ ವಿಶೇಷ ರೀತಿಯಲ್ಲಿ ಆಚರಣೆ ಮಾಡಿ. ಇನ್ನಿತರರನ್ನು ಕರೆಯುವುದು ಬೇಡ. ಉಡುಗೊರೆ ತರುವುದು ಬೇಡ. ಸಮಾರಂಭ ಏರ್ಪಡಿಸುವುದು ಬೇಡ.

ಸದಸ್ಯರೊಬ್ಬರು ಈ ಪ್ರಶ್ನೆ ಕೇಳಿದರು. ಇತರ ಅಮುಸ್ಲಿಮ್ ಕುಟುಂಬದವರು ನಮ್ಮ ಮಕ್ಕಳಿಗೆ ಕಾರ್ಯಕ್ರಮಕ್ಕೆ ಆಹ್ವಾನ ನೀಡಿದರೆ? ಆಗ ಹುಝೂರ್ ಹೇಳಿದರು. ಹೋಗಬಹುದು. ಅವರ ರಿವಾಜಾಗಿದೆ. ಮಗುವಿಗೆ ಏನಾದರೂ ಉಡುಗೊರೆ ಕೊಡಬಹುದಾದರೆ ಕೊಡಿ.

ಹುಝೂರ್(ಅ.ಬಿ.ಅ.) ಹೇಳಿದರು. ಶಾಲೆಯ ತರಗತಿಯಲ್ಲಿ ಇಂತಹ ಯಾವುದಾದರೂ ಕಾರ್ಯಕ್ರಮವಿದ್ದರೆ ಅಲ್ಲಿ ಹೇಳಬಹುದಾಗಿದೆ. ಈ ಸಂದರ್ಭದಲ್ಲಿ ಬಡವರಿಗೆ ಏನಾದರೂ ಕೊಡಬೇಕು. ಹಲವು ಬಡ ಜನರ ಮಕ್ಕಳಿಗೆ ಕುಡಿಯಲು ನೀರೂ ಇಲ್ಲ. ಶಿಕ್ಷಣವಿಲ್ಲ, ನಾವು ಅವರಿಗಾಗಿ ಊಚಿಡಿಣಥಿ ಯಲ್ಲಿ ಅವರ ಸಹಾಯಕ್ಕಾಗಿ ಏನಾದರೂ ಕೊಡಬಯಸುತ್ತೇವೆ. ಈ ಸಂದರ್ಭದಲ್ಲಿ ಪ್ರಾರ್ಥಿಸಬೇಕು. ನಾವು ಸಮಾಜದ ಉತ್ತಮ ಅಂಗವಾಗಬೇಕು. ಸಮಾಜದ ಸೇವೆ ಸಲ್ಲಿಸುವವರಾಗಬೇಕು.

ಸದಸ್ಯರೊಬ್ಬರು ಕೇಳಿದರು! ಒಬ್ಬ ಸಿಖ್ ವ್ಯಕ್ತಿಯ ಮಗಳ ವಯಸ್ಸು 6 ವರ್ಷವಾಗಿತ್ತು. ಅವರು ಊಟಕ್ಕೆ ಕರೆದರು. ಆಗ ಹುಝೂರ್ ಹೇಳಿದರು. ಹೋಗಬಹುದು ಅಭ್ಯಂತರವೇನಿಲ್ಲ.

ಹುಝೂರ್(ಅ.ಬಿ.ಅ.) ಹೇಳಿದರು. ನೀವು ಒಬ್ಬರ ಮನೆಗೆ ಹೋಗಿದ್ದೀರಿ. ಅಲ್ಲಿ ಖತಮ್ ಆಗ್ತಾ ಇದೆ. ಖತಮ್ ಪೈಕಿ ಊಟ ಮಾಡಲಾಗಿದೆ. ನೀವು ಖತಮ್ ಪ್ರಕ್ರಿಯೆಯಲ್ಲಿ ಭಾಗವಹಿಸಬಾರದು. ಊಟವನ್ನು ಊಟ ಎಂದು ಭಾವಿಸಿ ಮಾಡಬಹುದು.

ಚಂದದ ವಿಷಯದಲ್ಲಿ ಹುಝೂರ್(ಅ.ಬಿ.ಅ.) ಹೇಳಿದರು. ಪರಿಶುದ್ಧ ಸಂಪತ್ತಿನಿಂದ ಚಂದ ಕೊಡುವ ಆಜ್ಞೆ ಇದೆ. ಚಂದ ತೆರಿಗೆ ಅಲ್ಲ. ಬದಲಾಗಿ ಇದು ಅಲ್ಲಾಹನ ಸಂತೃಪ್ತಿಗೋಸ್ಕರ ಮಾಡುವ ತ್ಯಾಗವಾಗಿದೆ. ಇದರಿಂದ ಸಂಪತ್ತಿನಲ್ಲಿ ಅಲ್ಲಾಹನ ಅನುಗ್ರಹ ದೊರೆಯುತ್ತದೆ. ಅಧಮನ ರೀತಿಯಲ್ಲಿ, ತಪ್ಪು ವಿಧಾನದಿಂದ ಗಳಿಸಿದ ಸಂಪತ್ತಿನಲ್ಲಿ ಚಂದ ಸ್ವೀಕರಿಸಬಾರದು.

ನ್ಯಾಷ್ನಲ್ ಮಜ್‌ಲಿಸ್ ಆಮೀಲ ಖುದ್ದಾಮುಲ್ ಅಹ್ಮದಿಯಾ ಅವರ ಹುಝೂರ್(ಅ.ಬಿ.ಅ.) ರೊಂದಿಗಿನ ಈ ಭೇಟಿಯು 1 ಗಂಟೆ 50 ನಿಮಿಷಕ್ಕೆ ಮುಕ್ತಾಯಗೊಂಡಿತು. ಕೊನೆಯಲ್ಲಿ ಆಮೀಲ ಸದಸ್ಯರೆಲ್ಲರೂ ಹುಝೂರ್(ಅ.ಬಿ.ಅ.) ಭಾವಚಿತ್ರ ತೆಗೆಸಿಕೊಳ್ಳುವ ಭಾಗ್ಯ ಪಡೆದರು.

ಅನಂತರ ಹುಝೂರ್(ಅ.ಬಿ.ಅ.) ಸ್ವಲ್ಪ ಸಮಯಕ್ಕಾಗಿ ತನ್ನ ವಸತಿ ನಿಲಯಕ್ಕೆ ನಿರ್ಗಮಿಸಿದರು. 2 ಗಂಟೆ 15 ನಿಮಿಷಕ್ಕೆ ಹುಝೂರ್(ಅ.ಬಿ.ಅ.) ಆಗಮಿಸಿ ಝುಹರ್ ಅಸರ್ ನಮಾಝ್‌ಗಳನ್ನು ಜಮಾ ಮಾಡಿಸಿ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ತಮ್ಮ ವಸತಿ ನಿಲಯಕ್ಕೆ ತೆರಳಿದರು.

ಹುಝೂರ್(ಅ.ಬಿ.ಅ.) ಅವರೊಂದಿಗೆ ನ್ಯಾಷ್ನಲ್ ಮಜ್ಲಿಸ್ ಆಮೀಲ ಲಜ್ನ ಇಮಾಇಲ್ಲಾಹ್ ಹಾಲೆಂಡ್‌ನ ಸಭೆ ಕಾರ್ಯಕ್ರಮದನ್ವಯ 5 ಗಂಟೆಗೆ ಹುಝೂರ್(ಅ.ಬಿ.ಅ.) ಮಸ್ಜಿದ್ ಬೈತುನ್ನೂರ್‌ಗೆ ಆಗಮಿಸಿದರು ಮತ್ತು ನ್ಯಾಷ್ನಲ್ ಮಜ್ಲಿಸ್ ಆಮೀಲ ಲಜ್ನ ಇಮಾಇಲ್ಲಾಹ್ ಹಾಲೆಂಡ್ ಅವರೊಂದಿಗೆ ಸಭೆ ನಡೆಸಿದರು. ಈ ಸಭೆಯಲ್ಲಿ ಆಮೀಲ ಸದಸ್ಯರ ಜೊತೆಯಲ್ಲಿ ರೀಜ್ನಲ್ ಅಧ್ಯಕ್ಷರು ಮತ್ತು ಸ್ಥಳೀಯ ಮಜಾಲಿಸ್‌ನ ಅಧ್ಯಕ್ಷರುಗಳು ಭಾಗವಹಿಸಿದರು. ಹುಝೂರ್(ಅ.ಬಿ.ಅ.) ದುಆ ಮಾಡಿಸಿದರು.

ಹುಝೂರ್(ಅ.ಬಿ.ಅ.) ಮುಖ್ಯ ಕಾರ್ಯದರ್ಶಿಯವರೊಡನೆ ಕೇಳಿದರು. ಲಜ್ನಗಳ ಎಷ್ಟು ಮಜಾಲಿಸ್‌ಗಳಿವೆ. ಎಷ್ಟು ಮಜಾಲಿಸ್ ವರದಿಗಳನ್ನು ಕಳುಹಿಸುತ್ತಾರೆ ಮತ್ತು ಈ ವರದಿಗಳ Feedbook ಯಾರು ಕೊಡುತ್ತಾರೆ. ಆಗ ಮುಖ್ಯ ಕಾರ್ಯದರ್ಶಿ ಹೇಳಿದರು ಒಟ್ಟು 17 ಮಜಾಲಿಸ್‌ಗಳಿವೆ. ಮತ್ತು ತಮ್ಮ ವರದಿಗಳನ್ನು ಕಳುಹಿಸುತ್ತೇವೆ. ನ್ಯಾಷ್ನಲ್ ಅಧ್ಯಕ್ಷೆ ಇದರ Feedbook ನೀಡುತ್ತಾರೆ. ಆಗ ನ್ಯಾಷ್ನಲ್ ಲಜ್ನ ಅಧ್ಯಕ್ಷೆ ಹೇಳಿದರು. ಅವರು ನ್ಯಾಷ್ನಲ್ ಆಮಿಲಗೆ Feedbook ನೀಡುತ್ತಾರೆ. ಆಗ ಹುಝೂರ್(ಅ.ಬಿ.ಅ.) ಹೇಳಿದರು. ಸ್ಥಳಿಯ ಮಜಾಲಿಸ್‌ಗಳಿಗೂ ನ್ಯಾಷ್ನಲ್ ಲಜ್ನ ಅಧ್ಯಕ್ಷೆ Feedbook ನೀಡಬಹುದಾಗಿದೆ. ಇದರಿಂದ ನ್ಯಾಷ್ನಲ್ ಅಧ್ಯಕ್ಷರೊಂದಿಗೆ ಸಂಬಂಧ ಏರ್ಪಡುತ್ತದೆ.

Asst General Secretary ಹುಝೂರ್ ಕೇಳಿದ ಪ್ರಶ್ನೆಗೆ ಪ್ರತಿಕ್ರಿಯೆ ನೀಡುತ್ತ ಹೇಳಿದರು. ನಾನು ನ್ಯಾಷ್ನಲ್ ಜನರಲ್ ಸೆಕ್ರೆಟರಿಗೆ ನೆರವು ನೀಡುತ್ತೇನೆ.

ಉಪಾಧ್ಯಕ್ಷೆ ಹುಝೂರ್(ಅ.ಬಿ.ಅ.) ರಿಂದ ಅವರ ಜವಾಬ್ದಾರಿ ಕುರಿತು ಕೇಳಿದರು. ಅದಕ್ಕೆ ಉತ್ತರವಾಗಿ ಅವರು ಹೇಳಿದರು. ನನ್ನ ಬಳಿ ಸೆಕ್ರೆಟರಿ ಮಹಾಸಿಬ ಮಾಲ್ ಜವಾಬ್ದರಿಯೂ ಇದೆ. ಹುಝೂರ್(ಅ.ಬಿ.ಅ.) ಆಡಿಟ್ ಮಾಡು ಕುರಿತು ಕೇಳಿದರು. ಅದಕ್ಕೆ ಅವರು ಹೇಳಿದರು. ನಾನು ವರ್ಷಂಪ್ರತಿ ಆಡಿಟ್ ಮಾಡುತ್ತೇನೆ.

ಉಪಾಧ್ಯಕ್ಷೆ ದ್ವಿತೀಯ ಹುಝೂರ್(ಅ.ಬಿ.ಅ.) ಕೇಳಿದ ಪ್ರಶ್ನೆಗೆ ಉತ್ತರಿಸುತ್ತ ಹೇಳಿದರು. ನಾನು ಸೆಕ್ರೆಟರಿ ಮಾಲ್ ಕೂಡ ಆಗಿರುತ್ತೇನೆ. ಹುಝೂರ್(ಅ.ಬಿ.ಅ.) ಚಂದಾದಾರರ ಕುರಿತು ಮತ್ತು ಆದಾಯ ಉಳ್ಳವರ ಕುರಿತು ಕೇಳಿದರು. ಅದಕ್ಕೆ ಉತ್ತರವಾಗಿ ಅವರು ಹೇಳಿದರು. 411 ಚಂದದಾರರಿದ್ದಾರೆ. ಅವುಗಳಲ್ಲಿ 29 ಆದಾಯ ಉಳ್ಳವರಾಗಿದ್ದಾರೆ. ಅವರು 1% ಲೆಕ್ಕದಲ್ಲಿ ಚಂದ ಕೊಡುತ್ತಾರೆ.

ಅನಂತರ ಸಹಾಯಕ ಲಜ್ನ ಅಧ್ಯಕ್ಷೆ Management ಅವರು ತಮ್ಮ ಜವಾಬ್ದರಿ ಕುರಿತು ಹೇಳಿದರು.

ವಾಖಿಫಾತ್ ನೌ ಉಸ್ತುವಾರಿಯವರೊಂದಿಗೆ ಹುಝೂರ್(ಅ.ಬಿ.ಅ.) ಕೇಳಿದರು. ಎಷ್ಟು ವಾಖಿಫಾತ್ ನೌ ಇದ್ದಾರೆ? ಅವರು ಹೇಳಿದರು ಅವರ ಸಂಖ್ಯೆ 83 ಇವೆ. ಅನಂತರ ಹುಝೂರ್(ಅ.ಬಿ.ಅ.) 15 ವರ್ಷಕ್ಕಿಂತ ಮೇಲ್ಪಟ್ಟ ವಾಖಿಫತ್ ನೌ ಕುರಿತು ಕೇಳಿದರು.

ಸಹಾಯಕ ಅಧ್ಯಕ್ಷೆ ಹುಝೂರ್(ಅ.ಬಿ.ಅ.) ಕೇಳಿದ ಮಾತಿಗೆ ಉತ್ತರಿಸುತ್ತ ಹೇಳಿದರು. ನಾನು ಸೆಕ್ರೆಟರಿ ಸುಲ್ತಾನುಲ್ ಖಲಮ್ ಮತ್ತು Social media ಆಗಿದ್ದೇನೆ. ಆಗ ಹುಝೂರೆ ಕೇಳಿದರು. Social media ದಲ್ಲಿ ನ್ಯಾಷ್ನಲ್ ಮತ್ತು ಸ್ಥಳಿಯ ಪತ್ರಿಕೆಗಳಲ್ಲಿ ಎಷ್ಟು Article (ಲೇಖನ) ಬರೆದಿದ್ದೀರಿ ಮತ್ತು ಎಷ್ಟು ತಬ್ಲೀಗಿ Article ಬರೆದಿದ್ದೀರಿ. ಅದಕ್ಕೆ ಉತ್ತರವಾಗಿ ಸೆಕ್ರೆಟರಿ ಸಾಹಿಬ ಹೇಳಿದರು. ನಾವು ನಮ್ಮ ವೆಬ್‌ಸೈಟ್ ಜಾರಿ ಮಾಡಿದ್ದೆವು. ಮತ್ತು ನಾವು ಪರದೆಯ ಮೇಲೆ ನಿಷೇಧ ಹೇರಿದ ಕುರಿತು Article ಬರೆದಿದ್ದೇವೆ. ಆಗ ಹುಝೂರ್(ಅ.ಬಿ.ಅ.) ಹೇಳಿದರು. ಇತರ ವೆಬ್‌ಸೈಟ್ ಮೇಲೂ comment ಹಾಕುತ್ತ ಇರಿ. ಇತ್ತೀಚೆಗೆ ಇಸ್ಲಾಂ ಮತ್ತು ಹಝ್ರತ್ ರಸೂಲುಲ್ಲಾಹ್(ಸ) ರವರ ವಿರುದ್ಧ ಪ್ರಕಟಣೆ ನೀಡುತ್ತಿದ್ದಾರೆ. ಅದರ ಬಗ್ಗೆ comment ಹಾಕುತ್ತಿರಬೇಕು.

ಸಹಾಯಕ ಅಧ್ಯಕ್ಷೆ ರಿಶ್ತಾನಾತ ಮತ್ತು ವಸಿಯತ್ ಅವರಿಗೆ ಹುಝೂರ್ ವಸೀಯತ್ ಸಂಬಂಧಿಸಿ ಕೇಳಿದರು. ಅದಕ್ಕೆ ಉತ್ತರವಾಗಿ ಅವರು ಹೇಳಿದರು. 225 ಲಜ್ನ ವಸಿಯತ್ ಮಾಡಿದ್ದಾರೆ.

ಸೆಕ್ರೆಟರಿ ತರ್‌ಬಿಯತ್ ಹುಝೂರ್(ಅ.ಬಿ.ಅ.) ಕೇಳಿದಾಗ ತಮ್ಮ ಕಾರ್ಯಗಳ ಬಗ್ಗೆ ಹೇಳಿದರು. ಹುಝೂರ್(ಅ.ಬಿ.ಅ.) ದಾಂಪತ್ಯ ಸಮಸ್ಯೆಗಳು, ಸಾಮಾಜಿಕ ಮಾಧ್ಯಮ ಮತ್ತು ಪರದೆಯ ಕುರಿತು ಹೊಸ ಪ್ರಕಟಿತ ಪುಸ್ತಕಗಳನ್ನು ಡಚ್ ಭಾಷೆಯಲ್ಲಿ ಅನುವಾದ ಮಾಡಲು ನಿರ್ದೇಶನ ನೀಡಿದರು.

ಹುಝೂರ್(ಅ.ಬಿ.ಅ.) ಸೆಕ್ರೆಟರಿ ಉಮೂರೆ ಆಮ ತಾಲಿಬಾತ್ ಅವರ ಕಾರ್ಯಗಳ ಬಗ್ಗೆ ವಿಚಾರಿಸುತ್ತ ಕೇಳಿದರು. ಸೆಮಿನಾರ್‌ಗಳಲ್ಲಿ ಆಸಕ್ತಿ ವಹಿಸುವರೆ? ಅದಕ್ಕೆ ಉತ್ತರವಾಗಿ ಸೆಕ್ರೆಟರಿ ಸಾಹಿಬ ಹೇಳಿದರು. ಅlass ನಡೆಯುತ್ತಿದೆ. 70 ತಾಲಿಬಾತ್ ಭಾಗವಹಿಸಿದ್ದಾರೆ.

ಹುಝೂರ್(ಅ.ಬಿ.ಅ.) ಸೆಕ್ರೆಟರಿ ನಾಸಿರಾತ್ ಅವರಿಗೆ ನಾಸಿರಾತ್ ಸಂಖ್ಯೆಗಳ ಬಗ್ಗೆ ಮತ್ತು ತರಬೇತಿ ಕಾರ್ಯಕ್ರಮಗಳ ಬಗ್ಗೆ ಕೇಳಿದರು. ಅದಕ್ಕೆ ಉತ್ತರವಾಗಿ ಸೆಕ್ರೆಟರಿ ಸಾಹಿಬಾ ತಮ್ಮ ಕಾರ್ಯಕ್ರಮಗಳ ವರದಿ ಪ್ರಸ್ತುತಪಡಿಸಿದರು ಮತ್ತು ಹೇಳಿದರು. ನಾಸಿರಾತ್‌ಗಳ ಸಂಖ್ಯೆ 110 ಇವೆ. ಅವರು ಹೇಳಿದರು. ಪಾಕಿಸ್ತಾನದಿಂದ ಬಾಲಕಿಯರು ಬಂದಿರುತ್ತಾರೆ. ಭಾಷೆ ಮತ್ತು ಇತರ ಕೆಲವು ಕಾರಣಗಳಿಂದಾಗಿ ಇಲ್ಲಿಯ ಮಕ್ಕಳೊಂದಿಗೆ ಬೆರೆಯುವುದು ಕಠಿಣವಾಗಿವೆ.

ಅದಕ್ಕೆ ಹುಝೂರ್(ಅ.ಬಿ.ಅ.) ಹೇಳಿದರು. ಹೊಸದಾಗಿ ಬರುವ ಬಾಲಕಿಯರು ಭಾಷೆ ಕಲಿಯುತ್ತಿದ್ದಾರೆ. ಸಮಸ್ಯೆ ಆಗಲಿಕ್ಕಿಲ್ಲ. ಇಲ್ಲಿಯ ಮಕ್ಕಳೊಂದಿಗೆ ಗೆಳೆತನ ಬೆಳೆಸಬೇಕು.

ಸೆಕ್ರೆಟರಿ ಸಾಹಿಬ ಕಿದ್‌ಮತೆ ಖಲ್ಕ್ ತಮ್ಮ ವರದಿ ಪ್ರಸ್ತುತ ಪಡಿಸಿದರು. ಅಧ್ಯಕ್ಷೆ ಹೇಳಿದರು. ಹುಝೂರ್(ಅ.ಬಿ.ಅ.) ಅವರ ಅನುಮತಿಯಿಂದ ನಾವು 14ಎಫ್ ರೊಂದಿಗೆ ಸಂಬಂಧ ಬೆಳೆಸಿದ್ದೇವೆ. ಅವರು ನಮಗೆ Ivory cost ನಲ್ಲಿ ನಿರ್ಮಾಣ ಹೊಂದುತ್ತಿರುವ ಆಸ್ಪತ್ರೆಯ Bed ಗೋಸ್ಕರ ದೇಣಿಗೆ ನೀಡಲು ಕೊರಿದ್ದರೆ. ಹುಝೂರ್(ಅ.ಬಿ.ಅ.) ಕೇಳಿದ ಮಾತುಗಳಿಗೆ ಉತ್ತರಿಸುತ್ತ ಅಧ್ಯಕ್ಷೆ ಹೇಳಿದರು. ನಾವು HFನ Incharge ರೊಂದಿಗೆ ಸಂಬಂಧ ವಹಿಸಿದ್ದೇವೆ. ಅವರು ನಮಗೆ ಎಲ್ಲ ಮಾಹಿತಿಗಳನ್ನು ನೀಡಿದ್ದಾರೆ.

ಸೆಕ್ರೆಟರಿ ಶಿಕ್ಷಣ ವರದಿಯ ಮೇಲೆ ಹುಝೂರ್(ಅ.ಬಿ.ಅ.) ಕೇಳಿದರು. ನ್ಯಾಷ್ನಲ್ ಆಮಿಲ ಹಝ್ರುತ್ ಮಸೀಹ್ ಮೌಊದ್(ಅ) ರವರ ಪುಸ್ತಕಗಳನ್ನು ಅಧ್ಯಯನ ಮಾಡುತ್ತಿದ್ದಾರೆಯೇ? ಅದಕ್ಕೆ ಸೆಕ್ರೆಟರಿ ಶಿಕ್ಷಣ ಹೇಳಿದರು. ಅಧ್ಯಯನ ಮಾಡುತ್ತಿದ್ದಾರೆ. ಪರೀಕ್ಷೆಯ ನಿಮಿತ್ತ ಹೇಳಿದರು. 156 ಲಜ್ನ ಸದಸ್ಯರು ಪರೀಕ್ಷೆ ಬರೆಯುತ್ತಿದ್ದಾರೆ. ಆಗ ಹುಝೂರ್(ಅ.ಬಿ.ಅ.) ಹೇಳಿದರು. ನ್ಯಾಷ್ನಲ್ ಆಮೀಲ ಕೂಡ ಪರೀಕ್ಷೆಗೆ ಹಾಜರಾಗಬೇಕು.

ಸೆಕ್ರೆಟರಿ ತಜ್‌ನೀದ್ ಅವರಿಂದ ಹುಝೂರ್(ಅ.ಬಿ.ಅ.) ತಜ್‌ನೀದ್ ಬಗ್ಗೆ ಕೇಳಿದರು. ತಜ್‌ನೀದ್ ಎಷ್ಟು ಇದೆ? ಸ್ಥಳೀಯ ಅಧ್ಯಕ್ಷೆಯಿಂದ ತಜ್‌ನೀದ್ ಹೇಗೆ ಪಡೆಯುತ್ತೀರಿ. ಸೆಕ್ರೆಟರಿ ಉತ್ತರ ನೀಡಿದರು. ಒಟ್ಟು ತಜ್‌ನೀದ್ 475 ಇದೆ. ಮಾಸಿಕ ಸ್ಥಳೀಯ ವರದಿಗಳ ಮೂಲಕ ತಜ್‌ನೀದ್ ಪಡೆಯುತ್ತೇವೆ.

ಸೆಕ್ರೆಟರಿ ತಬ್ಲೀಗ್ ಹುಝೂರ್ ಕೇಳಿದ ಮಾತಿಗೆ ವರದಿ ಒಪ್ಪಿಸಿ ಹೇಳಿದರು. ಈ ವರ್ಷ ಎರಡು ಬೈಅತ್ ಆಗಿವೆ. ಹಿಂದಿನ 3 ವರ್ಷಗಳಲ್ಲಿ 7 ಬೈಅತ್ ಆಗಿದ್ದವು.

ಸೆಕ್ರೆಟರಿ ಇಶಾಅತ್ ಡಚ್ ಮತ್ತು ಸೆಕ್ರೆಟರಿ ಇಶಾಅತ್ ಉರ್ದು ತಮ್ಮ ಪರಿಚಯ ನೀಡಿದರು. ಅದಕ್ಕೆ ಹುಝೂರ್(ಅ.ಬಿ.ಅ.) ಹೇಳಿದರು. ಸೆಕ್ರೆಟರಿ ಇಶಾಅತ್ ಒಂದೇ ಇರಬೇಕು. ಎರಡರ ಅಗತ್ಯವಿಲ್ಲ. ಅವರು ತಮ್ಮ ಸಹಾಯಕರನ್ನು ಇಟ್ಟುಕೊಳ್ಳಬಹುದು. ಆಗ ಲಜ್ನ ಅಧ್ಯಕ್ಷೆ ಹೇಳಿದರು. ಹುಝೂರ್(ಅ.ಬಿ.ಅ.) ಅನುಮತಿಯಿಂದ ಎರಡು ಸೆಕ್ರೆಟರಿಗಳನ್ನು ಮಾಡಿದ್ದೇವೆ.

ಹುಝೂರ್(ಅ.ಬಿ.ಅ.) ಕೇಳಿದ ಮಾತಿಗೆ ಸೆಕ್ರೆಟರಿ ಇಶಾಅತ್ ಡಚ್ ಹೇಳಿದರು. ಪತ್ರಿಕೆ ಪ್ರಕಟವಾಗುತ್ತಿದೆ. ಹುಝೂರ್(ಅ.ಬಿ.ಅ.) ಅನ್ವರ್ ಹೇಳಿದರು. ಗ.ಏ ಯಲ್ಲಿ ಒಂದು ಪತ್ರಿಕೆ" ಮರ್‌ಯಮ್" ವಖ್ಫೆ ನೌ ಮಕ್ಕಳಿಗೋಸ್ಕರ ಪ್ರಕಟವಾಗುತ್ತದೆ. ಅದು ಖಾಯಮ್ ಆಗಿರಲಿ. ಆ ಪತ್ರಿಕೆಯಿಂದ ವಿಷಯಗಳು ತಮ್ಮ ಪತ್ರಿಕೆಯಲ್ಲಿ ಹಾಕಬಹುದು. ಒಳ್ಳೆಯದಾಗಿ ಬರೆದಿರುತ್ತವೆ.

ಸೆಕ್ರೆಟರಿ ತರ್‌ಬಿಯತ್ ನೌಮಬಾಯೀನ್ ಹುಝೂರ್(ಅ.ಬಿ.ಅ.) ಕೇಳಿದ ಮಾತಿಗೆ ಉತ್ತರವಾಗಿ ಹೇಳಿದರು. 7 ನೌಮಬಾಯೀನರ ಸಾಪ್ತಾಹಿಕವಾಗಿ ತರಬೇತಿ ಮಾರ್ಗ ನಡೆಯುತ್ತಿದೆ. ಹುಝೂರ್(ಅ.ಬಿ.ಅ.) ಹೇಳಿದರು. ಸ್ಥಳೀಯ ಡಚ್ ಜನರ ಬೈಅತ್ ಮಾಡಿಸಿಕೊಳ್ಳಿ.

ಸೆಕ್ರೆಟರಿ ಉದ್ದಿಮೆ ಹಾಗೂ ಕೌಶಲ್ಯ ತಮ್ಮ ವರದಿ ಒಪ್ಪಿಸಿದರು. ಹುಝೂರ್ ಅನ್ವರ್ ಅವರ ಕೇಳಿಕೆ ಮೇರೆಗೆ ತಮ್ಮ ಆದಾಯ ಹೇಳಿದರು.

ಸೆಕ್ರೆಟರಿ ದೈಹಿಕ ಆರೋಗ್ಯ ಅವರಿಗೆ ಹುಝೂರ್(ಅ.ಬಿ.ಅ.) ಕೇಳಿದರು. ಸ್ವತ: ಆಡುತ್ತೀರಾ? ವಿಧಿವತ್ತಾಗಿ ಆಡುವವರು ಎಷ್ಟು ಜನರಿದ್ದಾರೆ? ಅವರು ಹೇಳಿದರು. ಯುರೋಪಿಯನ್ ವಾಲಿಬಾಲ್ ಟೂರ್ನಮೆಂಟ್‌ಗೆ ಹೋಗುತ್ತಿರುತ್ತೇವೆ.

ಸೆಕ್ರೆಟರಿ ಝಿಯಾಫತ್(ಅತಿಥಿ ಸತ್ಕಾರ) ಅವರ ಕಾರ್ಯ ಮತ್ತು ಬಜೆಟ್ ಬಗ್ಗೆ ಹುಝೂರ್ ಕೇಳಿದರು. ಅದಕ್ಕೆ ಅವರು ತಮ್ಮ ಬಜೆಟ್ಟಿನ ಬಗ್ಗೆ ಹೇಳಿದರು.

ಸೆಕ್ರೆಟರಿ ತಹ್‌ರೀಕ್ ಜಹೀದ್ ಹಾಗೂ ವಖ್ಫೆ ಜಹೀದ್ ತಮ್ಮ ವರದಿ ಪ್ರಸ್ತುತಪಡಿಸಿದರು. ಹುಝೂರ್ 7 ರಿಂದ 15 ವರ್ಷವರೆಗಿನ ನಾಸಿರಾತ್‌ಗಳನ್ನು ಸೇರಿಸಲು ನಿರ್ದೇಶನ ನೀಡಿದರು.

ಅನಂತರ ರೀಜಿನಲ್ ಮತ್ತು ಸ್ಥಳೀಯ ಅಧ್ಯಕ್ಷರನ್ನು ಸರತಿಯಂತೆ ಅವರ ಕಾರ್ಯಗಳ ಬಗ್ಗೆ ವಿಚಾರಿಸಿದರು. ಹುಝೂರ್(ಅ.ಬಿ.ಅ.) ಎಲ್ಲರಿಂದ ಅವರ ಮಜಾಲಿಸಿನ ತಜ್‌ನೀದ್ ಕೇಳಿದರು.

ಸ್ಥಳೀಯ ಅಧ್ಯಕ್ಷೆಯೊಬ್ಬರು ಪ್ರಶ್ನೆ ಕೇಳಿದರು. ಇಂದಿನ ಲೋಕದಲ್ಲಿ ಸ್ತ್ರೀ ಪುರುಷರು ಕಾರ್ಯ ನಿರ್ವಹಿಸುವುದು ಅನಿವಾರ್ಯವಾಗಿರುತ್ತದೆ. ಕೆಲ ಲಜ್ನ ಸದಸ್ಯರು ಕೆಲಸದ ನಿಮಿತ್ತ ಜಮಾಅತಿನ ಕಾರ್ಯಕ್ರಮಗಳಲ್ಲಿ ಬರಲು ಸಾಧ್ಯವಾಗುವುದಿಲ್ಲ. ಅವರ ಬಗ್ಗೆ ಮಾರ್ಗದರ್ಶನ ನೀಡಿ.

ಅದಕ್ಕೆ ಹುಝೂರ್(ಅ.ಬಿ.ಅ.) ಹೇಳಿದರು. ಇದಂತೂ ಸತ್ಯ. ಇಂದು ಸ್ತ್ರೀ ಪುರುಷರು ಕೆಲಸ ಮಾಡದೇ ಜೀವಿಸಲು ಆಗುವುದಿಲ್ಲ. ಇದು ತರಬೇತಿ ವಿಭಾಗದವರ ಕರ್ತವ್ಯವಾಗಿದೆ. ಅವರಿಗೆ ಹೇಳುತ್ತಿರಬೇಕು. ನನ್ನ ಖುತುಬಗಳ ಮಾರ್ಗದರ್ಶನಗಳಲ್ಲಿ ಮಕ್ಕಳಿಗೆ ಸರಿಯಾಗಿ ತರಬೇತಿ ನೀಡಬೇಕು. ತಾಯಿಯರು ಸಜ್ಜನನಾದರೆ ಮತ್ತು ಅವರಲ್ಲಿ ಭೌತಿಕ ಆಕಾಂಕ್ಷೆಗಳು ಇಲ್ಲವಾಗಿದ್ದರೆ ಅವರು ತಮ್ಮ ಜವಾಬ್ದಾರಿಗಳನ್ನು ಅರ್ಥಮಾಡಿಕೊಳ್ಳುವರು. ಉದಾಹರಣೆಗೆ ಅಮೇರಿಕಾದಲ್ಲಿಲ್ಲ ಕೆಲವು ಲಜ್ನಗಳು ಕೆಲಸವೂ ಮಾಡುತ್ತಾರೆ ಮತ್ತು ಅವರ ತರಬೇತಿಯ ಮಟ್ಟವು ಉತ್ತಮವಾಗಿದೆ. ತೊಂದರೆಗಳಿದ್ದಲ್ಲಿ ಕೆಲಸ ಮಾಡುವ ಅನುಮತಿ ಇದೆ. ತಮ್ಮ ಪತಿಯ ಆದಾಯ ಅಷ್ಟೊಂದು ಉತ್ತಮವಾಗಿರಲಿಲ್ಲವೆಂದಾದರೆ, ನಿಮಗೆ ನಿಮ್ಮ ವಚನ (ಪ್ರತಿಜ್ಞೆ) ದ ಪ್ರಾಮುಖ್ಯತೆಯನ್ನು ಅರಿಯಬೇಕಾಗಿದೆ. ಇಲ್ಲವಾದರೆ ಅದನ್ನು ಉಚ್ಚರಿಸುವುದರಿಂದ ಏನು ಪ್ರಯೋಜನ?

ಸ್ಥಳೀಯ ಅಧ್ಯಕ್ಷೆಯೊಬ್ಬರು ಪ್ರಶ್ನೆ ಕೇಳಿದರು. ನನ್ನ ಮಜ್‌ಲಿಸ್‌ನಲ್ಲಿ ಕೆಲವು ಸದಸ್ಯರು ಹೇಳುತ್ತಾರೆ. ನಾವು ಜಮಾಅತ್ತಿನೊಂದಿಗೆ ಸಂಬಂಧ ಹೊಂದಿರುತ್ತೇವೆ. ಚಂದವು ಕೊಡುತ್ತೇವೆ. ಆದರೆ ಲಜ್ನ ಇಮಾಉಲ್ಲಾಹ್‌ರೊಂದಿಗೆ ಸಂಬಂಧ ಹೊಂದ ಬಯಸುವುದಿಲ್ಲ. ಲಜ್ನದ ಚಂದವು ಕೊಡುವುದಿಲ್ಲ. ಆಗ ಹುಝೂರ್(ಅ.ಬಿ.ಅ.) ಹೇಳಿದರು. ಅವರ ಈ ಕಲ್ಪನೆ ತಪ್ಪಾಗಿದೆ. ಲಜ್ನ ಸ್ಥಾಪನೆ ಗೊಂಡಿರುವುದೇ ಜಮಾಅತ್ ವ್ಯವಸ್ಥೆಯ ಸುಂದರತೆಯಾಗಿದೆ. ಅದು ನೇರವಾಗಿ ಖಲೀಫರೊಂದಿಗೆ ಸಂಬಂಧಿಸಿದೆ. ಇದು ಬೈಅತ್ ವಚನದೊಂದಿಗೆ ದ್ರೋಹ ಬಗೆದಂತಾಗುವುದು. ಚಂದ ಕೊಡಲಿ, ಬಿಡಲಿ ಮೊದಲು ಅವರಿಗೆ ಅಹ್ಮದಿಯನ್ನಾಗಿ ಮಾಡಿ, ಚಂದ ಕೊಡಲು ಸಾಧ್ಯವಿಲ್ಲವೆಂದಾದರೆ ನನ್ನಿಂದ ಅನುಮತಿ ಪಡೆದುಕೊಳ್ಳಲಿ. ಇದು ಖಲೀಫರು ಸ್ಥಾಪಿಸಿದ ಸಂಘಟನೆಯಾಗಿದೆ. ಇದರಲ್ಲಿ ಭಾಗವಹಿಸುವುದು ಅನಿವಾರ್ಯವಾಗಿದೆ. ಖಲೀಫರೊಂದಿಗೆ ಸಂಬಂಧವಿರಿಸಿಬೇಕಾದರೆ ಮತ್ತು ಅಹ್ಮದಿ ಎಂದಾದರೆ ಸದಸ್ಯರಾಗುವುದು ಅನಿವಾರ್ಯವಾಗಿದೆ.

ಆಮೀಲ ಸದಸ್ಯರೊಬ್ಬರು ಪ್ರಶ್ನೆ ಕೇಳಿದರು. ಯಾರಾದರು ಜಮಾಅತಿನ ಅಥವಾ ಉಪ ಸಂಘಟನೆಯ ಅಧಿಕಾರಸ್ಥರು ತಮ್ಮ ನಿಕಟ ಸಂಬಂಧಿಕರು ಜಮಾಅತ್ತಿನಿಂದ ಹೊರಹಾಕಲ್ಪಟ್ಟರೆ ಅವರಿಗೆ ಶಿಕ್ಷೆಯಾದರೆ ಆಗ ಅವರೊಡನೆ ಯಾವ ರೀತಿ ವರ್ತಿಸಬೇಕು.

ಇದಕ್ಕೆ ಉತ್ತರವಾಗಿ ಹುಝೂರ್(ಅ.ಬಿ.ಅ.) ಹೇಳಿದರು. ಶಿಕ್ಷೆ ಎಂದರೆ ಜೈಲಿಗೆ ಹಾಕುವುದಂತದಲ್ಲ. ಕೇವಲ ಮಖಾತಿಅ (ಮಾತಾಡದಂತೆ ನಿರ್ಬಂಧ) ಹೇರಲಾಗುತ್ತದೆ. ಇದು ಹಝ್‌ರತ್ ರಸೂಲುಲ್ಲಾಹ್(ಸ) ರವರ ಕಾಲದಲ್ಲಿಯೂ ಜಾರಿಯಲ್ಲಿತ್ತು. ಇದರ ಮುಖ್ಯ ಉದ್ದೇಶವೆಂದರೆ ಶಿಕ್ಷಿಸಲ್ಪಟ್ಟವನಿಗೆ ತಪ್ಪಿನ ಅರಿವಾಗಬೇಕು. ಪಶ್ಚಾತ್ತಾಪ ಉಂಟಾಗಬೇಕು ಎಂಬುದಾಗಿದೆ. ನಿಕಟ ಸಂಬಂಧಿಕರು ಉದಾಹರಣೆಗೆ ತಾಯಿ ತಂದೆ ಸಹೋದರಿ ಸಹೋದರ ಸಂಬಂಧವಿರಿಸಿ ಕೊಳ್ಳಬಹುದು. ಆದರೆ ಅವರ ಸುಧಾರಣೆಗೋಸ್ಕರ, ಚಿಕ್ಕಮ್ಮ, ಮಾಮಿ, ತಂದೆ ಸಹೋದರಿಯೊಂದಿಗೆ ಸಂಬಂಧ ಅವರ ತಪ್ಪಿನ ಅರಿವು ಉಂಟಾಗುವ ಕಾರಣದಿಂದ ಮಾತನಾಡಬಾರದು. ಅವರಿಗೆ ತಿಳುವಳಿಕೆ ಕೊಡಬಹುದಾಗಿದೆ. ನೀವು ತಪ್ಪು ಮಾಡಿದಿರಿ. ಅಧಿಕಾರಸ್ಥರು ಸ್ವಯಂ ವಿಚಾರ ಮಾಡಬಹುದು. ಜಮಾಅತ್ತಿನ ಸ್ಥಾನ ದೊಡ್ಡದು. ಅಥವಾ ವೈಯಕ್ತಿಕ ಸಂಬಂಧ?

ಇನ್ನೋರ್ವ ಸದಸ್ಯರು ಪ್ರಶ್ನೆ ಕೇಳಿದರು. ನಾವು ಲಜ್ನರವರ ಉತ್ತಮ ಪರದೆಯೊಂದಿಗೆ ದೂರದಿಂದ ತೆಗೆಸಿಕೊಂಡ ಚಿತ್ರವನ್ನು ತನ್ನ ಪತ್ರಿಕೆಯಲ್ಲಿ ಪ್ರಕಟಿಸಬಹುದೇ?

ಅದಕ್ಕೆ ಹುಝೂರ್(ಅ.ಬಿ.ಅ.) ಉತ್ತರ ನೀಡಿದರು. ಪತ್ರಿಕೆಗಳಲ್ಲಿ ಪ್ರಕಟಿಸಬಾರದು. ಪುರುಷ ನೋಡುಗರ ನಿಯತ್ತು ತಿಳಿಯದು. ಕೆಲವೊಮ್ಮೆ ಅಮೇರಿಕಾದ ನೌಮಬಾಯೀನರ ಮತ್ತು ಆಫ್ರಿಕಾ ನೌಬಾಯೀನರ ಚಿತ್ರಗಳು ಬರುತ್ತಿವೆ. ಅವರಿಗೆ ರಿಯಾಯಿತಿ ಇದೆ. ಆದರೆ ಹುಟ್ಟು ಅಹ್ಮದಿಯರು ಹಾಕಕೂಡದು.

ಇನ್ನೋರ್ವ ಸದಸ್ಯರು ಪ್ರಶ್ನೆ ಕೇಳಿದರು. ಇಂಗ್ಲೆಂಡ್ ಅಥವಾ ಜರ್ಮನಿಯ ಜಲ್ಸಕ್ಕೆ ಝೀರೆ ತಬ್ಲೀಗ್ ಅತಿಥಿಗಳನ್ನು ಕರೆದುಕೊಂಡು ಹೋಗುತ್ತಾರೆ. ಆದರೆ ಜಮಾಅತ್ತಿನ ಬಳಿ ಅಷ್ಟು ಬಜೆಟ್ ಇರುವುದಿಲ್ಲ.

ಅದಕ್ಕೆ ಹುಝೂರ್(ಅ.ಬಿ.ಅ.) ಉತ್ತರಿಸಿದರು. ತಮ್ಮ ಜಮಾಅತ್ತಿನಿಂದ ನೆರವು ಕೇಳಿದರೆ ಜಮಾಅತ್ತಿನ ನೆಲೆಯಲ್ಲಿ ತಬ್ಲೀಗ್ (ಪ್ರಚಾರ ವಿಭಾಗ)ಕ್ಕೆ ಮಾಹಿತಿ ಕೊಟ್ಟರೆ ಅವರು ವ್ಯವಸ್ತೆ ಮಾಡಬಹುದು.

ಹುಝೂರ್(ಅ.ಬಿ.ಅ) ರವರೊಂದಿಗೆ ಹೇಳಿದರು. ಕೆಲ ಅಧಿಕಾರಿಗಳು ಮಸೀದಿ ಮತ್ತು ಜಮಾಅತಿನ ಕಾರ್ಯಕ್ರಮಗಳಲ್ಲಿ ಪರದೆ ಧರಿಸುತ್ತಾರೆ. ಆದರೆ ಹೊರಗಡೆ ಇದನ್ನು ಪಾಲಿಸುವುದಿಲ್ಲ.

ಆಗ ಹುಝೂರ್(ಅ.ಬಿ.ಅ) ಉತ್ತರಿಸಿದರು. ಅವರಿಗೆ ಅಧಿಕಾರ ನೀಡಬಾರದು. ಆದರೆ ಅವರಿಂದ ಕಾರ್ಯ ಮಾಡಿಸಿಕೊಳ್ಳಬಹುದಾಗಿದೆ. ಏನಾದರೂ ಸಂಬಂಧ ಹೊಂದ ಬೇಕಲ್ಲವೇ, ಮಸೀದಿಯಲ್ಲಿ ಪರದೆ ಮಾಡುತ್ತಾರೆಂದರೆ ಕನಿಷ್ಠ ಮಸೀದಿಯಲ್ಲಾದರೂ ಪರದೆ ಮಾಡಬೇಕೆಂಬ ಜ್ಞಾನ ಇದೆ ಎಂದಾಯಿತು.

ಇನ್ನೋರ್ವ ಆಮೀಲ ಸದಸ್ಯರು ಪ್ರಶ್ನೆ ಕೇಳಿದರು. ನ್ಯಾಷ್ನಲ್ ಅಧ್ಯಕ್ಷೆ ಅಥವಾ ಸ್ಥಳಿಯ ಅಧ್ಯಕ್ಷರೊಂದಿಗೆ ಭಿನ್ನಾಭಿಪ್ರಾಯ ಉಂಟಾದರೆ ಅಥವಾ

ಅವರ ಮೇಲೆ ಟೀಕೆ ಮಾಡಿದರೆ ಅವರೊಂದಿಗೆ ಅಧ್ಯಕ್ಷೆಯರ ವರ್ತನೆ ಹೇಗಿರಬೇಕು ಮತ್ತು ಆ ಸದಸ್ಯನ ಅನುಸರಣೆಯ ಮಟ್ಟ ಹೇಗಿರಬೇಕು.

ಅದಕ್ಕೆ ಹುಝೂರ್(ಅ.ಬಿ.ಅ.) ಉತ್ತರ ನೀಡಿದರು. ಪರಸ್ಪರ ವಿಚಾರ ವಿನಿಮಯ ಆಗುತ್ತಿರುವಾಗ ಸಕಾರಾತ್ಮಕ ಭಿನ್ನತೆ ಉಂಟಾದರೆ ಸರಿ. ಕಾಲೆಳೆಯುವಂತೆ ಇರಬಾರದು. ಯಾವುದೇ ಅಭಿಪ್ರಾಯವಿದ್ದರೆ ಬರೆದುಕೊಳ್ಳಿ. ಅಧ್ಯಕ್ಷರು ನಿರ್ಣಯ ಕೈಗೊಳ್ಳಬಹುದು. ಇಲ್ಲವಾದಲ್ಲಿ ಖಲೀಫರಿಗೆ ಬರೆಯಬಹುದು. ಖಲೀಫರ ನಿರ್ಣಯ ಅಂತಿಮ ನಿರ್ಣಯವಾಗಿರುತ್ತದೆ.

ಲಜ್ನ ಅಧ್ಯಕ್ಷೆ ಹೇಳಿದರು. ರೀಜಿನಲ್ ಮತ್ತು ಸ್ಥಳೀಯ ನೆಲೆಯಲ್ಲಿ ಪುರುಷರೊಂದಿಗೆ ಸಂಪರ್ಕ ಹೊಂದಬೇಕಾಗುತ್ತದೆ. ಆದರೆ ಪುರುಷರಿಂದ ಕಾರ್ಯ ಮಾಡಿಕೊಳ್ಳುವುದು ಕಷ್ಟವಾಗುತ್ತದೆ.

ಅದಕ್ಕೆ ಹುಝೂರ್ ಹೇಳಿದರು. ಪುರುಷರು ನೆರವು ನೀಡಬೇಕಾಗುತ್ತದೆ. ಮನೆಗಳಲ್ಲಿ ಜಗಳ ಮಾಡಿಕೊಂಡು ಸಮಸ್ಯೆಗಳನ್ನು ಪರಿಹರಿಸಿಕೊಳ್ಳುತ್ತೀರಿ. ಇಲ್ಲಿಯೂ ಜಗಳವಾಡಿ ಪರಿಹರಿಸಿಕೊಳ್ಳಿ.

ನ್ಯಾಷ್ನಲ್ ಮಜ್ಲಿಸ್ ಆಮೀಲ ಲಜ್ನ ಇಮಾಇಲ್ಲಾಹ್ ಹಾಲೆಂಡ್ ಅವರ ಹುಝೂರ್(ಅ.ಬಿ.ಅ.) ರೊಂದಿಗಿನ ಈ ಸಭೆ (Meeting) 6 ಗಂಟೆ 5 ನಿಮಿಷದವರೆಗೆ ಜಾರಿಯಲ್ಲಿತ್ತು.

**1 ಅಕ್ಟೋಬರ್ 2019 (ಮಂಗಳವಾರ) Almere ನಗರದಲ್ಲಿ.**

**"ಮಸ್ಜಿದ್ ಬೈತುಲ್ ಆಫಿಯತ್"** ಉದ್ಘಾಟನೆ:

Almere ನಗರದಲ್ಲಿ **'ಮಸ್ಜಿದ್ ಬೈತುಲ್ ಆಫಿಅತ್"** ಉದ್ಘಾಟನಾ ಸಮಾರಂಭವಿತ್ತು. ಹುಝೂರ್(ಅ.ಬಿ.ಅ) ಮುಂಜಾನೆ ನಾಲ್ಕುವರೆ ಗಂಟೆಗೆ ನನ್‌ಸ್ಪೇಟ್‌ನಿಂದ ಅಲ್ಮೆರೆಯ ಕಡೆ ಪ್ರಯಾಣ ಬೆಳೆಸಿದರು. ನನ್‌ಸ್ಪೇಟ್‌ನಂದ ಅಲ್ಮೆರವರೆಗಿನ ದೂರ 50 ಕಿ.ಮೀ ಇದೆ.

ಅಲ್ಮೆರೆ ನಗರವು Flevoland ರಾಜ್ಯದಲ್ಲಿದೆ. ಈ ನಗರವನ್ನು 1971 ರಲ್ಲಿ ಸಮುದ್ರದ ಒಂದು ಭಾಗವನ್ನು ಒಣಗಿಸಿ ಸ್ಥಾಪಿಸಲಾಗಿದೆ. 49 ವರ್ಷ ಇಲ್ಲಿ ಸಮುದ್ರ ಮಾತ್ರವಿತ್ತು. ಇಂದು ಒಂದು ಸುಂದರವಾದ ನಗರ ಅಸ್ತಿತ್ವಕ್ಕೆ ಬಂದಿದೆ. ಈ ನಗರದಲ್ಲಿ ಸುಮಾರು ಒಂದು ಲಕ್ಷ 84 ಸಾವಿರ ಜನಸಂಖ್ಯೆ ಇದೆ. ಇಲ್ಲಿ Lelysted ಕ್ಷೇತ್ರದಲ್ಲಿ 2007 ರಲ್ಲಿ ಜಮಾಅತ್ ಸ್ಥಾಪನೆಗೊಂಡಿತು. ಈಗ ಇಲ್ಲಿ ಜಮಾಅತಿಗೆ ತಮ್ಮ ಮಸೀದಿ ನಿರ್ಮಾಣ ಮಾಡುವ ಭಾಗ್ಯ ದೊರೆಕಿದೆ.

ಸುಮಾರು 50 ನಿಮಿಷದ ಪ್ರಯಾಣ ನಂತರ 6 ಗಂಟೆ 20 ನಿಮಷಕ್ಕೆ ಹುಝೂರ್(ಅ.ಬಿ.ಅ.) 'ಮಸ್ಜಿದ್ ಬೈತುಲ್ ಆಫಿಯತ್" ಗೆ ಆಗಮಿಸಿದರು. ಜಮಾಅತ್‌ನ ಸ್ತ್ರೀ, ಪುರುಷರು ತಮ್ಮ ಇಮಾಮರಿಗೆ ಭವ್ಯ ಸ್ವಾಗತ ಕೋರಿದರು. ಬಾಲಕಿಯರು ತಮ್ಮ ಕೈಯಲ್ಲಿ ಹಾಲೆಂಡಿನ ರಾಷ್ಟ್ರ ಧ್ವಜ ಹಿಡಿದುಕೊಂಡಿದ್ದರು. ಸ್ವಾಗತ ಗೀತೆ ಉಚ್ಚರಿಸುತ್ತ ತಮ್ಮ ಪ್ರಿಯ ಇಮಾಮರಿಗೆ ಸ್ವಾಗತ ಕೋರುತ್ತಿದ್ದರು. ಎಲ್ಲ ಕಡೆ ಸಂಭ್ರಮದ ವಾತಾವರಣವಿತ್ತು.

ಹುಝೂರ್(ಅ.ಬಿ.ಅ.) ವಾಹನದಿಂದ ಇಳಿಯುತ್ತಲೇ ಅಲ್ಮೀರೆ ಜಮಾಅತ್ತಿನ ಅಧ್ಯಕ್ಷರಾದ ಹನೀಫ್ ಅಹ್ಮದ್ ಸಾಹಿಬ್, ಸಂಘಟನಾ ಮುಬಲ್ಲಿಗರಾದ ಸಫೀರ್ ಅಹ್ಮದ್ ಸಿದ್ದೀಖಿ ಸಾಹಿಬ್ ಹುಝೂರ್(ಅ.ಬಿ.ಅ.)ರಿಗೆ ಸ್ವಾಗತ ಕೋರಿದರು. ಹುಝೂರ್(ಅ.ಬಿ.ಅ) ಎಲ್ಲರಿಗೂ **"ಅಸ್ಸಲಾಮು ಅಲೈಕುಂ"** ಹೇಳಿದರು.

ಅನಂತರ ಹುಝೂರ್(ಅ.ಬಿ.ಅ.) ಮಸೀದಿಯ ಪ್ರವೇಶ ದ್ವಾರದ ಒಳ ಗೋಡೆಯಲ್ಲಿ ಸ್ಥಾಪಿಸಲಾಗಿದ್ದ ಒಂದು ಹಲಗೆಯನ್ನು ಅನಾವರಣಗೊಳಿಸಿ ದುಆ ಮಾಡಿಸಿದರು. ದುಆದ ನಂತರ ಹುಝೂರ್(ಅ.ಬಿ.ಅ.) ಮಸೀದಿಯ ಪುರುಷರ ಸಭಾಂಗಣಕ್ಕೆ ಆಗಮಿಸಿ ನಮಾಝ್ ಝುಹರ್ ಹಾಗೂ ಅಸರ್ ಜಮಾ ಮಾಡಿ ನಿರ್ವಹಿಸಿಕೊಟ್ಟರು. ಅದರೊಂದಿಗೆ ಅಧೀಕೃತವಾಗಿ ಮಸೀದಿಯ ಉದ್ಘಾಟನಾ ಸಮಾರಂಭ ಚಾಲನೆಗೆ ಬಂತು.

ನಮಾಝುಗಳ ನಿರ್ವಹಣೆಯ ನಂತರ ಹುಝೂರ್(ಅ.ಬಿ.ಅ.) ಗ್ರಂಥಾಲಯ ಸಭಾಂಗಣಕ್ಕೆ ಆಗಮಿಸಿದರು. ಅಲ್ಲಿ Press conference ಏರ್ಪಡಿಸಲಾಗಿತ್ತು. ಹುಝೂರ್(ಅ.ಬಿ.ಅ.) ಆಗಮಿಸುವ ಮೊದಲೆ ಎಲೆಕ್ಟ್ರಾನಿಕ್ ಮತ್ತು ಪ್ರಿಂಟ್ ಹಾಗೂ Social ಮಾಧ್ಯಮದ ಪ್ರತಿನಿಧಿಗಳು ಗ್ರಂಥಾಲಯ ಸಭಾಂಗಣದಲ್ಲಿ ಉಪಸ್ಥಿತರಿದ್ದು ಹುಝೂರ್(ಅ.ಬಿ.ಅ.)ರ ಆಗಮವನ್ನು ಕಾಯುತ್ತಿದ್ದರು.

**Press conference (ಮಾಧ್ಯಮ ಸಭೆ)**

ಇಂದಿನ ಈ Press conference ನಲ್ಲಿ ಹಾಲೆಂಡಿನ ರಾಷ್ಟ್ರೀಯ ಪತ್ರಿಕೆ De volkskrant ರ ಸಂಪಾದಕರು, ರೀಜಿನಲ್ (ಸ್ಥಳಿಯ) ಆನ್‌ಲೈನ್ ಪತ್ರಿಕೆ Zwolle newsರ ಸಂಪಾದಕರು, ರೀಜಿನಲ್ ಟಿ.ವಿ. Omroep Flevolandನ ಜರ್ನಲಿಸ್ಟ್, ಯೂರೋ ಟೈಮ್ಸ್ ಬೆಲ್ಜಿಯಂ ಪ್ರತಿನಿಧಿ ಮತ್ತು ಇತರ ಪ್ರತಿನಿಧಿಗಳು ಉಪಸ್ಥಿತರಿದ್ದರು.

ಪ್ರಥಮವಾಗಿ Mr. Ben van Raaij ಅವರು ಒಂದು ರಾಷ್ಟ್ರೀಯ ಪತ್ರಿಕೆ De volkskrant ರ ಪ್ರತಿನಿಧಿಗಳು ಅಲ್ಮೀರೆಯ ಮಸೀದಿ ಉದ್ಘಾಟನೆಗಾಗಿ ಶುಭ ಕೋರಿದರು. ಅದಕ್ಕೆ ಹುಝೂರ್(ಅ.ಬಿ.ಅ.) ಕೃತಜ್ಞತೆ ಅರ್ಪಿಸಿದರು. ಅನಂತರ ಅವರು ಪ್ರಶ್ನೆ ಕೇಳಿದರು. ಜಮಾಅತ್ ಅಹ್ಮದಿಯಾ ಪಾಕಿಸ್ತಾನದಲ್ಲಿ ಮಸ್ಜಿದ್ ನಿರ್ಮಿಸುವುದು ಸಾಧ್ಯವೇ? ಅದಕ್ಕೆ ಹುಝೂರ್(ಅ.ಬಿ.ಅ.) ಉತ್ತರಿಸಿದರು. ಪಾಕಿಸ್ತಾನದ ಕಾನೂನು ನಮಗೆ ಯಾವುದೇ ಇಸ್ಲಾಮಿನ ಚಟುವಟಿಕೆಗಳು ನಡೆಸಲು ಅನುಮತಿಸುವುದಿಲ್ಲ. ಆದ್ದರಿಂದ ಕಾನೂನಿನ ಅಡಿಯಲ್ಲಿ ನಾವು ಅಲ್ಲಿ ಮಸೀದಿ ನಿರ್ಮಾಣ ಮಾಡಲು ಸಾಧ್ಯವಿಲ್ಲ. ಅಲ್ಲದೇ ಈ ಕಾನೂನಿಗಿಂತ ಮೊದಲು ನಾವು ಕಟ್ಟಿಸಿದ ಮಸೀದಿಗಳನ್ನು ಮಸೀದಿ ಎನ್ನಲು ಬಿಡುವುದಿಲ್ಲ.

ಅದೇ ಸಂಪಾದಕರು ಕೇಳಿದರು. ಹಿಂದಿನ ವರ್ಷ ಹೊಸ ಸರ್ಕಾರ ಬಂದಿದೆ. ಕೆಲವು ಜನರ ಭಾವನೆ ಈ ಹೊಸ ಸರ್ಕಾರ ಧಾರ್ಮಿಕ ಅಲ್ಪಸಂಖ್ಯಾತರ ಪೈಕಿ ಮೃದು ಧೋರಣೆ ಹೊಂದಿದೆ ಎಂದಾಗಿದೆ. ಆದರೆ ಇದು ಕೆಲ ಜನರ ಭಾವನೆ ಮಾತ್ರವಾಗಿದೆ. ಈ ಸರ್ಕಾರಕ್ಕೆ ಏನೂ ಮಾಡಲು ಅಸಾಧ್ಯವಾಗಿದೆ. ಏಕೆಂದರೆ ಅವರಿಗೆ ಕೆಲವು ಧಾರ್ಮಿಕ ಅಲ್ಪಸಂಖ್ಯಾತ ವಿರೋಧಿಗಳ ಬೆಂಬಲವಿದೆ.

ಪ್ರಸಕ್ತ ಸರಕಾರ ಮತ್ತು ಪಾಕಿಸ್ತಾನದಲ್ಲಿ ಧಾರ್ಮಿಕ ಸ್ವಾತಂತ್ರ್ಯದ ಬಗ್ಗೆ ನಿಮ್ಮ ವಿಚಾರ ಏನು? ಅದಕ್ಕೆ ಹುಝೂರ್(ಅ.ಬಿ.ಅ.) ಉತ್ತರಿಸಿದರು. ನೀವು ಪಾಕಿಸ್ತಾನದ ಜನರ ಭಾವನೆಗಳನ್ನು ಅರಿತರೆ ತಿಳಿಯಬಹುದು. ಪಾಕಿಸ್ತಾನಿಯರು ತಮ್ಮನ್ನು ಧರ್ಮನಿಷ್ಠರು ಎಂದು ಹೇಳಿಕೊಳ್ಳುತ್ತಾರೆ. ಈ ಕಾರಣದಿಂದಲೇ ಪಾಕಿಸ್ತಾನದಲ್ಲಿ ಜನಸಾಮಾನ್ಯರು ಮತಪಂಡಿತರ ಅಥವಾ ಮುಲ್ಲಾಗಳ ಕೈವಶವಾಗಿದ್ದಾರೆ. ನಿಸ್ಸಂಶಯವಾಗಿಯೂ ಆ ಮತಪಂಡಿತರ ಕೈಯಲ್ಲಿ ಯಾವುದೇ ರಾಜಕೀಯ ಶಕ್ತಿ ಇಲ್ಲ. ಆದರೆ ಅವರು ಪ್ರಜೆಗಳನ್ನು ಬೀದಿಗೆ ತರಬಹುದಾಗಿದೆ. ಆ ಕಾರಣದಿಂದ ಅಧಿಕಾರ ದೊರೆತ ಯಾವುದೇ ಪಕ್ಷವಾಗಲಿ ಸಾಮಾಜಿಕ ನ್ಯಾಯದ ದಾವೆ ಮಾಡುತ್ತದೆ. ಆದರೆ ಅದು ಮುಲ್ಲಾಗಳಿಂದ ಭಯಪಡುತ್ತವೆ. ಏಕೆಂದರೆ ಅವರು ಪ್ರಜೆಗಳನ್ನು ಬೀದಿಗೆ ತರಬಲ್ಲರು. ಆದ್ದರಿಂದ ಎಲ್ಲಿಯವರೆಗೆ ಮುಲ್ಲಾಗಳ ಭಯ ಅವರಿಗೆ ಇರುತ್ತದೆಯೋ ಅಲ್ಲಿಯ ತನಕ ಸರಕಾರ ತಾನು ಬಯಸಿದೆಲ್ಲ ಮಾಡಬಹುದೆನ್ನಲು ಸಾಧ್ಯವಿಲ್ಲ.

ಆ ಪತ್ರಕರ್ತರು ಕೇಳಿದರು. ನೀವು ಪಾಕಿಸ್ತಾನಕ್ಕೆ ಹೋಗಬಹುದೇ? ಆಗ ಹುಝೂರ್(ಅ.ಬಿ.ಅ.) ಹೇಳಿದರು. ಹೌದು ನಾನು ಪಾಕಿಸ್ತಾನಕ್ಕೆ ಹೋಬಹುದು. ಆದರೆ ಒಂದು ಶರತ್ತಿನ ಮೇಲೆ ಅದೇನೆಂದರೆ ನಾನು ಮೌನವಾಗಿರಬೇಕು. ಅಲ್ಲಿ ಹೋಗಿ ಸ್ವಯಂ ನನ್ನನ್ನು ಮುಸ್ಲಿಂ ಎಂದು ಹೇಳಿಕೊಳ್ಳುವ ಹಾಗಿಲ್ಲ ಮತ್ತು ಯಾವುದೇ ಇಸ್ಲಾಮಿನ ಚಟುವಟಿಕೆಗಳು ನಿರ್ವಹಿಸುವಂತಿಲ್ಲ. ಆದ್ದರಿಂದ ಅಹ್ಮದಿಯಾ ಜಮಾಅತಿನ ನೇತಾರನಾದ ಕಾರಣ ನಾನು ಪಾಕಿಸ್ತಾನಕ್ಕೆ ಹೋಗಲು ಇಚ್ಛಿಸುವುದಿಲ್ಲ. ಅಲ್ಲಿಯ ಕಾನೂನಿನ ಪ್ರಕಾರ ನನಗೆ ಮೌನವಾಗಿರಬೇಕಾದರೆ ಅಲ್ಲಿ ಹೋಗಿ ಏನು ಪ್ರಯೋಜನ.

ಪತ್ರಕರ್ತರು ಕೇಳಿದರು. ನಿಮ್ಮ ವಿಚಾರದಲ್ಲಿ ಹೇಗೆ ಪರಿಸ್ಥಿತಿಗಳನ್ನು ಸರಿ ಮಾಡಬಹುದು. ಯಾವ ವಿಧಾನ ಅನುಸರಿಸಬಹುದು? ಆಗ ಹುಝೂರ್(ಅ.ಬಿ.ಅ.) ಹೇಳಿದರು. ಎಲ್ಲಿಯತನಕ ಅಹ್ಮದಿಯರಿಗೆ ಅಲ್ಲಿ ಅಮುಸ್ಲಿಮ್ ಎಂಬ ಕಾನೂನಿದೆಯೋ, ಅಲ್ಲಿಯ ಕಾನೂನು ಹೇಳುವುದು. For the purpose of law and constitution Ahmadis are not muslims ಅಲ್ಲದೇ ಈ ಕಾನೂನು ಝಿಯಾವುಲ್ ಹಕ್ ಮಾರ್ಷಲ್ ಲಾ Regime ಮೂಲಕ ಇನ್ನು ಕಠಿಣಗೊಳಿಸಲಾಯಿತು. ಈಗ ನಾವು ಅಲ್ಲಿ **"ಅಸ್ಸಲಾಮು ಅಲೈಕುಂ"** ಹೇಳಲೂ ಸಾಧ್ಯವಿಲ್ಲ. ಮಸೀದಿಗಳನ್ನು ಮಸೀದಿ ಎನ್ನಲೂ ಸಾಧ್ಯವಿಲ್ಲ. ನಾನು ಹೇಳಿದಂತೆ ಯಾವುದೇ ರೀತಿಯಲ್ಲಿ ಸಾಂಕೇತಿಕವಾಗಿಯೂ ಮುಸಲ್ಮಾನ ಎನ್ನುವ ಹಾಗಿಲ್ಲ. ಆದ್ದರಿಂದ ಎಲ್ಲಿಯುವರೆಗೆ ಈ ಕಾನೂನಿರುತ್ತದೆಯೋ ಯಾವುದೇ ರೀತಿಯ ಸುಧಾರಣೆ ತರಲು ಸಾಧ್ಯವಿಲ್ಲ. ಸಧ್ಯ ಯಾವ ಪಕ್ಷಕ್ಕಾಗಲೀ ಅಥವಾ ಸರಕಾರಕ್ಕಾಗಲೀ ಈ ಕಾನೂನು ಅಂತ್ಯಗೊಳಿಸುವ ಧೈರ್ಯ ಇಲ್ಲ.

ಅನಂತರ ರೀಜನಲ್ ಆನ್‌ಲೈನ್ ಪತ್ರಿಕೆ Zwolle nieuws ರ ಸಂಪಾದಕರು Mr. Tuininga ಪ್ರಶ್ನೆ ಕೇಳಿದರು. ಹಾಲೆಂಡಿನ ಅಹ್ಮದಿ ಮುಸಲ್ಮಾನರ ಪರವಾಗಿ ಏನು ಹೇಳಬಯಸುತ್ತೀರಿ? ಆಗ ಹುಝೂರ್(ಅ.ಬಿ.ಅ.) ಹೇಳಿದರು. ಹಾಲೆಂಡಿನಲ್ಲಿ ನಿರಾಶ್ರಿತರಾಗಿ ಬಂದಿರುವ ಅಹ್ಮದಿ ಮುಸಲ್ಮಾನರ ಸಂಖ್ಯೆ ಹೆಚ್ಚಿದೆ. ಅವರು ಪಾಕಿಸ್ತಾನದಿಂದ ವಲಸಿಗರಾಗಿ ಈ ದೇಶಕ್ಕೆ ಬಂದವರಾಗಿದ್ದಾರೆ. ಅಲ್ಲದೇ ಸುರೇನಾಮದಿಂದ ಬಂದ ಕೆಲವು ಅಹ್ಮದಿಯರಿದ್ದಾರೆ. ಅವರು ಗತಕಾಲದಲ್ಲಿ ಡಚ್ ಕಾಲೋನಿಯಾದ ಕಾರಣ ಇಲ್ಲಿ ನೆಲೆಸಿದ್ದಾರೆ. ಆದರೆ ಹೆಚ್ಚಿನ ಅಹ್ಮದಿಯರ ಸಂಬಂಧ ಪಾಕಿಸ್ತಾನದೊಂದಿಗಿದೆ. ಇಲ್ಲಿ ಅವರು ರಾಜಕೀಯ ಶರಣು ಹೊಂದಿದವರಾಗಿದ್ದಾರೆ. ಆದ್ದರಿಂದ ನಾವು ಇಲ್ಲಿ ನೆಲೆಸಲು ಕಾರಣವೆಂದರೆ, ಇಲ್ಲಿ ನಮಗೆ ನಮ್ಮ ವಿಶ್ವಾಸಗಳ ಪ್ರಕಾರ ಇರುವ ಸ್ವಾತಂತ್ರ್ಯವಿದೆ. ನಮಗೆ ಪ್ರಚಾರ ಮಾಡುವ ಅನುಮತಿ ಇದೆ. ಸದ್ಯ ನಮ್ಮ ಜಮಾಅತಿನ ಹೆಚ್ಚಿನ ಸಂಖ್ಯೆ ಪಾಕಿಸ್ತಾನಿಯರದ್ದಾಗಿದೆ. ಭವಿಷ್ಯಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಅಹ್ಮದಿಯಾ ಜಮಾಅತಿನ ಶಾಸಕರು ಆಗಮಿಸುವ ಉದ್ದೇಶವು ಇಸ್ಲಾಮಿನ

ವಾಸ್ತವ ಶಿಕ್ಷಣವನ್ನು ಪ್ರಚಾರಗೊಳಿಸುವುದಾಗಿದೆ. ಆವರನ್ನು ಇಸ್ಲಾಮಿನ ನೈಜ ಶಿಕ್ಷಣದಿಂದ ತರಬೇತಿಗೊಳಿಸುವುದಾಗಿದೆ. ಆ ವಾಸ್ತವಿಕ ಶಿಕ್ಷಣ ಪ್ರೀತಿ, ಶಾಂತಿ ಮತ್ತು ಸೌಹಾರ್ಧತೆಯಾಗಿವೆ. ಇದರ ಪ್ರಚಾರವೇ ನಾವು ಮಾಡುತ್ತಿರುವುದು. ಆದ್ದರಿಂದ ಕೆಲ ಡಚ್ ಜನರೂ ನಮ್ಮ ಜಮಾಅತಿಗೆ ಸೇರಿದ್ದಾರೆ. ಅಲ್ಲದೇ ಸದ್ಯ ಹಾಲೆಂಡಿನ ಜಮಾಅತಿನ ಅಧ್ಯಕ್ಷರು ಡಚ್‌ನವರೆ ಆಗಿರುವರು.

ಹುಝೂರ್(ಅ.ಬಿ.ಅ.) ಹೇಳಿದರು: ಖುರ್‌ಆನಿನ ಉಪದೇಶ ಪ್ರಕಾರ "ಧರ್ಮದಲ್ಲಿ ಯಾವುದೇ ಬಲಾತ್ಕಾರವಿಲ್ಲ". ಆದರೆ ಇನ್ನೊಂದೆಡೆ ಜನರಿಗೆ ಸರಿ ಏನು ತಪ್ಪೇನು ಹೇಳಲು ಉಪದೇಶವಿದೆ. ಒಂದು ಧಾರ್ಮಿಕ ಸಂಘಟನೆಯಾದ ನೆಲೆಯಲ್ಲಿ, ಒಬ್ಬ ಧಾರ್ಮಿಕ ಮನುಷ್ಯನಾದ ನೆಲೆಯಲ್ಲಿ ಧರ್ಮ ಪ್ರಚಾರ ಮಾಡುವುದು ನಮ್ಮ ಕರ್ತವ್ಯವಾಗಿರುತ್ತದೆ. ಆದ್ದರಿಂದ ಯಾರಿಗೆ ಈ ಧರ್ಮ ಮನವರಿಕೆಯಾಗುತ್ತದೆಯೋ ಅವರು ನಮ್ಮಲ್ಲಿ ಸೇರುತ್ತಾರೆ. ಜನರು ಬರುವರು ಎಂದು ನಾವು ಆಶಾವಾದ ಹೊಂದಿದ್ದೇವೆ. ಕೇವಲ ಹಾಲೆಂಡಿನಲ್ಲಿ ಮಾತ್ರವಲ್ಲ. ಇಲ್ಲಿ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಈ ಜನಾಂಗವಿಲ್ಲದಿದ್ದರೂ ಮುಂದಿನ ಜನಾಂಗ ಇಸ್ಲಾಮಿನತ್ತ ಬರುವುದು. ಈ ಬಗ್ಗೆ ನಾವು ತುಂಬ ಭರವಸೆ ಹೊಂದಿದ್ದೇವೆ. ಜನರು ಇಸ್ಲಾಮ್ ಸ್ವೀಕರಿಸುವರು ಮತ್ತು ತನ್ನ ಸೃಷ್ಟಿಕರ್ತನ ಸಮೀಪಕ್ಕೆ ಬರುವರು ಎಂದು.

ಅನಂತರ ಒಂದು ರೀಜಿನಲ್ ಟಿ.ವಿ omroep Flevoland ನ ಒಬ್ಬ ಪತ್ರಕರ್ತ Mr. Menno Hoeboer ಹೇಳಿದರು. ನಿಮಗೆ ಇಂದು ತುಂಬ ಸಂತೋಷದ ದಿನವಾಗಿರಬಹುದು? ಆಗ ಹುಝೂರ್(ಅ.ಬಿ.ಅ.) ಹೇಳಿದರು. ಹೌದು ನಿಮ್ಮ ಮಾತು ಸರಿಯಾಗಿದೆ. ನಾವು ಎಂದು ಮಸೀದಿಯ ಉದ್ಘಾಟನೆ ಮಾಡುತ್ತೇವೆಯೋ ಅಂದು ನಮಗೆ ಸಂತೋಷದ ದಿನವಾಗಿರುತ್ತದೆ. ಇಂದಿನ ಭಾಷಣದಲ್ಲಿಯೂ ನಾನು ಈ ಮಸೀದಿಯ ಉದ್ಘಾಟನೆಯ ಕುರಿತು ನನ್ನ ಭಾವನೆಗಳನ್ನು ಮತ್ತು ಅನಿಸಿಕೆಗಳನ್ನು ವಿವರಿಸುವೆನು.

ಅದೇ ಪತ್ರಕರ್ತರು ಮುಂದುವರೆದು ಕೇಳಿದರು. ನೀವು ಮಸೀದಿಯನ್ನು ಸಂದರ್ಶಿಸಿರುವಿರೋ? ಮಸೀದಿಯ ಕುರಿತು ನಿಮ್ಮ ಅಭಿಪ್ರಾಯಗಳೇನು? ಆಗ ಹುಝೂರ್(ಅ.ಬಿ.ಅ.) ಹೇಳಿದರು. ನಾನು ಇಡಿ ಕಟ್ಟಡವನ್ನು ಇನ್ನೂ ನೋಡಲಿಲ್ಲ. ಮಸೀದಿಯ ಮೇಲಿನ ಸಭಾಂಗಣಕ್ಕೆ ಹೋಗಿದ್ದು, ಅದಂತೂ ತುಂಬ ಚೆನ್ನಾಗಿ ಇರುವಂತೆ ಕಾಣುತ್ತಿತ್ತು.

ಒಟ್ಟಿನಲ್ಲಿ ನಮ್ಮ ಸಾಂಪತ್ತಿಕ ದೃಷ್ಟಿಯಿಂದ ನಮಗೆ ಬಹು ದೊಡ್ಡ ಮಸೀದಿ ಕಟ್ಟಲು ಸಾಧ್ಯವಿರಲಿಲ್ಲ. ಹಾಗೂ ಕೌನ್ಸಿಲ್ ಸಹ ನಮಗೆ ದೊಡ್ಡ ಮಸೀದಿ ನಿರ್ಮಿಸಲು ಅನುಮತಿ ನೀಡುತ್ತಿರಲಿಲ್ಲ. ನಾವು ಈ ಕ್ಷೇತ್ರದಲ್ಲಿ ಮಸೀದಿ ನಿರ್ಮಾಣ ಕಾರ್ಯ ಪ್ರಾರಂಭಿಸಿದಾಗ ನಮ್ಮ ಜಮಾಅತ್ತಿನ ಸಂಖ್ಯೆ ತುಂಬ ಕಡಿಮೆಯಿತ್ತು. ಆದರೆ ಈಗ ಸಂಖ್ಯೆಯು ಹೆಚ್ಚುತ್ತಿದೆ ಎಂದು ತಿಳಿದು ಬಂದಿದೆ. ಆದ್ದರಿಂದ ನನ್ನ ಅಭಿಪ್ರಾಯದಲ್ಲಿ ಎಲ್ಲರು ಸೇರಿದರೆ ಈ ಸ್ಥಳ ಜಮಾಅತ್ ಸಹಿತ ನಮಾಝ್ ಮಾಡಲು ಸಾಲದಾಗಬಹುದು. ಅಂತೂ ಈ ಮಸೀದಿ ತುಂಬಾ ಸುಂದರವಾಗಿದೆ. ಸೌಂಧರ್ಯದ ದೃಷ್ಟಿಯಿಂದಲೂ ತುಂಬ ಚೆನ್ನಾಗಿದೆ. ನಿಮಗೆ ಈ ಮಸೀದಿ ಹೇಗೆ ಅನಿಸಿತು? ಈ ಮಸೀದಿಯು ನಿಮ್ಮ ಇಲ್ಲಿನ Architectural design ನಂತೆ ಇದೆಯೇ.

ಪತ್ರಕರ್ತರು ಕೇಳಿದರು ಈ ಮಸೀದಿಯಲ್ಲಿ ಅಂತಹ ವಿಶೇಷವೇನಿದೆ. ಸ್ವಯಂ ನೀವೇ ಉದ್ಘಾಟಿಸಲು ಇಲ್ಲಿಗೆ ಆಗಮಿಸಿದ್ದೀರಿ? ಆಗ ಹುಝೂರ್(ಅ.ಬಿ.ಅ.) ಹೇಳಿದರು! ಇಲ್ಲಿ ನಮ್ಮ ಒಂದು ಸಣ್ಣ ಜಮಾಅತಿದೆ. ನಾನು ಇಲ್ಲಿ ಆಗಾಗ ಬರುತ್ತಿರುತ್ತೇನೆ. ಒಂದು ದೀರ್ಘ ಅವಧಿಯ ನಂತರ ಅಲ್ಲಾಹನು ನಮಗೆ ಈ ಮಸೀದಿಯನ್ನು ನೀಡಿದ. ಆದ್ದರಿಂದ ಇಲ್ಲಿಯ ಜಮಾಅತಿನ ಜನರ ಆಸೆಯಾಗಿತ್ತು ನಾನು ಇಲ್ಲಿಗೆ ಬಂದು ಉದ್ಘಾಟಿಸಬೇಕೆಂದು ಹಾಗೆ ನನ್ನ ಇಚ್ಛೆಯೂ ಆಗಿತ್ತು. ಜರ್ಮನಿಯಲ್ಲಿಯೂ ನಾವು ಪ್ರತಿ ವರ್ಷ ನಾಲ್ಕೈದು ಮಸೀದಿಗಳನ್ನು ಉದ್ಘಾಟಿಸುತ್ತೇವೆ. ನಾನು ಅಲ್ಲಿಗೂ ಹೋಗುತ್ತೇನೆ. ಎಲ್ಲೆಲ್ಲಿ ಹೋಗಲು ಸಾಧ್ಯವೋ ಅಲ್ಲಿ ಹೋಗುತ್ತೇನೆ. ಈ ರೀತಿ ಸ್ಥಳೀಯ ಅಹ್ಮದಿ ಜನರೊಂದಿಗೆ ನನಗೆ ಭೇಟಿಯಾಗುವ ಅವಕಾಶ ದೊರೆಯುತ್ತದೆ. ಅವರಿಗೆ ಪ್ರೋತ್ಸಾಹ ದೊರೆಯುತ್ತದೆ ಮತ್ತು ಇಮಾಮ್ ಜಮಾಅತ್‌ರೊಂದಿಗೆ ಅವರ ಸಂಬಂಧ ಬಲಗೊಳ್ಳುತ್ತದೆ. ಇದರಿಂದ ಅವರಿಗೆ ಆಧ್ಯಾತ್ಮಿಕ ಉನ್ನತಿ ಸಾಧಿಸಲು ಅವಕಾಶ ದೊರೆದಂತಾಗುತ್ತದೆ.

ಅನಂತರ ಯೂರೋ ಟ್ಯಾಮ್ಸ್ ಬಿಲ್ಜಿಯಂನ ಪ್ರತಿನಿಧಿಗಳಾದ ಮುಹಮ್ಮದ್ ಝಿಶಾನ್ ಸಾಹಿಬ್ ಅವರು ಪ್ರಶ್ನೆ ಕೇಳಿದರು. ಇಂದಿನ ರಾಜಕಾರಣಿಯ ಮತ್ತು ವಿಜ್ಞಾನಿಗಳು climate change ಕುರಿತು ತಿಳುವಳಿಕೆ ಕೊಡಲು ಪ್ರಯತ್ನಿಸುತ್ತಿದ್ದಾರೆ. ಈ ಕುರಿತು ತಮ್ಮ ಭಾವನೆ ಏನು? ಆಗ ಹುಝೂರ್(ಅ.ಬಿ.ಅ.) ಹೇಳಿದರು ಇದಂತೂ ಸ್ಪಷ್ಟ, ಲೋಕದಲ್ಲಿ ಎಲ್ಲ ಕಡೆ ಬೆಳೆಯುತ್ತಿರುವ ಜನಸಂಖ್ಯೆಯ ದೃಷ್ಟಿಯಿಂದ ನಿರ್ಮಾಣ ಕಾರ್ಯ ಹೆಚ್ಚಳಗೊಂಡಿದೆ. ಜನರಿಗೆ ವಸತಿ ಸಮಸ್ಯೆಯಿದೆ. ಆ ಕಾರಣ ಮರಗಳನ್ನು ಕಡಿಯಲಾಗುತ್ತಿದೆ. Deforestation ಮಾಡಲಾಗುತ್ತಿದೆ. ಹೊಸ ಗಿಡಗಳನ್ನು ನೆಡಲಾಗುತ್ತಿಲ್ಲ. ವಿಶೇಷವಾಗಿ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಅದರ ಜೊತೆ ಜೊತೆಯಲ್ಲಿ ಕಾರ್ಬನ್ emission ಹೆಚ್ಚಲು ಕಾರ್ಖಾನೆಗಳು ಒಂದು ಕಾರಣವಾಗಿದೆ. ಅದು ಪರಿಸರವನ್ನು ಹಾಳುಗೆಡಹುತ್ತದೆ. ಈಗ ಹೆಚ್ಚಿನ ಅನುಭವಸ್ಥರು ಹೇಳತೊಡಗಿದ್ದಾರೆ. ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ಜಾರಿಯಲ್ಲಿರುವ ಯುದ್ಧಗಳು emission ಹಾಗೂ ಉಷ್ಣಾಂಶ ಹೆಚ್ಚಳಕ್ಕೆ ಕಾರಣವಾಗುತ್ತಿದೆ. ಆದ್ದರಿಂದ ಇದು climate change ಗೋಸ್ಕರ ಒಂದು ಕಾರಣವಾಗಬಹುದು. ನನ್ನ ಭಾವನೆಯೂ ಇದಾಗಿದೆ.

ಹುಝೂರ್(ಅ.ಬಿ.ಅ.) ಹೇಳಿದರು. ಆದ್ದರಿಂದ ನಮಗೆ ಸಸ್ಯನೆಡುವಿಕೆಯ ಕಡೆ ಹೆಚ್ಚು ಗಮನ ಕೊಡಬೇಕಾಗಿದೆ ಮತ್ತು ಕಾರ್ಬನ್ emission ಕಡಿಮೆಗೊಳಿಸುವ ಕಡೆಯೂ ಲಕ್ಷ್ಯ ವಹಿಸಬೇಕಾಗಿದೆ. ಅಲ್ಲದೇ ಇಂದು ಉಪಯೋಗಿಸಲ್ಪಡುವ ಆಯುಧಗಳೂ emission ಉತ್ಪಾದಿಸುತ್ತಿದೆ. ಕಾರ್ಖಾನೆಗಳು ಇದರ ಒಂದು ಕಾರಣವಾಗಿವೆ.

ಅದೇ ಪತ್ರಕರ್ತರು ಕೇಳಿದರು. ಡಚ್ ಸರಕಾರವು ಎಲ್ಲಾ ಸರಕಾರಿ ಸಂಸ್ಥೆಗಳ ಕಚೇರಿಗಳಲ್ಲಿ ಹಿಜಾಬ್ ಮತ್ತು ಬುರ್ಖದ ಮೇಲೆ ನಿಷೇಧ ಹೇರಿದೆ. ಇದರ ಕುರಿತು ಹುಝೂರ್(ಅ.ಬಿ.ಅ.) ಅಭಿಪ್ರಾಯವೇನು? ಅದಕ್ಕೆ ಹುಝೂರ್(ಅ.ಬಿ.ಅ.) ಹೀಗೆ ಉತ್ತರಿಸಿದರು: ನನ್ನ ದೃಷ್ಟಿಯಲ್ಲಿ ಯಾರಾದರು ಒಬ್ಬ ಇಂತಹ ಒಂದು ವೇಷ ಧರಿಸುವುದು ನನ್ನ ಧಾರ್ಮಿಕ ಕರ್ತವ್ಯವೆಂದರೆ ಆ ವಿಷಯದಲ್ಲಿ ಸರಕಾರಗಳು ಹಸ್ತಕ್ಷೇಪ ಮಾಡಬಾರದು. ಇದು ಇನ್ನೊಬ್ಬರ ಧಾರ್ಮಿಕ ಕಾರ್ಯಗಳಲ್ಲಿ ಹಸ್ತಕ್ಷೇಪ ಮಾಡಿದಂತಾಗುತ್ತದೆ. ಕೆನಡದ ಪಾರ್ಲಿಮೆಂಟಿನಲ್ಲಿ ಸಿಖ್ ಒಬ್ಬರು ಭಾಷಣ ಮಾಡಿದರು. ಅದರಲ್ಲಿ ಅವರು ನನಗೆ ಪಗಡಿ ಧರಿಸುವ ಹಕ್ಕಿದೆ. ಒಬ್ಬ ಯಹೂದಿಗೆ ಸಣ್ಣ ಟೊಪ್ಪಿ ಧರಿಸುವ ಹಕ್ಕಿದೆ. ಕ್ರೈಸ್ತರ ಹಕ್ಕುಗಳು ಇವೆ. ಅದೇ ರೀತಿ ಮುಸ್ಲಿಂ ಮಹಿಳೆಯರೂ ಯಾರ ಬಲವಂತವಿಲ್ಲದೆ ಸ್ವ ಇಚ್ಚೆಯಿಂದ ಬುರ್ಖಾ ಅಥವಾ ಹಿಜಾಬ್ ಧರಿಸ ಬಯಸಿದರೆ ಅವರಿಗೆ ಈ ಹಕ್ಕಿನಿಂದ ವಂಚಿಸಬಾರದಾಗಿದೆ.

ಅನಂತರ ಪತ್ರಕರ್ತರೊಬ್ಬರು ಕೇಳಿದರು. ಇಲ್ಲಿ press conference ನಲ್ಲಿ ಯಾವೊಬ್ಬ ಮಹಿಳೆಯೂ ಇಲ್ಲ. ಇದಕ್ಕೆ ಏನು ಕಾರಣ? ಆಗ ಹುಝೂರ್(ಅ.ಬಿ.ಅ.) ಹೇಳಿದರು. ಯಾವ ಮಹಿಳೆಯೂ ಇಲ್ಲಿ ಏಕೆ ಇಲ್ಲ? ಎಂದು ನನಗೆ ತಿಳಿದಿಲ್ಲ. ನಾನು ಜರ್ಮನಿ, ಅಮೇರಿಕಾ ಅಥವಾ ಕೆನಡಾ ಮುಂತಾದ ಕಡೆ ಹೋಗುತ್ತೇನೆ ಅಲ್ಲಿ press conference ನಲ್ಲಿ ಹೆಚ್ಚಿನ ಸಂಖ್ಯೆಯ ಮಹಿಳೆಯರು ಉಪಸ್ಥಿತರಿರುತ್ತಾರೆ.

ಮತ್ತೆ ಆ ಪತ್ರಕರ್ತರು ಕೇಳಿದರು. ಈ ಮಸೀದಿಯಲ್ಲಿ ಮಹಿಳೆಯರು ಪ್ರವೇಶ ಮಾಡಬಹುದೇ ಮತ್ತು ಪುರುಷರ ಜೊತೆಯಲ್ಲಿ ನಮಾಝ್ ಮಾಡಬಹುದೇ? ಆಗ ಹುಝೂರ್ ಹೇಳಿದರು. ಮೊದಲು ಹೇಳುವುದಾದರೆ ಮಹಿಳೆಯರಿಗೆ ಮಸೀದಿಯಲ್ಲಿ ಬರಲು ಅನುಮತಿ ಇದೆ. ಎರಡನೆಯದಾಗಿ ಅವರಿಗೆ ಮಸೀದಿಯಲ್ಲಿ ನಮಾಝ್ ಮಾಡಲು ಅನಮತಿ ಇದೆ. ಆದರೆ ನಮ್ಮ ಧಾರ್ಮಿಕ ಶಿಕ್ಷಣದನ್ವಯ ಮಹಿಳೆಯರಿಗೆ ನಮಾಝ್ ಮಾಡಲು ಪುರುಷರ ಸಭಾಂಗಣ ರೀತಿಯಲ್ಲಿ ಅವರಿಗೆ ಪ್ರತ್ಯೇಕ ಸಭಾಂಗಣ ಒದಗಿಸಲಾಗುತ್ತದೆ. ಕೆಲವೊಮ್ಮೆ ಈ ಸಭಾಂಗಣಗಳು ಒಟ್ಟೊಟ್ಟಿಗೆ ಇರುತ್ತವೆ. ಕೆಲವು ಸಂದರ್ಭಗಳಲ್ಲಿ ಪುರುಷರು ಮೇಲೆ ಮತ್ತು ಮಹಿಳೆಯರು ಕೆಳಗೆ, ಕೆಲವು ಸಂದರ್ಭಗಳಲ್ಲಿ ಪುರುಷರು ಕೆಳಗೆ ಮತ್ತು ಮಹಿಳೆಯರು ಮೇಲೆ ಇರುತ್ತಾರೆ. ನಮ್ಮ ವಿಶ್ವಾಸದ ಪ್ರಕಾರ ಪುರುಷರು ಮಹಿಳೆಯರು ಬೇರೆ ಬೇರೆಯಾಗಿದ್ದರೆ ಹೆಚ್ಚಿನ ಏಕಾಗ್ರತೆ ಹೊಂದಿ ನಮಾಝ್ ಮಾಡಬಹುದಾಗಿದೆ.

ಅದೇ ಪತ್ರಕರ್ತರು ಪ್ರಶ್ನೆ ಮಾಡಿದರು: ಮುಸ್ಲಿಮೇತರರೂ ಮಸೀದಿಯಲ್ಲಿ ಬಂದು ಆರಾಧಿಸಬಹುದೇ? ಆಗ ಹುಝೂರ್(ಅ.ಬಿ.ಅ.) ಹೇಳಿದರು. ಇಸ್ಲಾಮ್ ಸ್ಥಾಪಕರಾದ ಪ್ರವಾದಿ ಮುಹಮ್ಮದ್(ಸ) ರವರ ಕಾಲದಲ್ಲಿ ಅವರ ಬಳಿ ನಜ್‌ರಾನಿನ ಒಂದು ಕ್ರೈಸ್ತರ ತಂಡ ಬಂದಿತ್ತು. ಅವರು ಪೈಗಂಬರ್(ಸ) ಜೊತೆ ಮಾತುಕತೆಯಲ್ಲಿ ತೊಡಗಿದ್ದರು. ಅಷ್ಟರಲ್ಲಿ ಅವರು ಭಾವಿಸತೊಡಗಿದರು. ಇವರು ವಿಚಾರಿತರಾಗುತ್ತಿದ್ದಾರೆ ಮತ್ತು ನೆಮ್ಮದಿ ಇಲ್ಲದಂತೆ ಭಾಸವಾಗುತ್ತಿದೆ ಎಂಬ ಭಾವಿಸಿ ಅವರೊಡನೆ ಸಮಸ್ಯೆ ಏನೆಂದು ವಿಚಾರಿಸಿದರು? ಆ ತಂಡದ ಸದಸ್ಯರು ಹೇಳಿದರು. ನಮಗೆ ಆರಾಧನೆಯ ಸಮಯವಾಗಿದೆ. ಬಹುಶಃ ಅದು ರವಿವಾರವಾಗಿತ್ತು. ನಮಗೆ ನಮ್ಮ ಧರ್ಮದ ರೀತಿಯಲ್ಲಿ ಆರಾಧನೆ ಮಾಡಲು ಸ್ಥಳ ಕಾಣುತ್ತಿಲ್ಲ. ಆಗ ರಸೂಲೆ ಕರೀಂ(ಸ) ಹೇಳಿದರು. ನೀವು ನಮ್ಮ ಮಸೀದಿಯಲ್ಲಿ ಕುಳಿತುಕೊಂಡಿರುತ್ತೀರಿ. ನೀವು ಇಲ್ಲಿ ತಮ್ಮ ಧರ್ಮಾನುಸಾರ ಆರಾಧನೆ ಮಾಡಬಹುದಾಗಿದೆ.

**(ಮುಂದುವರಿಯುವುದು)**

**ಇನ್ಸಾನಿಯತ್ ಝಿಂದಾಬಾದ್**
**ಮಾನವೀಯತೆ ಚಿರಕಾಲ ಬಾಳಲಿ**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

TITLE NO: PUNKAN00001
Weekly **BADAR** Qadian
Distt: Gurdaspur (Pb.) INDIA Qadian - 143516
Vol No.1 Thursday, 13 February 2020 Issue No. 05

MANAGER
NAWAB AHMAD.
Mobile : +91 94170-20616
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

## ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಯೂರೋಪ್ ಪ್ರವಾಸ (ಸೆಪ್ಟೆಂಬರ್, ಅಕ್ಟೋಬರ್ 2019)

**(ಸರ್ಕುಲರ್ ಸಂಖ್ಯೆ 04ರ ವರದಿಯ ಉಳಿದ ಭಾಗ)**

ನೆಷ್ನಲ್ ಮಜ್ಲಿಸ್ ಆಮೀಲದ ಈ ಸಭೆಯು ಮಧ್ಯಾಹ್ನ ಒಂದು ಗಂಟೆಗೆ ಮುಗಿಯಿತು. ಕೊನೆಯಲ್ಲಿ ಸದಸ್ಯರೆಲ್ಲರೂ ಹುಝೂರ್(ಅ.ಬಿ.ಅ.) ರೊಡನೆ ಭಾವಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು.

ಹುಝೂರ್(ಅ.ಬಿ.ಅ.) ಅವರೊಡನೆ ನೆಷ್ನಲ್ ಮಜ್ಲಿಸ್ ಆಮೀಲ ಖುದ್ದಾಮುಲ್ ಅಹ್ಮದಿಯಾ ಹಾಲೆಂಡ್ ಇವರ ಸಭೆ (Meeting) ಕಾರ್ಯಕ್ರಮಗಳನ್ವಯ ನ್ಯಾಷ್ನಲ್ ಮಜ್ಲಿಸ್ ಆಮೀಲ ಖುದ್ದಾಮುಲ್ ಅಹ್ಮದಿಯಾ ಹಾಲೆಂಡ್ ಅವರ ಹುಝೂರ್(ಅ.ಬಿ.ಅ.) ಅವರ ಜೊತೆ ಸಭೆ ದುಆದೊಂದಿಗೆ ಪ್ರಾರಂಭಗೊಂಡಿತು.

ಹುಝೂರ್(ಅ.ಬಿ.ಅ.) ರವರ ಪ್ರಶ್ನೆಗೆ ಉತ್ತರಿಸುತ್ತಾ ಮೊತಮಿದ್ ಹೇಳಿದರು. ನಮ್ಮಲ್ಲಿ 10 ಮಜಾಲಿಸ್‌ಗಳಿವೆ. 370 ತಜ್‌ನೀದ್ ಇದೆ. ಮತ್ತು ನಮ್ಮ ಎಲ್ಲ ಮಜಾಲಿಸ್‌ಗಳಿಂದ ವರದಿಗಳು ಬರುತ್ತಿವೆ.

ಮುಹತಮಿಮ್ ತರ್‌ಬಿಯತ್ ಅವರಿಗೆ ಹುಝೂರ್ ಕೇಳಿದರು. ತಮ್ಮ ಕಾರ್ಯಕ್ರಮವೇನಿದೆ. ಒಂದು ವರ್ಷದಲ್ಲಿ ಎಷ್ಟು Target ಸಾಧಿಸಿದ್ದೀರಿ. ಒಂದು ವರ್ಷದಲ್ಲಿ ಎಷ್ಟು ಜನರನ್ನು ಜಮಾಅತ್ ಸಹಿತ ನಮಾಝ್ ನಿರ್ವಹಿಸುವಂತೆ ಮಾಡಿದ್ದೀರಿ. ಆಗ ಅವರು ಹೇಳಿದರು. 40% ಖುದ್ದಾಮ್ ಒಂದು ನಮಾಝ್ ಜಮಾಅತ್‌ಸಹಿತ ನಿರ್ವಹಿಸುತ್ತಾರೆ. ಆಗ ಹುಝೂರ್ ಹೇಳಿದರು. ತಮ್ಮ ನೆಷ್ನಲ್ ಆಮೀಲ ಮತ್ತು ಸ್ಥಳೀಯ ಮಜಾಲಿಸಿನ ಆಮೀಲವನ್ನು ಜಮಾಅತ್ ಸಹಿತ ನಮಾಝ್ ಮಾಡುವಂತೆ ಮಾಡಿರಿ. ಬಾಕಿ ಎಲ್ಲ ತಂತಾನೆ ಸುಧಾರಿಸುವುದು.

ಹುಝೂರ್(ಅ.ಬಿ.ಅ.) ಹೇಳಿದರು. ನಿಮ್ಮ ನ್ಯಾಷ್ನಲ್ ಆಮೀಲ ಮತ್ತು ಸ್ಥಳೀಯ ಮಜಾಲಿಸಿನ ಆಮಿಲಾ ಸದಸ್ಯರೆಲ್ಲ ಸೇರಿ ಸಂಖ್ಯೆ 100 ಆಯಿತು. ಇವರೆಲ್ಲರೂ ಜಮಾಅತ್ ಸಹಿತ ನಮಾಝ್ ನಿರ್ವಹಿಸುವವರಾದರೆ ಸಂಖ್ಯೆ 100 ಆಗುತ್ತದೆ ಈ ನೂರು ಜನರನ್ನು ನೋಡಿ ಇನ್ನೂ 50, 60 ಜನರು ಬಂದು ಸೇರಬಹುದು. ಆಗ ನೀವು 40 ಪ್ರತಿಶತ ಸಮೀಪಕ್ಕೆ ತಲುಪುವಿರಿ. ಮತ್ತು ನಿಧಾನವಾಗಿ 50% 60% ಆಗಬಹುದು.

ಹುಝೂರೆ ಅನ್ವರ್ ಹೇಳಿದರು. ಎಷ್ಟೆಲ್ಲ ಮುಬಲ್ಲಿಗ್‌ರಿದ್ದಾರೆ. ಅವರು ಖುದ್ದಾಮರಿಗೆ ನಮಾಝ್ ನಿರ್ವಹಿಸುವ ಕಡೆ ಗಮನವಹಿಸುವಂತೆ ಹೇಳಬೇಕು. ಖುದ್ದಾಮರೊಡನೆ ಸಂಬಂಧ ಬೆಳೆಸಬೇಕು ಮತ್ತು ಅವರನ್ನು ಸಮೀಪಕ್ಕೆ ತರಬೇಕು.

ಮುಹತಮಿಮ್ ತಬ್ಲೀಗ್ ತಮ್ಮ ವರದಿ ಪ್ರಸ್ತುತಪಡಿಸಿ ಹೇಳಿದರು. ನಾವು ವರ್ಷದಲ್ಲಿ 4 ತಬ್ಲೀಗ್ ಕಾರ್ಯಕ್ರಮ ನಿಯೋಜಿಸುತ್ತೇವೆ. ನಮಗೆ ಒಂದು ಬೈಅತ್ ಲಭಿಸಿದೆ.

ಹುಝೂರ್(ಅ.ಬಿ.ಅ.) ಹೇಳಿದರು. ತಬ್ಲೀಗ್ ಮಾಡುವುದು ನಿಮ್ಮ ಕರ್ತವ್ಯವಾಗಿದೆ. ದುಆ ಮಾಡಿ ತಬ್ಲೀಗ್ ಪ್ರಾರಂಭಿಸಬೇಕು ಎಂದೂ ಧೈರ್ಯ ಬಿಡಬಾರದು. ಮಾರ್ಗದರ್ಶನ ನೀಡುವುದು ಅಲ್ಲಾಹನ ಕಾರ್ಯವಾಗಿದೆ. ನಿಮ್ಮ ಕೆಲಸ ಪ್ರತಿಯೊಬ್ಬರಿಗೆ ಸಂದೇಶ ತಲುಪಿಸುವುದಾಗಿದೆ. ನನ್‌ಸ್ಟೆಂಟ್ ಜನರೂ ಜಮಾಅತ್ ಬಗ್ಗೆ ತಿಳುವಳಿಕೆ ಹೊಂದಿಲ್ಲ. ನಗರಕ್ಕೆ ಹೋಗಿ ಜಮಾಅತ್ತಿನ ಪರಿಚಯ ನೀಡಬೇಕು. ಅವರಿಂದ ಜನರಿಗೆ ಜಮಾಅತ್ತಿನ ಬಗ್ಗೆ ಅರಿವು ಉಂಟಾಗುತ್ತದೆ.

ಮುಹ್‌ತಮಿಮ್ ತಬ್ಲೀಗ್ ಹೇಳಿದರು. ಪಠ್ಯದಲ್ಲಿ ಕಿಶ್ತಿ–ನೂಹ್ ಇಡಲಾಗಿದೆ. ಇದಕ್ಕಿಂತ ಮುಂಚೆ "ಬ್ರಿಟಿಷ್ ಸರಕಾರ ಮತ್ತು ಜಿಹಾದ್" ಇತ್ತು. ಅದರ ಡಚ್ ಅನುವಾದವು ಇದೆ. ನಾವು ನಿಗದಿತವಾಗಿ ಪರೀಕ್ಷೆಯೂ ತೆಗೆದುಕೊಳ್ಳುತ್ತೇವೆ.

ಮುಹತಮಿಮ್ ಉಮೂರೆ ತಲಬಾ, ಹುಝೂರ್ ಕೇಳಿದ ಪ್ರಶ್ನೆಗೆ ಉತ್ತರಿಸುತ್ತ ಹೇಳಿದರು. ನಮ್ಮ ವಿದ್ಯಾರ್ಥಿಗಳ ಸಂಖ್ಯೆ 134 ಇದೆ. ಅದರಲ್ಲಿ 24 ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯಕ್ಕೆ (University) ಹೋಗುವವರಿದ್ದಾರೆ.

ಮುಹತಮಿಮ್ ದೈಹಿಕ ಆರೋಗ್ಯ ತಮ್ಮ ಕಾರ್ಯಕ್ರಮಗಳನ್ನು ನಿವೇದಿಸುತ್ತ ಹೇಳಿದರು. ನಾವು ಕ್ರಿಕೆಟ್ ಲೀಗ್ ಮತ್ತು ಫುಟ್‌ಬಾಲ್ ಲೀಗ್ ಕಾರ್ಯಕ್ರಮಗಳು ತಮ್ಮ ಸ್ಥಳೀಯ ಮಜಾಲಿಸ್‌ಗಳಲ್ಲಿ ನಡೆಸುತ್ತಿದ್ದೇವೆ.

ಮುಹತಮಿಮ್ ಖಿದ್‌ಮತ್ ಖಲ್ಕ್ ಹೇಳಿದರು. ಶಾಂತಿ ಸಭೆ (Peace symposium) ಏರ್ಪಡಿಸುತ್ತೇವೆ. ಆಗ ಹುಝೂರ್(ಅ.ಬಿ.ಅ.) ಹೇಳಿದರು. ಶಾಂತಿ ಸಭೆಗೆ, ಜನಸೇವೆಗೆ ಏನು ಸಂಬಂಧ, ನಿಮ್ಮ ಕೆಲಸ ಬಡವರಿಗೆ ಸಹಾಯ ನೀಡುವುದಾಗಿದೆ. Charity walk ನಡೆಸಬಹುದು. ಆಗ ಅವರು ಹೇಳಿದರು. ನಾವು Charity walk ಹಮ್ಮಿಕೊಂಡಿದ್ದೆವು. ಆ ಮೂಲಕ 8 ಸಾವಿರ ಯೂರೋ ಸಂಗ್ರಹಿಸಿದ್ದೆವು. ಈ ಹಣ ಊಈ ಮತ್ತು Charity ರವರಿಗೆ ನೀಡಿದೆವು.

ಮಹಾಸಿಬ್ ತಮ್ಮ ವರದಿ ಪ್ರಸ್ತುತಪಡಿಸುತ್ತ ಹೇಳಿದರು. ಮೂರು ತಿಂಗಳಿಗೊಮ್ಮೆ ಆಡಿಟ್ ಮಾಡುತ್ತೇವೆ. ಎಲ್ಲ ಲೆಕ್ಕ ಚೆಕ್‌ಅಪ್ ಮಾಡುತ್ತೇವೆ.

ಮುಹತಮಿಮ್ ಉದ್ದಿಮೆ ಮತ್ತು ವಾಣಿಜ್ಯ ಹೇಳಿದರು. ನಾವು ನಾಲ್ಕು ಪ್ರಾಜೆಕ್ಟ್‌ಗಳ ಮೇಲೆ ಕಾರ್ಯ ಆರಂಭಿಸಿದ್ದೇವೆ. ಒಂದು ಶಿಕ್ಷಣ ಕ್ಷೇತ್ರದಲ್ಲಿ ಮಾರ್ಗದರ್ಶನ ನೀಡುವುದು ಹುಝೂರೆ ಅನ್ವರ್ ಹೇಳಿದರು. ಶಿಕ್ಷಣದಲ್ಲಿ ಮಾರ್ಗದರ್ಶನ ನೀಡುವುದು ಉಮೂರೆ ತಲಬಾ (ವಿದ್ಯಾರ್ಥಿ ಪರಿಷತ್) ಕಾರ್ಯವಾಗಿದೆ. ನಿಮ್ಮ ಕೆಲಸ ಉದ್ಯೋಗ ಕಲ್ಪಿಸುವುದಾಗಿದೆ. ಉದ್ಯೋಗದ ಸಂದರ್ಭಗಳನ್ನು ಒದಗಿಸುವುದಾಗಿದೆ.

ಮುಹತಮಿಮ್ ಉಮುಮಿ ಹುಝೂರ್(ಅ.ಬಿ.ಅ.) ಕೇಳಿದ ಮಾತಿಗೆ ಉತ್ತರಿಸುತ್ತ ಹೇಳಿದರು. ಜಲ್ಸದಲ್ಲಿ 50 ಖುದ್ದಾಮ್ Security duty ಮಾಡುತ್ತಿದ್ದರು. ಈಗ ಕೆಲವರು ಒಂದು ದಿವಸಕ್ಕಾಗಿ ಮರಳಿ ಹೋಗಿದ್ದಾರೆ. ಮತ್ತೆ ಮರಳಿ ಬರುವರು. ಹುಝೂರ್(ಅ.ಬಿ.ಅ.) ಹೇಳಿದರು. ಜರ್ಮನಿಯಿಂದಲೂ 5 ಖುದ್ಧಾಮ್ ರಕ್ಷಣಾ ಕರ್ತವ್ಯಕ್ಕಾಗಿ ಬಂದಿದ್ದರು.

ಮುಹತಮಿಮ್ ತರ್‌ಬಿಯತ್ ನೌಮಬಾಯೀನ್ ಹೇಳಿದರು. ಪ್ರಸ್ತುತ 6 ನೌಮಬಾಯೀನ್ ತರ್‌ಬಿಯತ್ ಪಡೆಯುತ್ತಿದ್ದಾರೆ. ಇದರಲ್ಲಿ ಸ್ಥಳೀಯ ಕ್ರೈಸ್ತ ಯುವಕರೊಬ್ಬರೂ ಸೇರಿರುತ್ತಾರೆ. ಹುಝೂರ್(ಅ.ಬಿ.ಅ.) ಹೇಳಿದರು. ಸ್ಥಳೀಯ ಡಚ್ ಜನರಿಗೆ ಸೂರ: ಫಾತಿಹ ಕಲಿಸಬೇಕು ಮತ್ತು ನಮಾಝ್ ಕಲಿಸಬೇಕು. ಎಲ್ಲರಿಗೂ ತರಬೇತಿ ನೀಡಬೇಕು ಮತ್ತು ವಿಧಿವತ್ತಾಗಿ ಜಮಾಅತಿನ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕು.

ಮುಹ್‌ತಮಿಮ್ ತಜ್‌ನೀದ್ ಹೇಳಿದರು. ನಮ್ಮ ತಜ್‌ನೀದ್ ದುಪ್ಪಟ್ಟು ಗೊಳ್ಳಲಿಕ್ಕಿದೆ. ನಮ್ಮ ಅರ್ಧದಷ್ಟು ಹೊಸ ಖುದ್ದಾಮ್‌ಗಳಾಗಿವೆ. ಆಗ ಹುಝೂರ್(ಅ.ಬಿ.ಅ.) ಹೇಳಿದರು. ಪಾಕಿಸ್ತಾನದಿಂದ ಬಂದವರಿಗೆ ತಮ್ಮ ಕಾರ್ಯಶೈಲಿಯಲ್ಲಿ ಹೊಂದುವಂತೆ ಮಾಡಿರಿ. ತಮ್ಮ ಸಮೀಪಕ್ಕೆ ಕರೆಸಿಕೊಳ್ಳಿ. ನಮಾಝ್ ಜೊತೆಗೆ ಜುಮಾಅದೊಂದಿಗೆ ಜೋಡಿಸಿ ಮತ್ತು ಸಮೀಪಕ್ಕೆ ಕರೆಸಿಕೊಳ್ಳಿ.

ಮುಹತಮಿಮ್ ತಹರೀಕ್ ಜದೀದ್ ಹೇಳಿದರು. 13 ಸಾವಿರ ಯೂರೋ ಖುದ್ದಾಮ್ ಸಂಗ್ರಹಿಸಿದ್ದಾರೆ. ಏಳೂವರೆ ಸಾವಿರ ಹಿಂದಿನ ವರ್ಷ ಟಾರ್ಗೆಟ್ ನೀಡಲಾಗಿತ್ತು. ಈಗ ಪ್ರಸಕ್ತ ವರ್ಷ ದ್ವಿಗುಣಗೊಳಿಸಲಾಗುವುದು.

ಉಪಾಧ್ಯಕ್ಷರು ಪ್ರಚಾರ ವಿಭಾಗ ಪರವಾಗಿ ಹೇಳಿದರು. ಹಿಂದಿನ ಎರಡು ಮೂರು ವರ್ಷಗಳಲ್ಲಿ ಖುದ್ದಾಮ್ ಡಚ್ ಭಾಷೆಯಲ್ಲಿ ಎಂಟು ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಇವುಗಳಲ್ಲಿ ದುಆ ಒಳಗೊಂಡ ಪುಸ್ತಕವು ಸೇರಿದೆ.

ಮುಹತಮಿಮ್ ಅತ್ಫಾಲ್ ತನ್ನ ವರದಿ ಪ್ರಸ್ತುತಪಡಿಸುತ್ತ ಹೇಳಿದರು. ಜಮಾಅತ್ತಿನ ತಜ್‌ನೀದಿನನ್ವಯ 121 ಅತ್ಫಾಲ್‌ಗಳಿದ್ದಾರೆ.

ಹುಝೂರ್(ಅ.ಬಿ.ಅ.) ಹೇಳಿದರು. ಯಾರದರು ಹೊಸ ತಿಫಲ್ ಬಂದರೆ ಅವನನ್ನು ಸೇರಿಸಿಕೊಳ್ಳುವುದು ನಿಮ್ಮ ಕೆಲಸವಾಗಿದೆ. ಜೊತೆ ಜೊತೆಯಲ್ಲಿಯೇ ಇಮ್ಮ ತಜ್‌ನೀದ್ ಕಾರ್ಯ ಪರಿಪೂರ್ಣ ಮಾಡಿಕೊಳ್ಳ ಬೇಕಾಗುತ್ತದೆ.

*(ಉಳಿದ ವರದಿ ಪುಟ ಸಂಖೆ 07 ರಲ್ಲಿ ಓದಿರಿ)*

ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:
**NATIONAL TOLL FREE**
**1800–103–2131**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.